ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 11 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 174 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಹೆಚ್.ಡಿ.ದೇವೇಗೌಡರ ಆರೋಗ್ಯ ವಿಚಾರಿಸಿದ ಸಾ.ರಾ.ಮಹೇಶ್



ಜೆಡಿಎಸ್ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರ ಆರೋಗ್ಯ ವಿಚಾರಿಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಮಹದೇವ್, ಅಶ್ವಿನ್ ಕುಮಾರ್ ಇದ್ದರು.

ಮುಂದಿನ ದಿನಗಳಲ್ಲಿ ಹಾಸನಾಂಬೆ ಸಾನ್ನಿಧ್ಯವೇ ಇರಲ್ಲ...



ಬ್ರಹ್ಮಾಂಡ ಗುರೂಜಿ ಭಯಾನಕ ಭವಿಷ್ಯ



ಹಾಸನ, ಅ.10– ಮುಂಬರುವ ದಿನಗಳಲ್ಲಿ ಹಾಸನಾಂಬೆ ಸಾನ್ನಿಧ್ಯವೇ ಇರುವುದಿಲ್ಲ ಎಂದು ಬ್ರಹ್ಮಾಂಡ ಗುರೂಜಿ ಭಯಾನಕ ಭವಿಷ್ಯ ನುಡಿದಿದ್ದಾರೆ.

ಹಾಸನದಲ್ಲಿ ಶುಕ್ರವಾರ ಹಾಸನಾಂಬೆಯ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವರ್ಷ ಹಾಸನಾಂಬೆಗೆ ಕೊನೆಯ ವರ್ಷವಾಗಿದ್ದು, ಮುಂದಿನ ವರ್ಷದಿಂದ ಅಮ್ಮನವರ ಸಾನ್ನಿಧ್ಯ ಇಲ್ಲಿ ಇರಲ್ಲ ಎಂದು ಹೇಳಿದ್ದಾರೆ. ಸಿದ್ದೇಶ್ವರನ ಕೃಪಾಶೀರ್ವಾದದಿಂದ ಮುಂದಿನ ದಿನಗಳಲ್ಲಿ ಮಹತ್ವದ ಬದಲಾವಣೆಗಳು ನಡೆಯಲಿವೆ. ರೇವಣ ಸಿದ್ದೇಶ್ವರ, ಹಾಸನದ ಸಿದ್ದೇಶ್ವರ, ಜೇನುಕಲ್ ಸಿದ್ದೇಶ್ವರ ಸೇರಿದಂತೆ ವಿವಿಧ ಸಿದ್ದೇಶ್ವರರ ಶಿವನ ಶಕ್ತಿ ಒಂದು ಕಡೆ ಸೇರಲಿದೆ. ವಿಶೇಷವಾಗಿ 2025 ರಿಂದ 2032ರ ಅವಧಿಯಲ್ಲಿ ಈ ಬದಲಾವಣೆಗಳು ಘಟಿಸಲಿವೆ. ಸಿದ್ದೇಶ್ವರ ಸಾನ್ನಿಧ್ಯ ತೆಗೆದಾಗ, ಇಲ್ಲಿ ಸೇರಿರುವ ಏಳು ಜನ ಅಕ್ಕ–ತಂಗಿಯರು ಸೇರಿ 'ಘಟಪ್ರಭ ಪರಿವರ್ತನೆ' ಎಂಬ ದೊಡ್ಡ ಬದಲಾವಣೆ ಆಗಲಿದೆ ಎಂದರು.

ಅಂತೆಯೇ, ಈ ಜಗತ್ಪ್ರಸಿದ್ಧ ಹಾಸನಾಂಬೆಯ ವೈಶಿಷ್ಟ್ಯತೆಯನ್ನು ಈ ಕೊನೆಯ ಅವಧಿಯಲ್ಲಿ ನಾವು ದರ್ಶನ ಮಾಡಿದೆವಲ್ಲ ಎಂದು ಸಂತೋಷ ಪಡುತ್ತೇವೆ. ಮುಂದಿನ ಅವಕಾಶಗಳು ನಮಗಲ್ಲ. ಯಾವ ಜನರಿಗೂ ಹಾಸನಾಂಬೆ ದರ್ಶನ ಆಗುವ ಅವಕಾಶಗಳು ಕಡಿಮೆ, ಅಡಚಣೆಗಳು ಎಷ್ಟು ಬರುತ್ತವೆ ಎಂಬುದನ್ನು ನೀವೇ ಮುಂದೆ ನೋಡುತ್ತೀರಿ ಎಂದು ಬ್ರಹ್ಮಾಂಡ ಗುರೂಜಿ ಹೇಳಿದರು.

ಮೈಸೂರಲ್ಲಿ ಭಾರೀ ಮಳೆ; ಧರೆಗುರುಳಿದ 10ಕ್ಕೂ ಅಧಿಕ ಮರ, 54ಕ್ಕೂ ಹೆಚ್ಚು ವಿದ್ಯುತ್ ಕಂಬ

ಮನೆಗಳಿಗೆ ನುಗ್ಗಿದ ನೀರು; ಉಕ್ಕಿ ಹರಿದ ಮ್ಯಾನ್‌ಹೋಲ್‌ಗಳು





ಮೈಸೂರು, ಅ.10(ಎಂಕೆ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಗುರುವಾರ ಸುರಿದ ಬಾರೀ ಮಳೆಗೆ 10ಕ್ಕೂ ಹೆಚ್ಚು ಮರಗಳು ಹಾಗೂ 54ಕ್ಕೂ ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, 25ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ.

ಬೆಳಗ್ಗೆ ಕೇವಲ ಒಂದು ಗಂಟೆ ಸುರಿದ ಜೋರು ಮಳೆಗೆ ಸುಭಾಷ್‌ನಗರದ 3ನೇ ಅಡ್ಡರಸ್ತೆ ಜಲಾವೃತ್ತಗೊಂಡು 10ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾದರೆ, ಕ್ಯಾತಮಾರನಹಳ್ಳಿ, ಸಾತಗಳ್ಳಿ, ಜೆಪಿ ನಗರ, ನಾಚನಹಳ್ಳಿ ಪಾಳ್ಯದ ನವೋದಯ ಬಡಾವಣೆ, ಉದಯಗಿರಿಯ ಹಲವೆಡೆ ಯುಜಿಡಿ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದು 15 ಮನೆಗಳಿಗೆ ಕೊಳಚೆ ನೀರು ಹರಿದಿದೆ.

ಹಾಗೆಯೇ ನಗರದ ರಾಮಸ್ವಾಮಿ ವೃತ್ತ, ಕೋರ್ಟ್ ಸಮೀಪ, ರಾಮಕೃಷ್ಣನಗರ ಕೆಬ್ಲಾಕ್, ಇಟ್ಟಿಗೆಗೂಡು, ಚಾಮರಾಜ ಡಬಲ್ ರೋಡ್, ಸರಸ್ವತಿಪುರಂ 6ನೇ ಮುಖ್ಯ ರಸ್ತೆಯ 19ನೇ ಕ್ರಾಸ್ ಬಳಿ ಮರಗಳು ಬುಡಸಮೇತ ನೆಲಕ್ಕುರುಳಿದ್ದು, ವಿವಿಧೆಡೆ ರೆಂಬೆ–ಕೊಂಬೆಗಳು ಮುರಿದಿರುವುದು ಸೇರಿ 10ಕ್ಕೂ ಹೆಚ್ಚು ಮರಗಳು ಉರುಳಿಬಿದ್ದಿವೆ.

54ಕ್ಕೂ ಅಧಿಕ ವಿದ್ಯುತ್ ಕಂಬ: ಗುರುವಾರ ಬೆಳಗ್ಗೆ ಮತ್ತು ರಾತ್ರಿ ಸುರಿದ ಮಳೆಗೆ ನಗರ ಹಾಗೂ ಜಿಲ್ಲೆ ಸೇರಿ 54 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ ದೇವಲಾಪುರದಲ್ಲಿ 8 ವಿದ್ಯುತ್ ಕಂಬಗಳು ಮುರಿದರೆ, ಬನ್ನೂರು ಸುತ್ತಮುತ್ತ 20, ಟಿ.ನರಸೀಪುರದಲ್ಲಿ 17, ಹುಣಸೂರಿನಲ್ಲಿ 7 ಹಾಗೂ ಸರಗೂರು ತಾಲೂಕು ವ್ಯಾಪ್ತಿಯಲ್ಲಿ 2 ಸೇರಿ ಒಟ್ಟು 54 ವಿದ್ಯುತ್ ಕಂಬಗಳು ಮುರಿದಿವೆ ಎಂದು ಚೆಸ್ಕಾಂ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಯಥಾಸ್ಥಿತಿಯತ್ತ ಸುಭಾಷ್‌ನಗರ...

ಗುರುವಾರ ಬೆಳಗ್ಗೆ 8 ಗಂಟೆ ಸುಮಾರಿಗೆ ಸುರಿದ ಧಾರಾಕಾರ ಮಳೆಗೆ ಸುಭಾಷ್‌ನಗರದ 3ನೇ ಅಡ್ಡ ರಸ್ತೆಯಲ್ಲಿರುವ ದೊಡ್ಡ ಮೋರಿ ತುಂಬಿ ಹರಿದು, 10ಕ್ಕೂ ಹೆಚ್ಚು ಮನೆಗಳಿಗೆ ಕೊಳಚೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು. ಬಳಿಕ ಇಡೀ ದಿನ ಕಾರ್ಯಾಚರಣೆ ನಡೆಸಿ, ಶುಕ್ರವಾರವೂ ಮೋರಿಯಲ್ಲಿ ಸಂಗ್ರಹವಾಗಿದ್ದ ಕಸ ವಿಲೇವಾರಿ ಹಾಗೂ ರಸ್ತೆಯಲ್ಲಿ ನಿಂತಿದ್ದ ಬೊಗ್ಗಡವನ್ನು ತೆರವು ಮಾಡಿರುವುದರಿಂದ ಸುಭಾಷ್‌ನಗರದಲ್ಲಿ ಪರಿಸ್ಥಿತಿ ಸುಧಾರಿಸಿದೆ.

ಬಾಲಕಿ ಅತ್ಯಾಚಾರ, ಹತ್ಯೆ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಲು ಆಗ್ರಹಿಸಿ ಪ್ರತಿಭಟನೆ

ಮೈಸೂರು, ಅ.10(ಎಂಕೆ)– ದಸರಾ ಸಂದರ್ಭದಲ್ಲಿ ಬಲೂನ್ ಮಾರಾಟಕ್ಕೆ ಬಡ ತಂದೆ–ತಾಯಿಯೊಂದಿಗೆ ಮೈಸೂರಿಗೆ ಬಂದಿದ್ದ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಹತ್ಯೆಗೈದ ಆರೋಪಿಗೆ ಗಲ್ಲು ಶಿಕ್ಷೆಗೆ ಆಗ್ರಹಿಸಿ ಗಂಧದಗುಡಿ ಫೌಂಡೇಶನ್ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು, ಕಾಮುಕರಿಗೆ ಶಿಕ್ಷೆ.. ಹೆಣ್ಣು ಮಕ್ಕಳಿಗೆ ರಕ್ಷೆ... ಘೋಷಣೆ ಕೂಗಿ ಅಪ್ರಾಪ್ತ ಬಾಲಕಿಯನ್ನು ಹತ್ಯೆಗೈದ ಆರೋಪಿಯನ್ನು ಗಲ್ಲಿಗೇರಿಸಬೇಕು. ಇಲ್ಲವೇ ಸಾರ್ವಜನಿಕವಾಗಿ ಗುಂಡಿಟ್ಟು ಕೊಲ್ಲಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಗಂಧದಗುಡಿ ಫೌಂಡೇಶನ್ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂತಹ ಘಟನೆ ನಡೆದಿರುವುದು ಅತ್ಯಂತ ಖಂಡನೀಯ. ಪೊಲೀಸರು ಆರೋಪಿಯನ್ನು ಬಂಧಿಸಿದ್ದರೂ ಆತನಿಗೆ ಶಿಕ್ಷೆಯಾಗಬೇಕು. ಇಂತಹ ಸಮಾಜಘಾತುಕರನ್ನು ಬದುಕಲು ಬಿಡಬಾರದು ಎಂದು ಆಗ್ರಹಿಸಿದರು.

ಗಂಧದಗುಡಿ ಫೌಂಡೇಶನ್‌ನ ಆರ್ಯನ್, ಯಶೋಧ, ಶ್ರೀನಾಥ್, ಐಶ್ವರ್ಯ, ತ್ರಿವೇಣಿ, ಸಿಂಧುವಳ್ಳಿ ಅಕ್ಬರ್, ಶ್ರೀನಿವಾಸ್, ಕಿರಣ್ ಮತ್ತಿತರರಿದ್ದರು.

ರೈತನ ಹೆಸರಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ ಟ್ರಾಕ್ಟರ್ ಖರೀದಿಸಿ ಬ್ಯಾಂಕ್ ಸಿಬ್ಬಂದಿ ವಂಚನೆ ಆರೋಪ

ಐಸಿಐಸಿಐ ಬ್ಯಾಂಕ್ ಎದುರು ರೈತರ ಪ್ರತಿಭಟನೆ

ಮೈಸೂರು, ಅ.10(ಎಂಕೆ)– ಐಸಿಐಸಿಐ ಬ್ಯಾಂಕ್‌ನಲ್ಲಿ ತಿ.ನರಸೀಪುರ ತಾಲೂಕು ಕೇತುಪುರದ ರೈತ ನಾಗರಾಜ್ ಹೆಸರಿನಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ ಟ್ರ್ಯಾಕ್ಟರ್ ಖರೀದಿ ಮಾಡಿ ಮೋಸ ಮಾಡಿದ್ದಾರೆಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಕಾಳಿದಾಸ ರಸ್ತೆಯಲ್ಲಿರುವ ಐಸಿಐಸಿಐ ಬ್ಯಾಂಕ್ ಎದುರು ಪ್ರತಿಭಟಿಸಲಾಯಿತು.

ವಿವಿ ಮೊಹಲ್ಲಾದ ಐಸಿಐಸಿಐ ಬ್ಯಾಂಕ್ ಶಾಖೆಯಿಂದ ಟಿ.ನರಸೀಪುರ ತಾಲೂಕಿನ ಕೇತುಪುರ ಗ್ರಾಮದ ನಾಗರಾಜು ಹೆಸರಿನಲ್ಲಿ ನಂಜನಗೂಡಿನ ಬಸವೇಶ್ವರ ಟ್ರಾಕ್ಟರ್ ಶೋರೂಂನಲ್ಲಿ ಟ್ರ್ಯಾಕ್ಟರ್ ಖರೀದಿಸಲಾಗಿದೆ. ಶಾಖೆಯ ಏಜೆಂಟ್, ಸಿಬ್ಬಂದಿ ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮ ವೆಸಗಿದ್ದಾರೆ ಎಂದು ದೂರಿದರು.

ನಾಗರಾಜ್ ಹೆಸರಿನಲ್ಲಿ ಬೇರೊಬ್ಬ ವ್ಯಕ್ತಿಗೆ ಟ್ರ್ಯಾಕ್ಟರ್ ನೀಡಲಾಗಿದೆ. ಸಾಲ ಮಂಜೂರಾತಿ ವೇಳೆ ನಾಗರಾಜ್ ಶಾಖೆಗೆ ಬಂದಿಲ್ಲ. ಖುದ್ದಾಗಿ ಬಂದು ಯಾವುದೇ ದಾಖಲೆಗಳನ್ನೂ ನೀಡಿಲ್ಲ. ಆದರೆ, ಬ್ಯಾಂಕ್ ಸಿಬ್ಬಂದಿ ಸುಳ್ಳು ದಾಖಲೆ ಸೃಷ್ಟಿಸಿ ಅಕ್ರಮ ವೆಸಗಿ ಮುಗ್ಧ ರೈತನ ಕುಟುಂಬವನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ ರೈತ ನಾಗರಾಜ್ ಕುಟುಂಬದಲ್ಲಿ ಕಲಹ ಉಂಟಾಗಿ ಗಂಡ–ಹೆಂಡತಿ, ಅಣ್ಣ–ತಮ್ಮಂದಿರೊಂದಿಗೆ ಮನಸ್ತಾಪ ಉಂಟಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಬಂದಿದ್ದಾರೆ. ಹೀಗಾಗಿ ಕೂಡಲೇ ಸಾಲವನ್ನು ವಜಾಗೊಳಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಐಸಿಐಸಿಐ ಬ್ಯಾಂಕ್ ವ್ಯವಸ್ಥಾಪಕ ಮುರುಳಿ, ಪ್ರತಿಭಟನಾ ನಿರತ ರೈತರ ಅಹವಾಲು ಆಲಿಸಿ, 15 ದಿನಗಳ ಕಾಲಾವಕಾಶ ನೀಡಿ. ಇದರ ಸಂಪೂರ್ಣ ವರದಿ ಪಡೆದು ಸಮಸ್ಯೆ ಬಗೆಹರಿಸುತ್ತೇನೆ ಎಂದು ಭರವಸೆ ನೀಡಿದರು. ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ ಸೇರಿದಂತೆ ಹಲವರು ಭಾಗವಹಿಸಿದ್ದರು

ಕಸದ ಸಮಸ್ಯೆ ನಿವಾರಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗೆ ಮನವಿ



ಜಯ ಕರ್ನಾಟಕ ಸಂಘಟನೆ ಮೈಸೂರು ನಗರ ಘಟಕದಿಂದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಅ.10– ಮೈಸೂರಿನ ನಿರ್ಮಲ ಆಸ್ಪತ್ರೆಯ ಹಿಂಭಾಗದಲ್ಲಿ ಖಾಸಗಿ ವ್ಯಕ್ತಿಗಳು ಬಾಡಿಗೆ ಆಟೋ, ಟೆಂಪೋ ವಾಹನಗಳಲ್ಲಿ ಕಸವನ್ನು ಅಕ್ರಮವಾಗಿ ತಂದು ರಾಶಿಯಾಗಿ ಹಾಕಿ, ಆಗಾಗ ಬೆಂಕಿ ಹಚ್ಚಲಾಗುತ್ತಿದೆ ಎಂದು ಜಯಕರ್ನಾಟಕ ಸಂಘಟನೆ ಮೈಸೂರು ನಗರ ಘಟಕದಿಂದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಅವರಿಗೆ ದೂರು ಸಲ್ಲಿಸಲಾಯಿತು.

ಇದರಿಂದ ಹೊಗೆ ಮತ್ತು ವಿಷಕಾರಿ ವಾಸನೆ ಸುತ್ತಮುತ್ತಲಿನ ಪ್ರದೇಶದಲ್ಲಿ ವ್ಯಾಪಿಸುತ್ತಿದೆ. ಪ್ಲಾಸ್ಟಿಕ್ ಮತ್ತು ವೈದ್ಯಕೀಯ ತ್ಯಾಜ್ಯಗಳಿಗೆ ಬೆಂಕಿ ಹಚ್ಚುತ್ತಿರುವುದರಿಂದ ಪರಿಸರದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದ್ದು, ಚಾಮುಂಡಿಬೆಟ್ಟಕ್ಕೂ ಬೆಂಕಿ ತಗುಲುವ ಅಪಾಯವಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳುವಂತೆ ಅವರು ತಮ್ಮ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ವೇಳೆ ಮೈಸೂರು ನಗರ ಅಧ್ಯಕ್ಷ ಹರ್ಷಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯ ಗೌಡ, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಸಂಜಯ್ ಸಿಂಗ್, ಜಿಲ್ಲಾ ಕಾರ್ಯದರ್ಶಿ ಸತೀಶ್ ಕುಮಾರ್, ನಗರ ಸಲಹೆಗಾರ ಫಣೀಶ್, ಕಾರ್ಯಕಾರಿ ಸಮಿತಿ ಸದಸ್ಯರಾದ ರಾಧಾ ಶಿವರಾಜ್, ಅಭಿಷೇಕ್, ನವೀನ್, ನಂದನ್ ಮತ್ತಿತರರು ಉಪಸ್ಥಿತರಿದ್ದರು.

ನಿಧನ

ಡಾ.ಎಂ.ಶಿವಕುಮಾರ್



ಮೈಸೂರು, ಅ. 10– ಮೈಸೂರಿನ ಆಲನಹಳ್ಳಿ ನಿವಾಸಿ ಡಾ. ಎಂ. ಶಿವಕುಮಾರ್ (72) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಅ.11) ಮಧ್ಯಾಹ್ನ 1 ಗಂಟೆಗೆ ಮೂಗೂರಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೇತ್ರಾವತಿ



ಮೈಸೂರು, ಅ.10–ನೀರಾವರಿ ಇಲಾಖೆ ಸಹಾಯಕ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಮೈಸೂರು ತಾಲೂಕು ಗೋಪಾಲಪುರದ ನಿವಾಸಿ ರಘು ಅವರ ಪತ್ನಿ ಬಿ.ನೇತ್ರಾವತಿ(27) ಗುರುವಾರ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಮೈಸೂರು ತಾಲೂಕು ಕೇರ್ಗಳ್ಳಿಯ ನಿವಾಸಿ ಬಾಲಚಂದ್ರ ಅವರ ಪುತ್ರಿಯಾದ ನೇತ್ರಾವತಿಯನ್ನು 9 ವರ್ಷಗಳ ಹಿಂದೆ ರಘು ಅವರಿಗೆ ವಿವಾಹ ಮಾಡಿಕೊಡಲಾಗಿತ್ತು. ದಿವಂಗತರು ಪತಿ, ಒಂದು ತಿಂಗಳ ಗಂಡು ಮಗು ಸೇರಿದಂತೆ ಇಬ್ಬರು ಪುತ್ರರು ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಗೋಪಾಲಪುರದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.10.2025 ಶನಿವಾರ, ಮಳೆ ನಕ್ಷತ್ರ: ಚಿತ್ತ 11.10.2025 ರಿಂದ 23.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಲಕ್ವ, ಪ್ಯಾರಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಮೂಲವ್ಯಾಧಿ/ಪೈಲ್ಸ್ ರೋಗದ ಚಿಕಿತ್ಸಾ ಶಿಬಿರ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಬಿಳಿಮುಟ್ಟು, ಮೂಗು ಕಟ್ಟುವುದು, ಮೂಗು ಸುರಿಯುವುದು, ಮೂಗಿನಿಂದ ರಕ್ತ ಬರುವುದು, ಮೂಗಿನಲ್ಲಿ ದುರ್ಮಾಂಸ, ಸೀನುವಿಕೆ, ಕೆಂಪು ಕಣ್ಣುಗಳು, ಮೂಗು, ಗಂಟಲು, ಕಣ್ಣುಗಳು ಮತ್ತು ಬಾಯಿಯಲ್ಲಿ ತುರಿಕೆ, ಮಹಿಳೆಯರ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ರಂಗರಾವ್ ಅಂಡ್ ಸನ್ಸ್ ಸಿಇಓ ಅರ್ಜುನ್ ರಂಗ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಎಸ್. ಶಿವಲಿಂಗಯ್ಯ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಫಾರ್ಮಸಿ ಕಾಲೇಜು :** ಟ್ರಾನ್ಸ್‌ಡರ್ಮಲ್ ಡ್ರಗ್ ಡೆಲಿವರಿ ಸಿಸ್ಟಮ್ಸ್, ಅಡ್ವಾನ್ಸಿಂಗ್ ಸ್ಕಿನ್ ಮೀಡಿಯೇಟೆಡ್ ಡ್ರಗ್ ಡೆಲಿವರಿ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಸ್ಥಳ: ಗೋಲ್ಡನ್ ಜ್ಯುಬಿಲಿ ಡಿಜಿಟಲ್ ಥಿಯೇಟರ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ :** 156ನೇ ಗಾಂಧಿ ಜಯಂತಿ ಆಚರಣೆ, ಸಾನ್ನಿಧ್ಯ : ಶ್ರೀಚಿದಾನಂದ ಸ್ವಾಮೀಜಿ, ಚಿಂತಕ ಪ್ರೊ. ಸಿ. ನಾಗಣ್ಣ ಅವರಿಂದ ಗಾಂಧೀಜಿ ದೃಷ್ಟಿಯಲ್ಲಿ ಜೀವನ ಕಲೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರೊ. ಎಂ.ಆರ್. ಜಯಪ್ರಕಾಶ್, ಡಾ. ಮಹೇಶ್ ದಳಪತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ

■ **ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ :** ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಅವರ 77ನೇ ಹುಟ್ಟುಹಬ್ಬ ಮತ್ತು ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಧ್ವನಿಕೊಟ್ಟ ಧಣಿ ಪ್ರಶಸ್ತಿ ಪ್ರದಾನ : ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಭಿನಂದನಾ ಭಾಷಣ : ಶಾಸಕ ತನ್ವೀರ್ ಸೇಠ್, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಮುಖ್ಯ ಅತಿಥಿಗಳು : ಮಾಜಿ ಸಚಿವ ಎಂ. ಶಿವಣ್ಣ, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ. ವೆಂಕಟೇಶ್, ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಎ.ಎಸ್. ಸತೀಶ್, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ :** ಸ್ವಚ್ಛತಾ ವಾಹನ ಚಾಲಕರ ರಾಜ್ಯಮಟ್ಟದ ಸಭೆ, ಉಪಸ್ಥಿತರು : ಮಾಜಿ ಮೇಯರ್ ನಾರಾಯಣ, ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಸ್ಥಳ: ಜಲದರ್ಶಿನಿ ಸಭಾಂಗಣ, ಮಧ್ಯಾಹ್ನ 12ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘ :** ಮಾಜಿ ವಿಧಾನ ಪರಿಷತ್ ಸದಸ್ಯ ಹಾಗೂ ಬೆಂಗಳೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರಾದ ಡಿ. ಮಾದೇಗೌಡರಿಗೆ ಸನ್ಮಾನ ಹಾಗೂ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಸಂಘದ ಅಧ್ಯಕ್ಷ ಬಿ.ಎ. ಶಿವಶಂಕರ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘದ ಆವರಣ, ಮಧ್ಯಾಹ್ನ 12ಕ್ಕೆ.

■ **ಸಾಧನಾ ಮಂದಿರ :** ಸರಸ್ವತಿ ಪೂಜಾ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ; ರಾತ್ರಿ 6 ರಿಂದ ಶ್ರೀ ಕೃಷ್ಣಮಂದಿರ, ಗೋಕುಲಂ 3ನೇ ಹಂತ; ರಾತ್ರಿ 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಹಳ್ಳಿ ಮಾಕಮ್ಮನವರ ದೇವಸ್ಥಾನ ಟ್ರಸ್ಟ್ :** ಶ್ರೀ ಬನ್ನಿ ಮಹಾಕಾಳೇಶ್ವರಿ ಶ್ರೀ ಆಯರಹಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮನವರ ಜಾತ್ರಾ ಮಹೋತ್ಸವ, ಸಂಜೆ 4ಕ್ಕೆ ಮಜ್ಜನ ಪೂಜೆ ಸ್ಥಳ: ದೇವಸ್ಥಾನ, ಕುರುಬಾರಹಳ್ಳಿ, ಸಿದ್ಧಾರ್ಥನಗರ.

■ **ಹಾ.ಮಾ.ನಾ. ಪ್ರತಿಷ್ಠಾನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ :** ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಕೆ. ನಾರಾಯಣಗೌಡ ಅವರಿಂದ ಭಾರತ ದೇಶದಲ್ಲಿ ಹಸಿರು ಕ್ರಾಂತಿ ಮತ್ತು ಆಹಾರ ಸುಸ್ಥಿರತೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಾ.ಮಾ.ನಾ. ಪ್ರತಿಷ್ಠಾನದ ಸದಸ್ಯ ಡಾ. ಪ್ರಧಾನ್ ಗುರುದತ್, ಸ್ಥಳ: ಭೌತವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಮಹಾಂತೇಶ್ವರ ಮಠದ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಎಂ. ಚಿನ್ನಸ್ವಾಮಿ, ನುಡಿನಮನ : ಹಿರಿಯ ಸಾಹಿತಿ ಎಂ.ಎ. ನೀಲಾಂಬಿಕಾ, ಸ್ಥಳ: ಚಿತ್ಕಲ ಪ್ರತಿಷ್ಠಾನ, ಅಕ್ಕಮಹಾದೇವಿ ವಿದ್ಯಾರ್ಥಿ ನಿಲಯ, ಆಲನಹಳ್ಳಿ, ಸಂಜೆ 4ಕ್ಕೆ

■ **ಭಾರತ ವಿಕಾಸ ಪರಿಷದ್, ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ, ಉದ್ಘಾಟನೆ : ನಗರ ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಬಹುಮಾನ ವಿತರಣೆ : ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಉಪಸ್ಥಿತರು : ರಾಮ್‌ಸನ್ಸ್ ಬೊಂಬೆಮನೆಯ ಆರ್.ಜಿ. ಸಿಂಗ್, ಭಾರತ ವಿಕಾಸ ಪರಿಷದ್ ಪ್ರಾಂತ್ಯಾಧ್ಯಕ್ಷ ಆರ್. ನಾಗಭೂಷಣ, ಅಧ್ಯಕ್ಷತೆ : ಭಾರತ ವಿಕಾಸ ಪರಿಷದ್, ಭಾರದ್ವಾಜ ಶಾಖೆಯ ಡಾ.ಬಿ.ಎನ್. ರಂಗನಾಥರಾವ್, ಸ್ಥಳ: ರಾಮ್‌ಸನ್ಸ್ ಹ್ಯಾಂಡಿಕ್ರಾಫ್ಟ್ ಸೇಲ್ಸ್ ಎಂಪೋರಿಯಂ, ಮೃಗಾಲಯ ಎದುರು, ಇಟ್ಟಿಗೆಗೂಡು, ಸಂಜೆ 4.30ಕ್ಕೆ

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 901, ಕಥೆ ಹೇಳುವವರು: ಕಾಳೀಹುಂಡಿ ಶಿವಕುಮಾರ್, ಲೆಕ್ಕ ಪರಿಶೋಧನಾಧಿಕಾರಿ, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಸಾಲಿಗ್ರಾಮ ತಾಲ್ಲೂಕು ಪಂಚಾಯಿತಿ, ಸ್ಥಳ: ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ, ದಿನ 4 ಟ್ರಿಪ್)
ಬೆ. 10 ರಿಂದ ರಾ.10 ರವರೆಗೆ: ದಸರಾ ವಸ್ತುಪ್ರದರ್ಶನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ – ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು: ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ದೇವಿ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ) ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್. ಭೈರಪ್ಪ ಅವರೊಂದಿಗೆ ಡಾ. ಪ್ರಧಾನ ಗುರುದತ್ತ ಹಾಗೂ ಎಂ.ಎಸ್.ಕೆ. ಪ್ರಭು ಅವರು ನಡೆಸಿದ್ದ ಸಂವಾದದ ಮೂರನೇ ಭಾಗ, 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಕಾಂಪೋಸ್ಟ್ ತಾಂತ್ರಿಕತೆಗಳನ್ನು ಕುರಿತು ಸಂವಾದ ಭಾಗವಹಿಸುತ್ತಾರೆ–ಚಾಮರಾಜನಗರ ತಾಲೂಕು, ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಎಂ.ಕೆ. ಶ್ರುತಿ ಹಾಗೂ ಯಳಂದೂರು ತಾಲೂಕು ದುಗ್ಗಟ್ಟಿ ಗ್ರಾಮದ ಮಹದೇವಸ್ವಾಮಿ, ಪ್ರಸ್ತುತಿ– ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಮಹೇಶ್ ಮಲ್ಲಿಕ್ ಹಾಗೂ ಅಮಿತ್ ಮಲ್ಲಿಕ್ ಅವರ ಯುಗಳ ವಯೋಲಿನ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಅಕ್ಟೋಬರ್ 11 ಶನಿವಾರ 2025
46
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 174 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಸಂಪುಟ ಪುನರ್ರಚನೆ ಪ್ರಯತ್ನಕ್ಕೆ ವರಿಷ್ಠರ ಬ್ರೇಕ್!

ಬಿಹಾರ ಚುನಾವಣೆವರೆಗೆ ಯಾವ ತೀರ್ಮಾನವಿಲ್ಲ; ಅಲ್ಲಿಯವರೆಗೂ ಯಾರೂ ದೆಹಲಿಯತ್ತ ಸುಳಿಯಬೇಡಿ!!

ಬೆಂಗಳೂರು, ಅ.10(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಪುನರ್ ರಚನೆ ಪ್ರಯತ್ನಕ್ಕೆ ಕಾಂಗ್ರೆಸ್ ವರಿಷ್ಠರು ಬ್ರೇಕ್ ಹಾಕಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣಾ ಫಲಿತಾಂಶ ನವೆಂಬರ್ 14ರಂದು ಪ್ರಕಟಗೊಳ್ಳುವ ವರೆಗೂ ಕರ್ನಾಟಕ ಕಾಂಗ್ರೆಸ್‌ನ ಯಾವ ನಾಯಕರೂ ದೆಹಲಿ ಕಡೆ ಮುಖ ಮಾಡುವುದು ಬೇಡ ಎಂದಿದ್ದಾರೆ.


ರಾಹುಲ್‌ಗಾಂಧಿ

ಚುನಾವಣಾ ಪ್ರಚಾರಕ್ಕೆ ಪಕ್ಷ ಯಾರನ್ನು ನಿಯೋಜಿಸುತ್ತದೋ ಅವರು ಇಂಡಿಯಾ ಮೈತ್ರಿ ಕೂಟದ ಅಭ್ಯರ್ಥಿಗಳ ಪರ ಮತ ಯಾಚಿಸಿ ಎಂದಿದೆ. ನವೆಂಬರ್‌ನಲ್ಲಿ ಕ್ರಾಂತಿ ಆಗುತ್ತದೆ ಎಂಬ ಚರ್ಚೆಗಳಿಗೆ ತೆರೆ ಎಳೆಯಲು ಸಿದ್ದರಾಮಯ್ಯ ತಮ್ಮ ಮಂತ್ರಿ ಮಂಡಲವನ್ನು ದೊಡ್ಡ ಪ್ರಮಾಣದಲ್ಲಿ ಪುನರ್ ರಚಿಸಲು ಕೈಹಾಕಿದ್ದರು.

ಈ ಉದ್ದೇಶಕ್ಕಾಗಿಯೇ ಸಿದ್ದರಾಮಯ್ಯ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಂಪರ್ಕಿಸಿ ಪುನರ್ ರಚನೆಗೆ ಅನುಮತಿ ಕೊಡಿಸುವಂತೆ ಮನವಿ ಮಾಡಿದ್ದರು. ಮಂತ್ರಿಮಂಡಲ ವಿಸ್ತರಣೆ ಅಥವಾ ಪುನರ್ ರಚನೆ ನಿಮ್ಮ ವಿವೇಚನೆಗೆ ಬಿಟ್ಟಿದ್ದು. ನೀವು ನಿರ್ಧಾರ ಕೈಗೊಳ್ಳುವುದಕ್ಕೂ ಮುನ್ನ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆ ಸಮಾಲೋಚನೆ ನಡೆಸಿ ಎಂದಿದ್ದರು.


ಸಿದ್ದರಾಮಯ್ಯ

ಇದೇ ಸಂದರ್ಭದಲ್ಲಿ ಸಚಿವರ ಕಾರ್ಯವೈಖರಿ, ಬಿಜೆಪಿ ಮತ್ತು ರಾಜ್ಯ ಗುತ್ತಿಗೆದಾರರು ಮಾಡುತ್ತಿರುವ ಆರೋಪಗಳ ಬಗ್ಗೆ ಹೆಚ್ಚಿನ ಗಮನ ಹರಿಸಿ, ಇದು ಪಕ್ಷ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರುತ್ತಿದೆ ಎಂದಿದ್ದರು.

ರಾಜ್ಯ ಗುತ್ತಿಗೆದಾರರ ಸಂಘ ಮಾಡಿರುವ ಕಮಿಷನ್ ಆರೋಪವನ್ನೇ ಬಿಜೆಪಿ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಅಸ್ತ್ರವನ್ನಾಗಿ ಮಾಡಿಕೊಳ್ಳುತ್ತಿದೆ. ನೀವು ಸಂಬಂಧಪಟ್ಟವರ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ. ಇದರಲ್ಲಿ ಸಚಿವರ ಪಾತ್ರವೋ, ಮಧ್ಯವರ್ತಿಗಳ ಪಾತ್ರವೋ ಎಂಬುದನ್ನು ಪತ್ತೆ ಮಾಡಿ

■ 6ನೇ ಪುಟಕ್ಕೆ

ಶೇ. 80 ಕಮಿಷನ್; ವರಿಷ್ಠರ ಛಾಟಿ!

ಬೆಂಗಳೂರು, ಅ. 10(ಕೆಎಂಶಿ)– ರಾಜ್ಯ ಗುತ್ತಿಗೆದಾರರ ಸಂಘ ಸರ್ಕಾರದ ವಿರುದ್ಧ ಶೇಕಡ 80 ಕಮೀಷನ್ ಆರೋಪ ಮಾಡಿರುವುದನ್ನು ಎಐಸಿಸಿ ಗಂಭೀರವಾಗಿ ಪರಿಗಣಿಸಿ ಸಿದ್ದರಾಮಯ್ಯ ಸರ್ಕಾರಕ್ಕೆ ಛಾಟಿ ಬೀಸಿದೆ.

ಗುತ್ತಿಗೆದಾರರ ಆರೋಪವನ್ನು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಗಂಭೀರವಾಗಿ ತೆಗೆದುಕೊಂಡು ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂದೇಶ ರವಾನಿಸಿದ್ದಾರೆ.

ಯಾವ ಮಂತ್ರಿಗಳು ಕಮಿಷನ್ ವ್ಯವಹಾರದಲ್ಲಿದ್ದಾರೆ ಎಂಬುದನ್ನು ನೀವು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ರಾಹುಲ್ ಸೂಚಿಸಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣಾ ಪ್ರಚಾರದ ಭರಾಟೆ ಆರಂಭಕ್ಕೂ ಮುನ್ನವೇ ನಿಮ್ಮ ಸಚಿವರ ಮೂಲಕ ಗುತ್ತಿಗೆದಾರರ

■ 6ನೇ ಪುಟಕ್ಕೆ

ರಾಜ್ಯೋತ್ಸವ ಪ್ರಶಸ್ತಿಗೆ 70 ಮಂದಿ ಆಯ್ಕೆಗೆ 64 ಜನರ ಒಳಗೊಂಡ ತಜ್ಞರ ಸಮಿತಿ!


ಬೆಂಗಳೂರು, ಅ. 10(ಕೆಎಂಶಿ)– ಪ್ರಸಕ್ತ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ 70 ಮಂದಿಯನ್ನು ಆಯ್ಕೆ ಮಾಡಲು ಸರ್ಕಾರ 64 ತಜ್ಞರ ಸಮಿತಿ ರಚಿಸಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅಧ್ಯಕ್ಷತೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವವರನ್ನು ಪ್ರಶಸ್ತಿ ಆಯ್ಕೆ ಸಮಿತಿಗೆ ನೇಮಕ ಮಾಡಲಾಗಿದೆ. ಸಮಿತಿಯಲ್ಲಿ ಚಲನಚಿತ್ರ ಕಲಾವಿದರಾದ ವಿ.ರವಿಚಂದ್ರನ್, ಗಿರಿಜಾ ಲೋಕೇಶ್, ಪರಿಸರ ತಜ್ಞ ಡಾ.ಯಲ್ಲಪ್ಪ ರೆಡ್ಡಿ,

■ 6ನೇ ಪುಟಕ್ಕೆ

ಮೈಸೂರಲ್ಲಿ ಬಾಲಕಿ ಹೊತ್ತೊಯ್ದು ಅತ್ಯಾಚಾರ–ಹತ್ಯೆ ಪ್ರಕರಣ

ಬಾಲಕಿಗೆ 19 ಬಾರಿ ಇರಿದಿದ್ದ ದುಷ್ಕರ್ಮಿ

ಮೈಸೂರು, ಅ.10(ಆರ್‌ಕೆ)– ಹೊಟ್ಟೆ ಪಾಡಿಗಾಗಿ ಬಲೂನ್ ಮಾರಲು ಗುಲ್ಬರ್ಗಾ (ಕಲಬುರಗಿ)ದಿಂದ ಪೋಷಕರೊಂದಿಗೆ ಬಂದಿದ್ದ ಅಪ್ರಾಪ್ತ ಬಾಲಕಿ ಅಪಹರಿಸಿ, ಆಕೆಯ ಮೇಲೆ ಅತ್ಯಾಚಾರವೆಸಗಿ, ಹತ್ಯೆಗೈದ ಆರೋಪಿ ಕಾರ್ತಿಕ್, ಆಕೆಗೆ 19 ಬಾರಿ ಇರಿದು ಭೀಕರವಾಗಿ ಕೊಲೆಗೈದಿದ್ದಾನೆ.


ಕಾರ್ತಿಕ್

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ಪೈಶಾಚಿಕ ಕೃತ್ಯ ವೆಸಗಿದ್ದ ಆರೋಪಿ ಕಾರ್ತಿಕ್‌ನನ್ನು ಬಂಧಿಸಿ, ವಿಚಾರಣೆಗೊಳಪಡಿಸಿದಾಗ ಭಯಂಕರ ಮಾಹಿತಿ ಹೊರ ಹಾಕಿದ್ದಾನೆ. ಗುರುವಾರ ಮುಂಜಾನೆ ಪೋಷಕರೊಂದಿಗೆ ಗಾಢ ನಿದ್ರೆಯಲ್ಲಿದ್ದ ಬಾಲಕಿಯನ್ನು ಅನತಿ ದೂರ ಹೊತ್ತೊಯ್ದು ಅತ್ಯಾಚಾರ ನಡೆಸಿದ ಬಳಿಕ ಆಕೆಯನ್ನು ಅತೀ ಭೀಕರವಾಗಿ 19 ಕಡೆ

■ 6ನೇ ಪುಟಕ್ಕೆ

ಡಾ.ಯತೀಂದ್ರ ವರ್ಗಾವಣೆ ಸಚಿವ; ಅವರಿಗೂ ಜನ ತೆರಿಗೆ ಕಟ್ಟಬೇಕಿದೆ!

- ಮಾಜಿ ಸಂಸದ ಪ್ರತಾಪ್ ಸಿಂಹ ಕಿಡಿ
- ಸಿಎಂ ನಳಪಾಕ್ ಕಾಫಿ, ಮೈಲಾರಿ ಹೋಟೆಲ್ ದೋಸೆ ತಿನ್ನಲಷ್ಟೇ ಭದ್ರತೆಗೆ ಪೊಲೀಸರಿದ್ದಾರೆ!
- ಸಚಿವ ಮಹದೇವಪ್ಪರದ್ದು ಬರೀ ಸಂವಿಧಾನ ಪೀಠಿಕೆ ಓದಿಸುವುದೇ ಆಯ್ತು...
- ಉಕ್ರೇನ್, ರಷ್ಯಾ ಯುದ್ಧ, ಟ್ರಂಪ್‌ಗಳ ಬಗ್ಗೆ ಮಾತನಾಡುವ ಕೂಗುಮಾರಿಗಳೆಲ್ಲಿದ್ದಾರೆ!

ಮೈಸೂರು, ಅ.10(ಎಂಟಿವೈ)– ರಾಜ್ಯದ ಪೊಲೀಸರಲ್ಲಿ ದಕ್ಷತೆ ಇದೆ. ಆದರೆ, ಕೆಲಸ ಮಾಡಲು ಅವರಿಗೆ ಮುಕ್ತ ವಾತಾವರಣ ಇಲ್ಲ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಕಿಡಿಕಾರಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕೇವಲ ಸಂವಿಧಾನದ ಪೀಠಿಕೆ ಓದಿಸಿಕೊಂಡು ತಿರುಗಾಡುತ್ತಿದ್ದಾರೆ. ಏನು ಕೆಲಸ ಮಾಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ನಳಪಾಕ್‌ನಲ್ಲಿ ಕಾಫಿ ಕುಡಿಯಲು, ಮೈಲಾರಿ ಹೋಟೆಲ್‌ನಲ್ಲಿ ದೋಸೆ ತಿನ್ನಲು ಬಂದಾಗ ಭದ್ರತೆಗಾಗಿ ಪೊಲೀಸರನ್ನು ನಿಲ್ಲಿಸುವಂತಹ ಸ್ಥಿತಿ ನಿರ್ಮಾಣವಾಗಿದೆ ಅಲ್ಲದೆ, ಮೈಸೂರು ವಿಮಾನ ನಿಲ್ದಾಣಕ್ಕೆ ಬಂದಾಗ ಸೆಲ್ಯೂಟ್ ಹೊಡೆಸಿಕೊಳ್ಳಲು ಪೊಲೀಸರನ್ನು ಬಳಸಿಕೊಳ್ಳುತ್ತಿದ್ದಾರೆ. ಹಕ್ಕಿಪಿಕ್ಕಿ

■ 6ನೇ ಪುಟಕ್ಕೆ

ಸಿದ್ದರಾಮಯ್ಯರಿಗೆ ತವರು ಜಿಲ್ಲೆಯ ಜನರ ಬಗ್ಗೆ ಕಾಳಜಿಯೇ ಇಲ್ಲ

- ಸಂಸದ ಯದುವೀರ್ ತೀವ್ರ ಬೇಸರ
- ಮೈಸೂರು ಪೊಲೀಸ್ ವ್ಯವಸ್ಥೆ ಸಂಪೂರ್ಣ ಕುಸಿದಿದೆ
- ಈ ಬಾರಿ ನಡೆದದ್ದು ಕಾಂಗ್ರೆಸ್ ಕುಟುಂಬಸ್ಥರ ದಸರಾ!


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಅ.10(ಎಂಟಿವೈ)– ರಾಜ್ಯದಲ್ಲಿ ಆಡಳಿತ ಕುಸಿದಿದೆ. ಪೊಲೀಸ್ ವ್ಯವಸ್ಥೆಯಂತೂ ಹಾಳಾಗಿದ್ದು, ಕೊಲೆ–ಸುಲಿಗೆ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿವೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪಿಸಿದ್ದಾರೆ.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಇತ್ತೀಚೆಗೆ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚುನಾವಣೆ ಸಂದರ್ಭದಲ್ಲಿ ಮಾತ್ರ ತವರು ಜಿಲ್ಲೆ ಅನ್ನುತ್ತಾರೆ. ಅಪರಾಧ ಕೃತ್ಯಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ, ಅದಕ್ಕೆ ಕಡಿವಾಣ ಹಾಕಲು ಮುಂದಾಗುತ್ತಿಲ್ಲ. ತವರು ಜಿಲ್ಲೆ, ಪ್ರತಿಷ್ಠೆ ಬಗ್ಗೆ ಮಾತನಾಡುವ ಸಿದ್ದರಾಮಯ್ಯ,

■ 6ನೇ ಪುಟಕ್ಕೆ

ಇಂದು ಅಧಿಕಾರಿಗಳ ಸಭೆ ಕರೆದ ಸಿಎಂ ಸಿದ್ದರಾಮಯ್ಯ

ಮೈಸೂರು, ಅ10– ಗಿಲ್ಕಿ ವೆಂಕಟೇಶ್ ಮರ್ಡರ್, ದಸರಾಗೆ ಬಲೂನು ಮಾರಲು ಬಂದಿದ್ದ ಬಡ ಬಾಲಕಿಯ ಅತ್ಯಾಚಾರ ಮತ್ತು ಕೊಲೆ ಸೇರಿ ಹಲವು ಅಪರಾಧ ಕೃತ್ಯಗಳು ಕಳೆದ ಕೆಲ ದಿನಗಳಿಂದ ಮೈಸೂರಲ್ಲಿ ಮೇಲಿಂದ ಮೇಲೆ ನಡೆಯುತ್ತಿವೆ. ಈ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಳೆ(ಅ.11) ಸಂಜೆ ಹಿರಿಯ ಅಧಿಕಾರಿಗಳ ಜೊತೆ ಮೈಸೂರಲ್ಲಿ ಸಭೆ ಕರೆದಿದ್ದಾರೆ. ಮುಖ್ಯಮಂತ್ರಿಗಳ ಮೈಸೂರು ಪ್ರವಾಸ ಪಟ್ಟಿ ಬಿಡುಗಡೆಯಾಗಿದ್ದು, ನಾಳೆ ರಾತ್ರಿ 7.25ಕ್ಕೆ ಮೈಸೂರಿಗೆ ತಲುಪಲಿದ್ದಾರೆ. ಕೊಲೆ ಪ್ರಕರಣ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆಯಲಿರುವ ಸಿದ್ದರಾಮಯ್ಯ ಬಳಿಕ ಖಾಸಗಿ ಕಾರ್ಯಕ್ರಮ ಮುಗಿಸಿ ಬೆಂಗಳೂರಿಗೆ ಹಿಂದಿರುಗಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಅತ್ತೆ : ಏನಮ್ಮ? ಚಪಾತಿ ಹಿಟ್ಟಿನ ಮೇಲೆ 'ದೇವರ ಘಂಟೆ' ಯಾಕೆ ಇಟ್ಟಿದ್ದೀಯಾ?

ಸೊಸೆ : ಅಡುಗೆ ಬುಕ್‌ನಲ್ಲಿ ಕೊಟ್ಟಿದ್ದಾರೆ. ಹಿಟ್ಟು ಕಲಸಿ ಒಂದು ಘಂಟೆ ಇಡಿ ಅಂತ!

ಮೈಸೂರು ಮಿತ್ರ

ಶನಿವಾರ, 11 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಕಾಲ ಹಿಂದಕ್ಕೆ ಸಾಗುವುದಿಲ್ಲ. ಆದರೆ ಅದರ ಜತೆ ಸಾಗದೇ ಇದ್ದರೆ ನಾವು ನಿಂತಲ್ಲೇ ನಿಲ್ಲಬೇಕಾಗುತ್ತದೆ. – ಶಿವರಾಮ ಕಾರಂತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಪಿಗೆ ಹೋಗುವುದಕ್ಕಿಂತ, ಕೊಂಪೆಯಲ್ಲಿರುವುದೇ ಲೇಸು.

ನಿಮ್ಮ ಪತ್ರಗಳು

ಚಾಮುಂಡಿ ಬೆಟ್ಟದಲ್ಲಿ ಇದೆಂತಹ ಅವ್ಯವಸ್ಥೆ?

ಮಾನ್ಯರೆ,

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ದಿನೇ ದಿನೆ ಭಕ್ತಾದಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದನ್ನೆ ಬಂಡವಾಳ ಮಾಡಿಕೊಂಡಿರುವ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರವು ಈ ಮೊದಲು ಇದ್ದ 220 ರೂ.ಗಳ ಪುಷ್ಪಾರ್ಚನೆ ಇ– ಸೇವೆಯನ್ನು ಆಷಾಢ ನಂತರ ನಿಲ್ಲಿಸಿ 550 ರೂ.ಗಳ ಏಕಾದಶಾವರ ರುದ್ರಾಭಿಷೇಕ ಪೋರ್ಟಲ್ ಅನ್ನು ಮಾತ್ರ ಆರಂಭಿಸಿದ್ದು, ಇದರ ಬಗ್ಗೆ ಇಲ್ಲಿಂಯವರೆಗೂ ಯಾರಿಗೂ ಹಾಗೂ ಎಲ್ಲಿಂಯೂ ಮಾಹಿತಿಯನ್ನು ನೀಡದೇ ನಿರ್ಲಕ್ಷ್ಯ ತೋರಿದ್ದಾರೆ.

ಈ ಹಣಕ್ಕೆ ಸರಿಯಾಗಿ ವ್ಯವಸ್ಥೆಯನ್ನಾದರೂ ಮಾಡುತ್ತಾರೆಯೆ ಎಂದರೆ ಅದೂ ಸಹ ಇಲ್ಲ. 30 ರೂ. ಹಾಗೂ 100 ರೂ. ಟಿಕೆಟ್ ವ್ಯವಸ್ಥೆ ಮತ್ತು ಉಚಿತ ಪ್ರವೇಶ ವ್ಯವಸ್ಥೆ ಮೂಲಕ ಭಕ್ತರನ್ನು ಒಳಗೆ ಬಿಡಲಾಗುತ್ತದೆ. ಇದರೊಂದಿಗೆ ದೇವಾಲಯ ಮುಖ್ಯದ್ವಾರದಲ್ಲಿ ರಾಜಕೀಯ ಪುಡಾರಿಗಳ ಹಾಗೂ ಶಾಸಕ, ಮಂತ್ರಿಗಳ ಚೇಲಾಗಳು, ಕೆಲ ಅಧಿಕಾರಿಗಳ ಕುಟುಂಬಗಳಿಗೆ ಉಚಿತವಾಗಿ ನೇರವಾಗಿ ಬಿಡಲಾಗುತ್ತದೆ.

ಏಕಪಕ್ಷೀಯ ನಿರ್ಧಾರವನ್ನು ತೆಗೆದುಕೊಳ್ಳುವ ಮುನ್ನಾ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಭಕ್ತಾದಿಗಳ ಹಣವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳಬೇಕು.

ಅಧಿಕಾರಿಗಳ ಮಂಡಳಿಯು ದುಡ್ಡು ಮಾಡುವ ದಂಧೆಯನ್ನು ನಿಲ್ಲಿಸಬೇಕು. ಈ ಮೊದಲು ಇದ್ದ 220 ರೂ.ಗಳ ಅಭಿಷೇಕ ಪೋರ್ಟಲ್ ಅನ್ನು ಮತ್ತೆ ಆರಂಭಿಸಬೇಕು ಮತ್ತು ಪ್ರಸ್ತುತ ಇರುವ ಅವ್ಯವಸ್ಥೆಯನ್ನು ಸರಿಪಡಿಸಬೇಕಾಗಿದೆ.

30 ರೂ. ಟಿಕೆಟ್ ಪಡೆದು 3 ರಿಂದ 4 ಗಂಟೆಗಳ ಕಾಲ ಸರತಿ ಸಾಲಿನಲ್ಲಿ ನಿಂತು ಬಂದರೆ, ದೇವಸ್ಥಾನದ ಮುಂಭಾಗ ಸೆಕ್ಯೂರಿಟಿ ಹಾಗೂ ಪೊಲೀಸ್ ಪೇದೆಗೆ ಕೈ ಬಿಸಿ ಮಾಡಿದರೆ ಹಾಗೂ ಇಲಾಖೆಗಳಿಂದ ಕರೆ ಮಾಡಿಸಿದರೆ ನೇರವಾಗಿ ಬಿಡಲಾಗುತ್ತದೆ.

ಇದೆಲ್ಲದಕ್ಕಿಂತ ಮುಂಚಿತವಾಗಿ ಟಿಕೆಟ್ ಕೌಂಟರ್ ಬಳಿ ಜನರ ಸಾಲಿಗಿಂತ ಹೆಚ್ಚಾಗಿ ದೇವಸ್ಥಾನದಿಂದ ಹೊರ ಬರುವ ಗೇಟ್ ಬಳಿಯೇ ಹೆಚ್ಚಾಗಿ ಜನರು ನಿಂತಿರುತ್ತಾರೆ. ಕಾರಣ ಕೆಲವು ಟ್ರಾಫಿಕ್ ಪೋಲೀಸರ ಹೆಸರು ಬಳಸಿಕೊಂಡು ಮತ್ತು ಕೆಲವು ಅಧಿಕಾರಿಗಳ ಹೆಸರು, ಚಾಮುಂಡಿ ಬೆಟ್ಟದ ಪ್ರಾಧಿಕಾರದ ಹೆಸರು ಮತ್ತು ಸೆಕ್ಯೂರಿಟಿಗಳ ಕಡೆಯವರು ಹೀಗೆ ನಾನಾ ಅಧಿಕಾರಿಗಳ ಹೆಸರು ಬಳಸಿಕೊಂಡು ಒಂದು ದೂರವಾಣಿ ಕರೆಯಿಂದಾಗಿ ಹೊರಗಡೆ ಬರುವ ದ್ವಾರದಿಂದಲೂ ದೇವಸ್ಥಾನಕ್ಕೆ ದಾರಿ ಮಾಡಿಕೊಡುವುದು ಎಲ್ಲರಿಗೂ ಕಣ್ಣಿಗೂ ಕಾಣಿಸುವಂತಿದ್ದರೂ ಸಹ ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದ ಮಂಡಳಿಯಾಗಲಿ, ಸರ್ಕಾರವಾಗಲಿ ಗಮನವಹಿಸದೇ ಇರುವುದು ವಿಪರ್ಯಾಸವೇ ಸರಿ. ಒಟ್ಟಿನಲ್ಲಿ ಚಾಮುಂಡಿಬೆಟ್ಟದಲ್ಲಿ ಅವ್ಯವಸ್ಥೆ ತಾಂಡವವಾಡುತ್ತಿದ್ದು, ಸಂಬಂಧಪಟ್ಟವರು ಗಮನಹರಿಸಬೇಕಾಗಿದೆ.


–ಕೆ. ವಿವೇಕ್‌ಗೌಡ, ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿ, ಮೈಸೂರು.

ರಾಕೇಶ್ ಕಿಶೋರ್‌ಗೆ ಕಠಿಣ ಶಿಕ್ಷೆಯಾಗಲಿ

ಮಾನ್ಯರೆ,

ಭಾರತದ ಸಂವಿಧಾನವು ಇಡೀ ವಿಶ್ವಕ್ಕೆ ಮಾದರಿಯಾಗಿದ್ದು, ವಿದೇಶಗಳಲ್ಲೂ ಸಹ ಭಾರತ ಸಂವಿಧಾನದ ಶ್ರೇಷ್ಠತೆ ಬಗ್ಗೆ ಅನೇಕರು ಕೊಂಡಾಡಿದ್ದಾರೆ. ಸಂವಿಧಾನದ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯ ಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಕರ್ತವ್ಯದಲ್ಲಿರುವಾಗಲೇ ರಾಕೇಶ್ ಕಿಶೋರ್ ಎಂಬ ವಕೀಲರೊಬ್ಬರು ಶೂ ಎಸೆಯುವ ಪ್ರಯತ್ನ ಮಾಡಿರುವುದು ಖಂಡನೀಯ. ಈ ವಿಷಯದಿಂದ ದೇಶವೇ ತಲೆಬಾಗುವಂತಾಗಿದೆ. ಇಂತಹ ವಿಷಯಗಳನ್ನು ಗಮನಿಸಿದರೆ ಮುಖ್ಯ ನ್ಯಾಯಾಧೀಶರಿಗೆ ಹೀಗಾದರೇ ಇನ್ನೂ ಸಾರ್ವಜನಿಕರ ಕಥೆ ಏನು ಎಂಬಂತಾಗಿದೆ. ಕರ್ತವ್ಯ ನಿರ್ವಹಿಸುತ್ತಿರುವ ನ್ಯಾಯಾಧೀಶರಿಗೆ ಈ ರೀತಿಯ ವಿಕೃತ ಮನಸ್ಸಿನಿಂದ ವರ್ತಿಸಿರುವ ವಕೀಲರಿಗೆ ಕಾನೂನಿನ ಚೌಕಟ್ಟಿನಲ್ಲಿ ಕಠಿಣವಾದ ಕ್ರಮಗಳನ್ನು ಕೈಗೊಂಡು ಇವರ ವಕೀಲತ್ವವನ್ನು ರದ್ದುಗೊಳಿಸಬೇಕು. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ನಡೆದುಕೊಳ್ಳುವುದರ ಮೂಲಕ ಭಾರತ ಸಂವಿಧಾನಕ್ಕೆ ಬದ್ಧತೆಯಾಗಿ ಸುಪ್ರೀಂಕೋರ್ಟ್ ಮತ್ತು ಮುಖ್ಯ ನ್ಯಾಯಮೂರ್ತಿಗಳಿಗೆ ಗೌರವ ಕೊಡುವುದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯವಾಗಿರಬೇಕು. –ನಾಗೇಶ್, ಮಾನಸಗಂಗೋತ್ರಿ, ಮೈಸೂರು

ದೇವೇಗೌಡರು ಶೀಘ್ರ ಗುಣಮುಖರಾಗಲಿ



ಮಾನ್ಯರೆ,

ಮಾಜಿ ಪ್ರಧಾನಿ, ಮಣ್ಣಿನ ಮಗ ಹೆಚ್. ಡಿ. ದೇವೇಗೌಡರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದೇವೇಗೌಡರು ರಾಜ್ಯಸಭಾ ಸದಸ್ಯರಾಗಿದ್ದಾರೆ. ಇಡೀ ದೇಶದಲ್ಲಿ ಒಳ್ಳೆಯ ಮಾಜಿ ಪ್ರಧಾನಿ ಎಂಬ ಬಿರುದು ಪಡೆದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ನೀರಾವರಿ ಪಿತಾಮಹರಾಗಿದ್ದಾರೆ. ತಾಯಿ ಚಾಮುಂಡೇಶ್ವರಿ ದೇವಿ, ಹಾಸನಾಂಬ ದೇವಿ ಇವರಿಗೆ ಆರೋಗ್ಯ ಕರುಣಿಸಲೆಂದು ಇಡೀ ಕರ್ನಾಟಕ ಜನತೆ ಹಲವು ದೇವಾಲಯಗಳಲ್ಲಿ ಪೂಜೆ ಪುರಸ್ಕಾರಗಳನ್ನು ಮಾಡುತ್ತಿದ್ದಾರೆ. ದೇವೇಗೌಡರು ಶೀಘ್ರ ಗುಣಮುಖರಾಗಿ ಬರಲಿ ಎಂಬುದು ನಮ್ಮೆಲ್ಲರ ಆಶಯ

–ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ. ಕೋಟೆ ತಾ.

ದುರ್ಬಲ ರಸ್ತೆ ಬದಿ ಮರಗಳ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ರಸ್ತೆ ಬದಿಯ ಇಕ್ಕೆಲಗಳಲ್ಲಿ ಶುದ್ಧವಾದ ಗಾಳಿ ಮತ್ತು ಪರಿಸರ ಮಾಲಿನ್ಯ ವನ್ನು ತಡೆಯಲು ಮರಗಳನ್ನು ಬೆಳೆಸಿ ಕಾಪಾಡಿರುವುದು ಪ್ರಶಂಸನೀಯ. ಆದರೆ ತುಂಬಾ ಹಳೆಯದಾದ ದುರ್ಬಲವಾಗಿರುವ ಮರಗಳನ್ನು ತೆರವುಗೊಳಿಸಿ, ಹೊಸ ಸಸಿಗಳನ್ನು ನೆಡುವುದು ನಮ್ಮ ಜವಾಬ್ದಾರಿಯಲ್ಲವೇ?

ಬೆಂಗಳೂರು ನಗರ ಮತ್ತು ಇತರೆ ನಗರಗಳಲ್ಲಿ ಮರದ ಕೊಂಬೆ ಅಥವಾ ಮರಗಳು ವಾಹನಗಳ ಮೇಲೆ, ಶಾಲೆಗೆ ಹೋಗುವ ಮಕ್ಕಳ ಮೇಲೆ ಬಿದ್ದು ಅವಘಡಗಳಾಗಿವೆ. ಇದಕ್ಕೆ ಸರಕಾರ ಕೊಡುವ ಪರಿಹಾರವೇ ಅವರ ದುಃಖವನ್ನು ಹೋಗಲಾಡಿಸುತ್ತದೆಯೇ? ಅವರ ತಂದೆ ತಾಯಿಗಳ ಕಷ್ಟಗಳನ್ನು, ಕುಟುಂಬಸ್ಥರ ಗೋಳನ್ನು ಯಾರು ಪರಿಹರಿಸುತ್ತಾರೆ. ಇದಕ್ಕೆ ಪರಿಸರವಾದಿಗಳು ಮತ್ತು ಸರಕಾರವು ಹಳೆಯದಾದ ಮರಗಳನ್ನು ತೆರವುಗೊಳಿಸಿ ಹೊಸ ಗಿಡಗಳನ್ನು ನೆಡುವ ಕೆಲಸ ಆಗಬೇಕು.

–ಎ.ವಿ. ರಾಜಶೇಖರ, ಹಿರಿಯ ನಾಗರಿಕರು, ಹೆಬ್ಬಾಳು 2ನೇ ಹಂತ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಸಂಸ್ಕಾರರಹಿತ ಶಿಕ್ಷಣದಿಂದೇನು ಫಲ...!



"ಶೇಕಡ ನೂರು ಅಂಕ ಪಡೆದ ಮಕ್ಕಳು ಸಮಾಜಕ್ಕೆ ಎಷ್ಟು ಮೌಲ್ಯವುಳ್ಳವರಾಗಿರುತ್ತಾರೆ? ಹಾಲು ಎಲ್ಲಿಂದ ಬರುತ್ತದೆ ಎಂದರೆ ನಂದಿನಿ ಬೂತಿನಿಂದ ಎಂದು ಹೇಳುವಷ್ಟರ ಮಟ್ಟಿಗೆ ಇಂದಿನ ಮಕ್ಕಳಲ್ಲಿ ಸಾಮಾನ್ಯ ಜ್ಞಾನ ಬೆಳೆದಿದೆ ಎಂಬುದು ಗಂಭೀರವಾಗಿ ಆಲೋಚಿಸಬೇಕಾದ ವಿಷಯವಾಗಿದೆ. ಇದರ ಪರಿಣಾಮವಾಗಿಯೇ ಮಕ್ಕಳು ಇಂದು ನಮ್ಮ ಭಾರತೀಯ ಸಂಸ್ಕೃತಿಯ ಬಗ್ಗೆ ಏನೂ ತಿಳಿದಿಲ್ಲ. ದೇಶ, ದೇಶ ಭಕ್ತಿ ಬೆಳೆಸಬೇಕಾದ ಶೈಕ್ಷಣಿಕ ಸಂಸ್ಥೆಗಳು ಜವಾಬ್ದಾರಿ ಮರೆತಿವೆ. ಇಂತಹ ಮಕ್ಕಳಿಗೆ ಹಬ್ಬಗಳು, ನಮ್ಮ ಆಚಾರ–ವಿಚಾರಗಳು ಏನು? ಎಂಬುದೇ ಗೊತ್ತಿಲ್ಲ.

ಇತ್ತೀಚೆಗೆ ಒಂದಷ್ಟು ಸ್ನೇಹಿತರು, ಸಮಾನ ಮನಸ್ಕರು ಸೇರಿ ಚರ್ಚಿಸಿದ ವಿಷಯವೆಂದರೆ ನಮ್ಮ ಹಬ್ಬಗಳ ಆಚರಣೆಯ ಹಿಂದೆ ವೈಜ್ಞಾನಿಕ ಅಂಶಗಳು ಇವೆಯೇ ಎಂದು. ಈ ವಿಷಯವಾಗಿ ಮಾತನಾಡಿದ ಒಬ್ಬೊಬ್ಬರು ನಾವು ಇಂದು ಆಚರಿಸುತ್ತಿರುವ ಒಂದೊಂದು ಹಬ್ಬದ ಬಗ್ಗೆ ಹಾಗೂ ಅದರಲ್ಲಿನ ವೈಜ್ಞಾನಿಕ ಅಂಶಗಳ ಬಗ್ಗೆ ಪ್ರಸ್ತಾಪಿಸಿದರು. ಆದರೆ ಎಲ್ಲರ ಮಾತಿನಲ್ಲೂ ಒಂದು ಬೇಸರದ ಅಂಶ ಕಂಡು ಬಂದಿತು. ಅದೆಂದರೆ ಈ ಹಬ್ಬಗಳ ಆಚರಣೆಯು ಅದೇಕೋ ಹಿಂದಿನಂತೆ ಇಲ್ಲ. ಈಗ ಸಂಭ್ರಮವೇ ಇಲ್ಲ. ನಾವೆಲ್ಲಾ ಚಿಕ್ಕವರಿದ್ದಾಗ ಹಬ್ಬಗಳು ಬಂತು ಎಂದರೆ ಎಷ್ಟೊಂದು ಸಂಭ್ರಮ ಇರುತ್ತಿತ್ತು. ಹಬ್ಬ ಬರುವುದಕ್ಕೆ ವಾರಗಟ್ಟಲೆ ಮುಂಚೆಯೇ ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದೆವು. ಮನೆಯನ್ನು ಚೊಕ್ಕಟ ಮಾಡುವುದು, ಮನೆಗೆ ಸುಣ್ಣ–ಬಣ್ಣ ಮಾಡಿಸುತ್ತಿದ್ದುದು, ಹಬ್ಬದ ದಿನ ಮೈಗೆಲ್ಲಾ ಎಳ್ಳೆಣ್ಣೆ ಹಚ್ಚಿಕೊಂಡು ಸ್ನಾನ ಮಾಡುತ್ತಿದ್ದುದು, ಹಬ್ಬಕ್ಕೆ ಹೊಸ ಬಟ್ಟೆ ಧರಿಸುತ್ತಿದ್ದುದು, ಹಬ್ಬದ ದಿನ ಮನೆಯಲ್ಲಿ ಪೂಜೆಯಾದ ಮೇಲೆ ಹಿರಿಯರಿಗೆ ನಮಸ್ಕರಿಸುತ್ತಿದ್ದುದು, ದೇವಾಲಯಕ್ಕೆ ಹೋಗುತ್ತಿದ್ದುದು ಇವೆಲ್ಲವನ್ನು ನೆನಪಿಸಿಕೊಂಡು, ಇಂದಿನ ಮಕ್ಕಳಿಗೆ ಈ ಬಗ್ಗೆ ಗೊತ್ತೇ ಇಲ್ಲ. ಅವರಲ್ಲಿ ಹಬ್ಬದ ದಿನವೂ ಯಾವುದೇ ಸಡಗರ ಕಾಣಿಸುತ್ತಿಲ್ಲ. ಈಗಂತೂ ದೇವಸ್ಥಾನಕ್ಕೆ ಹೋಗೋಣವೆಂದರೆ ಅವರಲ್ಲಿ ಉತ್ಸಾಹ ತೋರುವುದೇ ಇಲ್ಲ. ಮೊದಲು ಗಣಪತಿ ಹಬ್ಬದ ದಿನ ನಮ್ಮ ಮನೆಯಲ್ಲದೆ ಇತರೆ ಕನಿಷ್ಠ ಇಪ್ಪತ್ತೊಂದು ಮನೆಗಳಲ್ಲಿ ಗಣಪತಿ ದರ್ಶನ ಮಾಡುತ್ತಿದ್ದೆವು. ನಿಮ್ಮ ಮನೆಯಲ್ಲಿ ಗಣಪತಿ ಕೂರಿಸಿದ್ದೀರಾ? ಎಂದು ಕೇಳಿಕೊಂಡು ಹೋಗಿ ಮನೆ ಮನೆಗಳ ಗಣಪತಿಗೆ ಅಕ್ಷತೆ ಹಾಕಿ ನಮಸ್ಕಾರ ಮಾಡುತ್ತಿದ್ದುದು ಅದೇಕೋ ಈಗ ಕಂಡುಬರುತ್ತಿಲ್ಲ. ನಾವು ಯಾವ ದಿಕ್ಕಿನೆಡೆಗೆ ಹೋಗುತ್ತಿದ್ದೇವೋ ಗೊತ್ತಾಗುತ್ತಿಲ್ಲ ಎಂಬ ಆತಂಕದ ಮಾತುಗಳನ್ನು ಅವರೆಲ್ಲಾ ಆಡಿದರು. ಹಿರಿಯರ ಮನಸ್ಸಿನಲ್ಲಿ ಏನೋ ಒಂದು ರೀತಿಯ ದುಗುಡ ಕಾಣಿಸುತ್ತಿತ್ತು.

ನಿಜ, ಈಗ್ಗೆ ಇಪ್ಪತ್ತು, ಮೂವತ್ತು ವರ್ಷದ ಹಿಂದೆ ಈ ರೀತಿ ಇರಲಿಲ್ಲ. ಆಗ ಸಂಭ್ರಮ ಇತ್ತು. ದಸರಾ ಬಂತೆಂದರೆ ಮನೆಮನೆಗಳಲ್ಲಿ ಗೊಂಬೆ ಕೂಡಿಸುವ ಸಂಭ್ರಮ, ಸಂಜೆಯಾದರೆ ಮಕ್ಕಳನ್ನು ಕರೆದು ಗೊಂಬೆ ತೋರಿಸಿ ಅವರಿಗೆ ತಿಂಡಿ ನೀಡಲಾಗುತ್ತಿತ್ತು. ಆದರೆ ಈಗ ಅಂತಹ ಯಾವ ದೃಶ್ಯವೂ ಕಂಡುಬರುವುದಿಲ್ಲ. ಆದರೆ ಸಮಾಧಾನದ ಸಂಗತಿ ಎಂದರೆ ಇಂದಿಗೂ ಗ್ರಾಮೀಣ ಭಾಗಗಳಲ್ಲಿ ಹಬ್ಬದ ಸಂಭ್ರಮ ಅಲ್ಪ ಪ್ರಮಾಣದಲ್ಲಿಯಾದರೂ ಕಂಡುಬರುತ್ತಿದೆ ಎಂಬುದು. ಇದಕ್ಕೆ ಕಾರಣದ ಅವಲೋಕನದಲ್ಲಿ ಇದಕ್ಕೆಲ್ಲಾ ನಮ್ಮ ಟಿವಿ ಹಾಗೂ ಮೊಬೈಲ್ ಕಾರಣ ಎಂಬ ಸಾಮಾನ್ಯ ಅನಿಸಿಕೆಯೂ ಅಲ್ಲಿ ವ್ಯಕ್ತವಾಯಿತು. ನಮ್ಮನ್ನು ನಾಗರಿಕರಾಗಿ ಬೆಳೆಸಬೇಕಾಗಿದ್ದ, ನಮ್ಮನ್ನು ಸಂಸ್ಕೃತಿವಂತರನ್ನಾಗಿ ಬೆಳೆಸಬೇಕಾಗಿದ್ದ ಈ ಸಾಧನಗಳು ಇಂದು ನಮ್ಮತನವನ್ನೇ ಕಸಿಯುತ್ತಿವೆ ಎಂಬ ಭಾವನೆ ಸಾರ್ವತ್ರಿಕವಾಗಿ ಎಲ್ಲೆಡೆ ವ್ಯಕ್ತವಾಗುತ್ತಿದೆ. ಅನೇಕರು ಕಾಲ ಕೆಟ್ಟುಹೋಯಿತು ಎಂದು ಬೇಸರ ವ್ಯಕ್ತಪಡಿಸಿದರೆ, ಮತ್ತಷ್ಟು ಜನ ಈಗಲೇ ಹೀಗೆ, ಇನ್ನು ಹತ್ತಿಪ್ಪತ್ತು ವರ್ಷಗಳಾದ ಮೇಲೆ ನಮ್ಮ ಸಮಾಜ ಹೇಗಿರುತ್ತದೆಯೋ ಎಂಬ ಆತಂಕವನ್ನೂ ವ್ಯಕ್ತಪಡಿಸಿದರು.

ಇದನ್ನೆಲ್ಲಾ ಅವಲೋಕಿಸಿದಾಗ ನಮ್ಮ ವಿದ್ಯಾಭ್ಯಾಸ ಪದ್ಧತಿಯೂ ಇಂದಿನ ಮಕ್ಕಳನ್ನು ಇಂತಹ ಸಂಸ್ಕೃತಿ ಹೀನರನ್ನಾಗಿ ಮಾಡುತ್ತಿದೆಯೇ ಎನ್ನಿಸುತ್ತದೆ. ಇಂದು ನಮ್ಮ ಮಕ್ಕಳು ಶಾಲಾ–ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಎಂದರೆ ಬರೀ ಸರ್ಟಿಫಿಕೇಟ್ ಪಡೆಯುವುದು ಎಂಬಂತಾಗಿದೆ. ಶಾಲೆಗಳಲ್ಲೂ ಪಠ್ಯದ ಹೊರತಾದ ವಿಷಯಗಳನ್ನು ಹೇಳಿಕೊಡುತ್ತಿಲ್ಲ. ಕೆಲವು ಶಾಲೆಗಳಂತೂ ಮುಂದಿನ ಪರೀಕ್ಷೆಯಲ್ಲಿ ಬರಬಹುದಾದ ಸಂಭವನೀಯ ಪ್ರಶ್ನೆಗಳು ಎಂಬುದರ ಬಗ್ಗೆಯೇ ಒತ್ತುಕೊಟ್ಟು, ಪರೀಕ್ಷಾ ಸೂತ್ರಗಳನ್ನು ಮಾತ್ರ ಮಕ್ಕಳಿಗೆ ಹೇಳಿಕೊಡಲಾಗುತ್ತಿವೆ. ಅವರ ಊಹೆಯಂತೆ ಅವರು ಊಹಿಸಿದ್ದ ಪ್ರಶ್ನೆಗಳೇ ಬರುತ್ತವೆ. ಮಕ್ಕಳು ಶೇಕಡಾ ತೊಂಬತ್ತಕ್ಕಿಂತ ಹೆಚ್ಚಿನ ಅಂಕ ಗಳಿಸುತ್ತಾರೆ. ಇದರಿಂದ ಪೋಷಕರಿಗೆ ಆನಂದವೋ ಆನಂದ. ಅಂತಹ ಶಾಲೆಗಳ ಫಲಿತಾಂಶವೂ ಸಹಜವಾಗಿ ಉತ್ತಮವಾಗಿಯೇ ಇರುತ್ತದೆ. ಫಲಿತಾಂಶ ಬಂದ ನಂತರ ಆ ಶಾಲೆ 'ಪ್ರತಿಷ್ಠಿತ' ಹಣೆಪಟ್ಟಿ ಪಡೆಯುತ್ತದೆ. ಮುಂದಿನ ವರ್ಷ ಆ ಶಾಲೆಗೆ ಮಕ್ಕಳ ದಾಖಲಾತಿ ಭಾರೀ ಡಿಮ್ಯಾಂಡ್ ಆಗುತ್ತದೆ. ಅಂತಹ ಶಾಲೆಯಲ್ಲಿ ತಮ್ಮ ಮಕ್ಕಳ ಪ್ರವೇಶಕ್ಕೆ ಪೋಷಕರು, ರಾಜಕಾರಣಿಗಳಿಂದ ಶಿಫಾರಸು ಮಾಡಿಸುವ ಮಟ್ಟಿಗೆ ಹೋಗುತ್ತದೆ. ತಮ್ಮ ಮಕ್ಕಳನ್ನು ಆ ಶಾಲೆಗೆ ಸೇರಿಸಿದ ನಂತರ ಪೋಷಕರು ಹಾಯಾಗುತ್ತಾರೆ. ಅವರ ಬಯಕೆಯಂತೆ ಮುಂದಿನ ವರ್ಷ ಅವರ ಮಕ್ಕಳು ಹೆಚ್ಚಿನ ಅಂಕವನ್ನೂ ಗಳಿಸುತ್ತಾರೆ.

ಹಾಗಾದರೆ ನಮ್ಮ ವಿದ್ಯಾಭ್ಯಾಸದ ಉದ್ದೇಶ ಇದೇನಾ? ಆ ರೀತಿ ಶೇಕಡ ನೂರು ಅಂಕ ಪಡೆದ ಮಕ್ಕಳು ಸಮಾಜಕ್ಕೆ ಎಷ್ಟು ಮೌಲ್ಯವುಳ್ಳವರಾಗಿರುತ್ತಾರೆ? ಹಾಲು ಎಲ್ಲಿಂದ ಬರುತ್ತದೆ ಎಂದರೆ ನಂದಿನಿ ಬೂತಿನಿಂದ ಎಂದು ಹೇಳುವಷ್ಟರ ಮಟ್ಟಿಗೆ ಇಂದಿನ ಮಕ್ಕಳಲ್ಲಿ ಸಾಮಾನ್ಯ ಜ್ಞಾನ ಬೆಳೆದಿದೆ ಎಂಬುದು ಗಂಭೀರವಾಗಿ ಆಲೋಚಿಸಬೇಕಾದ ವಿಷಯವಾಗಿದೆ. ಇದರ ಪರಿಣಾಮವಾಗಿಯೇ ಮಕ್ಕಳು ಇಂದು ನಮ್ಮ ಭಾರತೀಯ ಸಂಸ್ಕೃತಿಯ ಬಗ್ಗೆ ಏನೂ ತಿಳಿದಿಲ್ಲ. ದೇಶ, ದೇಶ ಭಕ್ತಿ ಬೆಳೆಸಬೇಕಾದ ಶೈಕ್ಷಣಿಕ ಸಂಸ್ಥೆಗಳು ಜವಾಬ್ದಾರಿ ಮರೆತಿವೆ. ಇಂತಹ ಮಕ್ಕಳಿಗೆ ಹಬ್ಬಗಳು, ನಮ್ಮ ಆಚಾರ–ವಿಚಾರಗಳು ಏನು ಎಂಬುದೇ ಗೊತ್ತಿಲ್ಲ. ಅವರ ವಿದ್ಯಾಭ್ಯಾಸ ಮುಗಿಯುತ್ತದೆ, ಉತ್ತಮ ಅಂಕ ಗಳಿಸುತ್ತಾರೆ, ಒಳ್ಳೆಯ ಕೆಲಸವನ್ನೂ ಗಳಿಸುತ್ತಾರೆ. ಕೈತುಂಬಾ ಹಣ ಸಂಪಾದಿಸುತ್ತಾರೆ. ಕೊನೆಗೆ ತಂದೆ–ತಾಯಿಯನ್ನು ತೊರೆದು ಹಣದ ಆಸೆಗಾಗಿ ವಿದೇಶಕ್ಕೆ ಹಾರುತ್ತಾರೆ. ಇಲ್ಲಿ ತಂದೆ–ತಾಯಿ ನನ್ನ ಮಗ/ಮಗಳು ಅಮೇರಿಕಾದಲ್ಲಿ, ಆಸ್ಟ್ರೇಲಿಯಾದಲ್ಲಿ ಇದ್ದಾರೆ ಎಂದು ಹೆಮ್ಮೆಯಿಂದ ಹೇಳಿಕೊಂಡು ಸಂತೋಷ ಪಡುತ್ತಾರೆ. ಕ್ರಮೇಣ ಆ ಮಕ್ಕಳು ತಂದೆ–ತಾಯಿಯನ್ನು ಮರೆತೆ ಹೋಗಿ, ವಿದೇಶಗಳಲ್ಲಿಯೇ ಉಳಿದುಬಿಡುತ್ತಾರೆ. ಅಪ್ಪ–ಅಮ್ಮ, ಅಜ್ಜ–ಅಜ್ಜಿಯರು ಮೊಬೈಲ್‌ನಲ್ಲಿ ಬರುವ ಮಕ್ಕಳ ಫೋಟೋ ಹಿಡಿದು ಸಂಭ್ರಮ ಪಡಬೇಕಷ್ಟೇ. ಕೊನೆಗೊಮ್ಮೆ ತಂದೆ–ತಾಯಿ ಇಹಲೋಕ ತ್ಯಜಿಸಿದರೂ ಈ ಮಕ್ಕಳು ಬರುವುದೂ ಇಲ್ಲ. ಹತ್ತಿರದಲ್ಲಿರುವ ನೆಂಟರಿಷ್ಟರಿಗೆ ಶವವನ್ನು, ಅಂತ್ಯಸಂಸ್ಕಾರವನ್ನು ವಿಡಿಯೋ ಮೂಲಕ ತೋರಿಸಿ ಎಂದು ಹೇಳಿ, ತಮ್ಮ ಅಂತಿಮ ಜವಾಬ್ದಾರಿ ಮುಗಿಸುತ್ತಾರೆ. ಅವರಲ್ಲಿ ಯಾವ ಭಾವನೆಯೂ ಉಳಿದಿರುವುದಿಲ್ಲ. ಇದಕ್ಕಾಗಿ ಅಪ್ಪ–ಅಮ್ಮ ಜೀವಮಾನವಿಡೀ ದುಡಿದು ಮಕ್ಕಳನ್ನು ಸಾಕಿ, ಓದಿಸಿ ತಮ್ಮ ಜೀವನವನ್ನೇ ತ್ಯಾಗ ಮಾಡಬೇಕೇ ಎಂಬ ಪ್ರಶ್ನೆ ಮೂಡುತ್ತದೆ.

ಇತ್ತೀಚೆಗೆ ನಮ್ಮ ಸಂಸ್ಕೃತಿಯ ಪರಿಚಯವಿಲ್ಲದ ಕಾರಣ ಮಕ್ಕಳ ಮದುವೆಗಳೂ ಒಂದು ಪ್ರಹಸನದಂತೆ ಕಂಡು ಬರುತ್ತಿವೆ. ಈ ಹಿಂದೆ ಮದುವೆ ಮಾಡಿ ಗಂಡನ ಮನೆಗೆ ಮಗಳನ್ನು ಕಳುಹಿಸುವಾಗ ತಂದೆ–ತಾಯಿಯರು ಗಂಡನ ಮನೆಯವರೊಡನೆ ಹೊಂದಿಕೊಂಡು ಜೀವನ ಮಾಡಿಕೊಂಡು ಹೋಗು ಎಂದು ಹೇಳುತ್ತಿದ್ದರು. ಸಣ್ಣಪುಟ್ಟ ಕಾರಣಕ್ಕೆ ಜಗಳವಾಡಿಕೊಂಡು ತವರಿಗೆ ಬರಬೇಡಿ. ಕೊಟ್ಟ ಹೆಣ್ಣುಮಗಳು ಕುಲಕ್ಕೆ ಹೊರಗು ಎಂಬಂತೆ ಗಂಡನ ಮನೆಯೇ ನಿನಗೆ ಶಾಶ್ವತ ತಾಣ. ಅದನ್ನ ಮನಸ್ಸಲ್ಲಿಟ್ಟುಕೊಂಡು ಮುಂದೆ ಜೀವನ ಮಾಡು ಎಂದು ಕಿವಿಮಾತು ಹೇಳುತ್ತಿದ್ದರು. ಆದರೆ, ಇಂದು ಮಗಳಿಗೆ ಪೋಷಕರು ಹೇಳುವುದು, ಆ ಮನೆಯಲ್ಲಿ ನಿನ್ನನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ತಕ್ಷಣ ನಮ್ಮಲ್ಲಿಗೆ ವಾಪಸ್ಸು ಬಂದು ಬಿಡು. ಗಂಡ ಏನಾದರೂ ಜಗಳ ಮಾಡಿದರೆ ವಿವಾಹ ವಿಚ್ಛೇದನ ಪಡೆದುಕೋ ಎಂದು ಹೇಳಿ ಕಳುಹಿಸುತ್ತಾರೆ. ಇದರಿಂದಾಗಿ ಗಂಡನ ಮನೆಗೆ ಹೋಗುವ ಹೆಣ್ಣು ವಾಪಸ್ಸು ತವರಿಗೆ ಬರುವ ಬಗ್ಗೆಯೇ ಯೋಚಿಸುತ್ತಾಳೆ. ಗಂಡನ ಮನೆಯವರೊಡನೆ ಹೊಂದಾಣಿಕೆ ಮಾಡಿಕೊಳ್ಳುವ ಮನಸ್ಸೇ ಮಾಡುವುದಿಲ್ಲ.

ಮದುವೆಯ ಪೂರ್ವದಲ್ಲೂ ಈ ಹಿಂದೆ ನಡೆಯುತ್ತಿದ್ದಂತೆ ಮಾತುಕತೆಗಳು, ಶಾಸ್ತ್ರಾದಿಗಳಿಲ್ಲ. ಇತ್ತೀಚೆಗೆ ಒಬ್ಬರು ಹೇಳಿದ ಮಾತು ಮನಸ್ಸನ್ನು ಕಲಕುವಂತಿತ್ತು. ಈಗ ಮದುವೆಗೆ ಮುನ್ನ ಹುಡುಗಿಯ ತಂದೆ ಹುಡುಗನನ್ನು ಕೇಳುವುದು, ನಿನಗೆ ಎಷ್ಟು ಸಂಬಳ ಬರುತ್ತೆ, ಕನಿಷ್ಠ ವರ್ಷಕ್ಕೆ ಹತ್ತು, ಹದಿನೈದು ಲಕ್ಷವಾದರೂ ಬರುತ್ತದೆಯಾ, ಅಷ್ಟು ವೇತನ ಬರದಿದ್ದರೆ ಜೀವನ ಕಷ್ಟ ಎಂಬ ಮನೋಭಾವ ಬಂದಿದೆ. ನಿಮ್ಮ ಮನೆಯಲ್ಲಿ ಓಲ್ಡ್ ಫರ್ನಿಚರ್ ಇದೆಯಾ! ಇದರ ಅರ್ಥ ಅವನಿಗೆ ತಂದೆ–ತಾಯಿ, ಅಜ್ಜ–ಅಜ್ಜಿ ಇದ್ದಾರೆಯೇ ಎಂದು. ಉತ್ತರ ಹೌದು ಎಂದಾದರೆ ಅಂತಹ ಸಂಬಂಧ ಬೇಡ ಎಂಬ ತೀರ್ಮಾನಕ್ಕೆ ಬಂದೇ ಬರುತ್ತಾರೆ. ಮನೆಯ ಹಿರಿಯರನ್ನು 'ಓಲ್ಡ್ ಫರ್ನಿಚರ್' ಎಂದು ಕರೆಯಲಾಗುತ್ತದೆ ಎಂದರೆ ನಾವು ಯಾವ ಹಂತಕ್ಕೆ ತಲುಪಿದ್ದೇವೆ! ಹೆಣ್ಣೆತ್ತವರ ಭಾವನೆಯನ್ನು ಹೆಣ್ಣಿನ ಮನೆಯವರೇ ಅರ್ಥ ಮಾಡಿಕೊಳ್ಳುವ ಸಂಯಮ ಇಲ್ಲದಾಗಿದೆ. ನಾವು ಇನ್ನೊಬ್ಬರಿಗೆ ಮಾಡಿದ್ದು ನಮಗೂ ತಿರುಗುಬಾಣವಾಗುತ್ತೆ ಎಂಬ ಕನಿಷ್ಠ ಪರಿಜ್ಞಾನವೂ ಜನರಲ್ಲಿ ಇಲ್ಲವಾಗುತ್ತಿದೆ.

ಇದನ್ನೆಲ್ಲಾ ನೋಡಿದಾಗ ನಮಗೆ ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲೇ ಮಹಾ ಲೋಪವಿರುವಂತೆ ಕಂಡುಬರುತ್ತದೆ. ಇತ್ತ ಮಕ್ಕಳಿಗೆ ಮನೆಯಲ್ಲಿ ಸಂಸ್ಕಾರ ಸಿಗುತ್ತಿಲ್ಲ. ಅತ್ತ ಮಕ್ಕಳು ಸಮಾಜದೊಡನೆ ಬೆರೆಯದೇ ಇರುವುದರಿಂದ ಅವರು ಸಮಾಜದಿಂದಲೂ ಸಂಸ್ಕಾರ ಕಲಿಯುತ್ತಿಲ್ಲ. ಶಾಲೆಗಳಲ್ಲಿ ಸಂಸ್ಕಾರ, ಲೋಕ ಜ್ಞಾನ, ಸಾಮಾನ್ಯ ಜ್ಞಾನ ಎಂಬುದು ಅರಿವೇ ಇಲ್ಲ. ಹಾಗಾಗಿ ಮಕ್ಕಳು ಹೇಗೆ ಸಂಸ್ಕೃತವಂತರಾಗಿ ಬೆಳೆಯುತ್ತಾರೆ, ಅವರಿಗೆ ನಮ್ಮ ಹಬ್ಬ–ಹರಿದಿನಗಳ ಬಗ್ಗೆ ಹೇಗೆ ಅರಿವಾಗುತ್ತದೆ, ಹೇಗೆ ಅಭಿಮಾನ ಮೂಡುತ್ತದೆ. ಇನ್ನು ನಮ್ಮ ಟಿವಿಗಳ ಧಾರವಾಹಿಗಳಲ್ಲಿ ಯಾವುದಾದರೂ ಸಂಸ್ಕಾರ ಹೇಳಿಕೊಡುವಂತಹ ಪ್ರಸಂಗ ಇರುತ್ತದೆಯೇ! ಅಲ್ಲಿ ಬರೀ ಮನೆಮುರುಕುತನದ ಬಗ್ಗೆಯೇ ಹೆಚ್ಚು ಪಾತ್ರಗಳಿರುತ್ತವೆಯೇ ವಿನಃ, ಸಂಸ್ಕಾರ ನೀಡುವಂತಹ ಕಥೆಗಳೇ ಆ ನಿರ್ದೇಶಕರ ಕಣ್ಣಿಗೆ, ಕಿವಿಗೆ ಬೀಳುವುದಿಲ್ಲ. ಅದನ್ನು ನೋಡಿ ಅದೇ ಆದರ್ಶ ಎಂದುಕೊಳ್ಳುವ ಮಕ್ಕಳು ಮುಂದೆ ಅದನ್ನೇ ಅನುಕರಿಸುವರೇ ವಿನಃ, ಬೇರೆಯದಾದ ಯೋಚನೆಯನ್ನೇ ಮಾಡುವುದಿಲ್ಲ.

ನಮ್ಮ ವಿದ್ಯಾಭ್ಯಾಸ ಭಾವಿ ಪ್ರಜೆಗಳ ಹೇಗೆ ರೂಪಿಸಬೇಕು ಎಂಬುದಕ್ಕೆ ಒಂದು ಘಟನೆಯನ್ನು ಉದಾಹರಿಸಬಹುದು. ಸರ್ ಸಿ.ವಿ ರಾಮನ್ ಈ ದೇಶ ಕಂಡ ಒಬ್ಬ ಮಹಾಮೇಧಾವಿ, ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದವರು. ಅವರು ಬೆಂಗಳೂರಿನಲ್ಲಿ ರಾಮನ್ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿದವರು. ಅವರು ತಮ್ಮ ಸಂಸ್ಥೆಗೆ ಒಂದಷ್ಟು ಪ್ರತಿಭಾವಂತರನ್ನು ನೇಮಕ ಮಾಡಿಕೊಳ್ಳುವ ಉದ್ದೇಶದಿಂದ ಒಮ್ಮೆ ಒಂದು ಸಂದರ್ಶನ ಏರ್ಪಡಿಸಿದ್ದರು. ಹಲವರು ಅರ್ಜಿ ಹಾಕಿದ್ದರು. ಸಂದರ್ಶನ ಮುಗಿಸಿ, ಕೆಲವರ ಆಯ್ಕೆ ಮಾಡಿದರು. ಇತ್ತ ಸಂದರ್ಶನ ಮುಗಿಸಿ ರಾಮನ್ ತಮ್ಮ ಕೊಠಡಿಯಿಂದ ಹೊರಬಂದಾಗ ಸಂದರ್ಶನಕ್ಕೆ ಹಾಜರಾಗಿದ್ದ ಒಬ್ಬ ಅಭ್ಯರ್ಥಿ ಅಲ್ಲಿ ಶತಪತ ತಿರುಗುತ್ತಾ ನಿಂತಿದ್ದ. ಅವನನ್ನು ಕಂಡ ರಾಮನ್, ಈತ ನನ್ನನ್ನು ಆಯ್ಕೆ ಮಾಡಿಕೊಳ್ಳಿ ಎಂದು ಬೇಡಲು ನಿಂತಿರಬೇಕೆಂದು ಭಾವಿಸಿ, "ನೀನೇಕೆ ಇನ್ನೂ ಇಲ್ಲಿ ನಿಂತಿದ್ದೀಯಾ, ನೀನು ಆಯ್ಕೆಯಾಗಿಲ್ಲವಲ್ಲ" ಎಂದರು. ಅದಕ್ಕೆ ಆ ಯುವಕ, "ಸರ್, ನಾನು ನನ್ನ ಆಯ್ಕೆ ಮಾಡಿ ಎಂದು ಕೇಳಲು ನಿಂತಿಲ್ಲ. ಇಂದಿನ ಸಂದರ್ಶನಕ್ಕೆ ಬರುವವರಿಗೆ ನಿಮ್ಮ ಸಂಸ್ಥೆಯಿಂದ ಪ್ರವಾಸ ಭತ್ಯೆ ನೀಡಲಾಗಿತ್ತು (ಟಿಎ, ಡಿಎ). ಆದರೆ, ನನಗೆ ಹೆಚ್ಚುವರಿಯಾಗಿ ಐದು ರೂಪಾಯಿ ನೀಡಲಾಗಿದೆ. ಅದನ್ನು ನಾನು ಹಿಂದಿರುಗಿಸಬೇಕಾಗಿತ್ತು. ಆದರೆ ಅದನ್ನು ಯಾರಿಗೆ ಕೊಡಬೇಕು ಎಂದು ಗೊತ್ತಾಗದೇ ನಿಂತಿದ್ದೆ'' ಎಂದ. ಕೊನೆಗೆ ಅದನ್ನು ರಾಮನ್‌ರ ಕೈಗಿತ್ತು ಹೊರಟ. ತಕ್ಷಣ, ರಾಮನ್ ಅವರು, ಅವನನ್ನು ಕರೆದು ಹೇಳಿದರು: ನಾನು ನಿನಗಿಂತ ಪ್ರತಿಭಾವಂತನಾದ ವಿಜ್ಞಾನಿಯನ್ನು ಹೊಂದಬಹುದು. ಆದರೆ ನಿನ್ನಂತಹ ಪ್ರಾಮಾಣಿಕ ವ್ಯಕ್ತಿಯನ್ನು ಗಳಿಸಲಾರೆ. ನಿನ್ನನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂದರು. ಮುಂದೆ ಅದೇ ಯುವಕ ಆ ಪ್ರತಿಷ್ಠಿತ ರಾಮನ್ ಸಂಶೋಧನಾ ಸಂಸ್ಥೆಯ ನಿರ್ದೇಶಕನೂ ಆದ. ರಾಮನ್ ಅವರಿಗೆ ಗೊತ್ತಿತ್ತು, ಕೆಲಸಕ್ಕೆ ಬುದ್ಧಿವಂತರು ಸಿಗುತ್ತಾರೆ, ಆದರೆ ಪ್ರಾಮಾಣಿಕರು ಸಿಗುವುದು ಕಷ್ಟ ಎಂದು. ನಾವು ಇಂದು ಇಂತಹ ಪ್ರಾಮಾಣಿಕತೆ ವಿದ್ಯಾರ್ಥಿಗಳ ಸೃಷ್ಟಿಸುವ ವಿದ್ಯಾಭ್ಯಾಸ ಬೇಕಾಗಿದೆ. ಸುಸಂಸ್ಕೃತ, ಸಂಸ್ಕಾರಯುತ ಪ್ರಜೆಗಳ ಸೃಷ್ಟಿಸುವ ಅನಿವಾರ್ಯತೆ ಈಗ ಹೆಚ್ಚಾಗಿದೆ.

ಮನ್ರೇಗಾ ಉದ್ಯೋಗ ಚೀಟಿಗೆ ಇ–ಕೆವೈಸಿ ಕಡ್ಡಾಯ

ನಂಜನಗೂಡು, ಅ.10– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನೋಂದಾಯಿತ ಸಕ್ರಿಯ ಕುಟುಂಬಗಳು ಹೊಂದಿರುವ ಉದ್ಯೋಗ ಚೀಟಿಗಳಿಗೆ ಇ–ಕೆವೈಸಿ ಮಾಡಿಸುವುದು ಕಡ್ಡಾಯವಾಗಿದೆ ಎಂದು ನಂಜನಗೂಡು ತಾಪಂ ಇಓ ಜೆರಾಲ್ಡ್ ರಾಜೇಶ್ ತಿಳಿಸಿದ್ದಾರೆ.

ನಂಜನಗೂಡು ತಾಲೂಕಿನ 45 ಗ್ರಾಪಂಗಳಲ್ಲೂ ಇ–ಕೆವೈಸಿ ನೋಂದಣಿ ಪ್ರಾರಂಭವಾಗಿದ್ದು, ಉದ್ಯೋಗ ಚೀಟಿ ಹೊಂದಿರುವ ಕುಟುಂಬದವರು ಅಗತ್ಯ ದಾಖಲಾತಿಯೊಂದಿಗೆ ಅಪ್ಡೇಟ್ ಮಾಡಿಸಬಹುದಾಗಿದೆ. ಮನ್ರೇಗಾ ಯೋಜನೆಯಡಿ ಅನುಷ್ಠಾನಗೊಳ್ಳುವ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುವ ಪ್ರತಿಯೊಬ್ಬ ಕೂಲಿಕಾರರ ಹಾಜರಾತಿಯನ್ನು ಎನ್.ಎಂ.ಎಂ.ಎಸ್ ಮೂಲಕ ತೆಗೆದುಕೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಇ–ಕೆವೈಸಿ ಅಪ್ಡೇಟ್ ಮಾಡುವುದು ಅಗತ್ಯ ಇರುತ್ತದೆ.

ಯಶಸ್ವಿ ಜೈಸ್ವಾಲ್ ಶತಕ: ದಿನದಂತ್ಯಕ್ಕೆ ಭಾರತ 318/2

ನವದೆಹಲಿ, ಅ.10– ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಅವರ ಅಜೇಯ ಶತಕ ಹಾಗೂ ಸಾಯಿ ಸುದರ್ಶನ್ ಅವರ ಆಕರ್ಷಕ ಅರ್ಧ ಶತಕಗಳ ನೆರವಿನಿಂದ ಭಾರತ ವೆಸ್ಟ್ ಇಂಡೀಸ್ ವಿರುದ್ಧದ 2ನೇ ಟೆಸ್ಟ್ ಪಂದ್ಯದ ಮೊದಲ ದಿನದಂತ್ಯಕ್ಕೆ ಭಾರತ 2 ವಿಕೆಟ್ ನಷ್ಟಕ್ಕೆ 318 ರನ್ ಗಳಿಸಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಕೆ.ಎಲ್.ರಾಹುಲ್ ಹಾಗೂ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 58 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 5 ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ 38 ರನ್ ಬಾರಿಸಿ ಅರ್ಧಶತಕದತ್ತ ಮುನ್ನುಗ್ಗುತ್ತಿದ್ದ ಕೆ.ಎಲ್.ರಾಹುಲ್ ವಿಕೆಟ್ ಒಪ್ಪಿಸಿದರು.

ನಂತರ ಜೊತೆಯಾದ ಯಶಸ್ವಿ ಜೈಸ್ವಾಲ್ ಹಾಗೂ ಸಾಯಿ ಸುದರ್ಶನ್ ಆಕರ್ಷಕ ಜೊತೆಯಾಟವಾಡುವ ಮೂಲಕ ವಿಂಡೀಸ್ ಬೌಲರ್‌ಗಳನ್ನು ಕಾಡಿದರು. ಈ ಜೋಡಿ 2ನೇ ವಿಕೆಟ್‌ಗೆ 193 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು ಇನ್ನೂರರ ಗಡಿ ದಾಟಿಸಿದರು.

ಈ ವೇಳೆ ವಿಂಡೀಸ್ ಬೌಲರ್‌ಗಳನ್ನು ಮನಬಂದಂತೆ




ದಂಡಿಸಿದ ಯಶಸ್ವಿ ಜೈಸ್ವಾಲ್ ವೃತ್ತಿ ಜೀವನದ ಏಳನೇ ಟೆಸ್ಟ್ ಶತಕ ಸಿಡಿಸಿ ಸಂಭ್ರಮಿಸಿದರು. ಇನ್ನೂ ಜೈಸ್ವಾಲ್‌ಗೆ ಉತ್ತಮ ಸಾಥ್ ನೀಡಿದ ಸಾಯಿ ಸುದರ್ಶನ್ 12 ಬೌಂಡರಿ ಒಳಗೊಂಡ 87 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ನಾಯಕ ಶುಭ್‌ಮನ್ ಗಿಲ್ ಜೈಸ್ವಾಲ್ ಜೊತೆಗೂಡಿ 3ನೇ ವಿಕೆಟ್‌ಗೆ ಅಜೇಯ 67 ರನ್‌ಗಳ ಜೊತೆಯಾಡಿದ್ದು, 20 ರನ್ ಗಳಿಸಿರುವ ಗಿಲ್ ಹಾಗೂ ಅಜೇಯ 173 ರನ್ ಗಳಿಸಿರುವ ಯಶಸ್ವಿ ಜೈಸ್ವಾಲ್ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ವಿಂಡೀಸ್ ಪರ ಜೋಮೆಲ್ ವಾರಿಕನ್ 2 ವಿಕೆಟ್ ಉರುಳಿಸಿದರು.

ದರ್ಶನ್‌ಗೆ ಜೈಲಲ್ಲಿ ಹಾಸಿಗೆ, ದಿಂಬು ನೀಡದ ವಿಚಾರ

ಜೈಲು ಪರಿಶೀಲಿಸಿ ರಿಪೋರ್ಟ್ ಕೊಡಿ: ಕಾನೂನು ಪ್ರಾಧಿಕಾರಕ್ಕೆ ಕೋರ್ಟ್ ಆದೇಶ

ಬೆಂಗಳೂರು, ಅ.10– ನಟ ದರ್ಶನ್‌ಗೆ ಜೈಲಿನಲ್ಲಿ ಅಗತ್ಯ ಸೌಲಭ್ಯ ಒದಗಿಸಲಾಗಿದೆಯೋ ಎಂದು ಪರಿಶೀಲನೆ ನಡೆಸಿ ವರದಿ ನೀಡಲು ಕಾನೂನು ಸೇವಾ ಪ್ರಾಧಿಕಾರದ ಸದಸ್ಯರಿಗೆ ಕೋರ್ಟ್ ಆದೇಶ ನೀಡಿದೆ.



ನಟ ದರ್ಶನ್ ಎರಡನೇ ಬಾರಿಗೆ ಪರಪ್ಪನ ಅಗ್ರಹಾರ ಜೈಲು ಸೇರಿದ ಬಳಿಕ ಜೈಲು ನರಕವಾಗಿದೆ. ಜೈಲ್ ಮ್ಯಾನ್ಯುವಲ್ ಪ್ರಕಾರ ದರ್ಶನ್‌ಗೆ ಕನಿಷ್ಟ ಸೌಲಭ್ಯಗಳನ್ನು ನೀಡಬೇಕೆಂದು ಕೋರ್ಟ್ ಆದೇಶವಿದ್ದರೂ ನೀಡಿಲ್ಲ ಎಂದು ದರ್ಶನ್ ಪರ ವಕೀಲ ಸುನೀಲ್ ನ್ಯಾಯಾಂಗ ನಿಂದನೆ ಅರ್ಜಿ ದಾಖಲಿಸಿದ್ದರು. ಅದಾದ ಬಳಿಕ ಸಿಆರ್‌ಪಿಸಿ 310 ರಡಿ ಅರ್ಜಿ ಸಲ್ಲಿಸಿ ದರ್ಶನ್‌ಗೆ ಕೊಟ್ಟಿರುವ ಸೌಲಭ್ಯಗಳೇನು? ಎಂದು ಜಡ್ಜ್ ಜೈಲಿಗೆ ಬಂದು ಪರಿಶೀಲಿಸಬೇಕೆಂದು ಮನವಿ ಮಾಡಿದ್ದರು. ಇಂದು ಈ ಎರಡೂ ಅರ್ಜಿಗಳ ಸಂಬಂಧ ಸಿಸಿಎಚ್ 64ರ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ. ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಲಿಗೆ ಭೇಟಿ ನೀಡಿ, ದರ್ಶನ್‌ಗೆ ನೀಡಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿ ವರದಿ ನೀಡಬೇಕು. ಕೋರ್ಟ್ ಆದೇಶ ಪಾಲನೆ ಆಗಿದೆಯೇ ಇಲ್ಲವೇ ಎಂದು ಪರಿಶೀಲನೆ ನಡೆಸಬೇಕು. ಜೈಲಿನ ಮ್ಯಾನ್ಯುವಲ್ ಅಡಿ ದರ್ಶನ್‌ಗೆ ಅಗತ್ಯ ವಸ್ತುಗಳನ್ನು ನೀಡಲಾಗಿದೆಯೇ, ಜೈಲಿನಲ್ಲಿ ದರ್ಶನ್‌ಗೆ ಮಾನಸಿಕ ಮತ್ತು ದೈಹಿಕ ಹಿಂಸೆಯಾಗಿದೆಯೇ ಎಂದು ಪರಿಶೀಲಿಸಿ ವರದಿ ನೀಡುವಂತೆ ನ್ಯಾಯಾಧೀಶರು, ಕಾನೂನು ಸೇವಾ ಪ್ರಾಧಿಕಾರದ ಸದಸ್ಯರಿಗೆ ಆದೇಶ ಮಾಡಿದ್ದಾರೆ.

ಜೈಲಿಗೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿ ಅ.18ರ ಒಳಗಾಗಿ ವರದಿ ನೀಡುವಂತೆ ಸೂಚಿಸಿದ್ದು, ಆ ಬಳಿಕ ವರದಿ ಪರಿಶೀಲಿಸಿ ನ್ಯಾಯಾಧೀಶರು ಹಾಸಿಗೆ ದಿಂಬು ನೀಡುವ ಅರ್ಜಿ ಸಂಬಂಧ ಅಂತಿಮ ಆದೇಶ ಹೊರಡಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹಿಂದೆ ಒಬ್ಬರೇ ವೈದ್ಯರು ಎಲ್ಲದಕ್ಕೂ ಚಿಕಿತ್ಸೆ ನೀಡಿದರೆ ಈಗ ಪ್ರತಿ ಅಂಗಕ್ಕೂ ಒಬ್ಬೊಬ್ಬ ವೈದ್ಯ ಹುಟ್ಟಿಕೊಂಡಿದ್ದಾರೆ

●ಹಿರಿಯ ವೈದ್ಯ ಡಾ.ಯೋಗಣ್ಣ ಬೇಸರ ● ವೈದ್ಯರು ಸುಲಿಗೆ ಮಾಡ್ತಾರೆ ಎಂಬ ಮನೋಭಾವನೆ ಜನರಲ್ಲಿದೆ ●ರಾಜ್ಯ ಸರ್ಕಾರದಿಂದ ಆರೋಗ್ಯ ಕ್ಷೇತ್ರಕ್ಕೆ ಏನು ಕೊಡುಗೆ ಇಲ್ಲ



ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ ಅಂಗವಾಗಿ ಮೂರು ಸಾಧಕರಿಗೆ 'ರೋಟರಿ ಫಾರ್ಮಾಸಿಸ್ಟ್ ಮತ್ತು ಕೆಮಿಸ್ಟ್ ಅವಾರ್ಡ್–2025'ಅನ್ನು ರೋಟರಿ ಮೈಸೂರು ಉತ್ತರ ವತಿಯಿಂದ ವಿತರಿಸಲಾಯಿತು.

ಮೈಸೂರು, ಅ.10(ಎಸ್‌ಪಿಎನ್)– 1980ರ ದಶಕದಲ್ಲಿ ಜನರು, ವೈದ್ಯಕೀಯ ಸೇವೆಯನ್ನು 'ವೈದ್ಯೋ ನಾರಾಯಣೋ ಹರಿಃ' ಎನ್ನುತ್ತಿದ್ದರು. ಪ್ರಸ್ತುತ 2025ರಲ್ಲಿ ವೈದ್ಯಕೀಯ ಸೇವೆ ವಾಣಿಜ್ಯೋದ್ಯಮವಾಗಿ ಪರಿವರ್ತಿತವಾಗಿದೆ ಎಂದು ಹಿರಿಯ ವೈದ್ಯ ಡಾ.ಎಸ್.ಪಿ.ಯೋಗಣ್ಣ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ರೈಲ್ವೆ ಬಡಾವಣೆಯ ರೋಟರಿ ಭವನದಲ್ಲಿ ರೋಟರಿ ಮೈಸೂರು ಉತ್ತರ ವತಿಯಿಂದ ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ ಹಾಗೂ ಶರತ್ ಮೆಡಿಕಲ್ಸ್ ಮಾಲೀಕ ಎಂ. ನಿರಂಜನಮೂರ್ತಿ ಸ್ಮರಣಾರ್ಥ ಮೂರು ಸಾಧಕರಿಗೆ 'ರೋಟರಿ ಫಾರ್ಮಾಸಿಸ್ಟ್ ಮತ್ತು ಕೆಮಿಸ್ಟ್ ಅವಾರ್ಡ್–2025' ವಿತರಿಸುವ ಸಮಾರಂಭದಲ್ಲಿ ಅವರು ಮಾತನಾಡಿದರು.

1980ರ ದಶಕದಲ್ಲಿ ಎಂಬಿಬಿಎಸ್ ವೈದ್ಯರೇ ಎಲ್ಲಾ ತರಹದ ರೋಗಗಳನ್ನು ಕ್ಷಣಾರ್ಧದಲ್ಲಿ ಕಂಡು ಹಿಡಿಯುತ್ತಿದ್ದರು. ಆದರೆ, ಪ್ರಸ್ತುತ ಒಂದೊಂದು ಅಂಗಗಳ ಪರೀಕ್ಷೆಗೂ ಒಬ್ಬರು ತಜ್ಞ ವೈದ್ಯರಿದ್ದಾರೆ. ಅವರು ಒಂದೊಂದು ರೋಗಗಳಿಗೂ 5–10 ಮಾತ್ರೆಗಳನ್ನು ಬರೆಯುತ್ತಿದ್ದಾರೆ. ಹೀಗೆ ಬರೆದು ರೋಗಿಗೆ ಆಸ್ಪತ್ರೆ ಎಂದರೆ, ಸುಲಿಗೆ ಮಾಡುವ ಕೇಂದ್ರ. ಅಲ್ಲಿ ಕೆಲಸ ಮಾಡುವ ವೈದ್ಯರು ಹಣಕ್ಕಾಗಿಯೇ ಇರುವ ವ್ಯಕ್ತಿ ಎನ್ನುವ ಭಾವನೆ ರೋಗಿಗಳ ಮನಸ್ಸಿನಲ್ಲಿ ಮೂಡುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಕ್ಕರೆ ಕಾಯಿಲೆಗೆ ರಾಕೆಟ್ ವೇಗ: ಭಾರತದಲ್ಲಿ ಸಕ್ಕರೆ ಕಾಯಿಲೆ ರಾಕೆಟ್ ವೇಗದಲ್ಲಿ ಹರಡುತ್ತಿದೆ. ಈ ಕಾಯಿಲೆ ಬಂದರೆ, ಮೂರ್‍ನಾಲ್ಕು ಅಂಗಾಂಗ ವೈಫಲ್ಯಕ್ಕೆ ಕಾರಣವಾಗುತ್ತಿದೆ. ಈ ರೋಗ ಪತ್ತೆ ನಿರ್ವಹಣೆಗಾಗಿ ವೈದ್ಯರೇ ಸೃಷ್ಟಿಯಾಗಿದ್ದಾರೆ. ಆದರೆ, 1980ರಲ್ಲಿ ಎಲ್ಲಾ ರೋಗಗಳಿಗೆ ಎಂಬಿಬಿಎಸ್ ವೈದ್ಯರೇ ನೋಡಿ ಚಿಕಿತ್ಸೆ ನೀಡುತ್ತಿದ್ದರು. ಇಂದು ಒಂದೊಂದು ರೋಗಕ್ಕೂ ಒಬ್ಬ ವೈದ್ಯರು ಸೃಷ್ಟಿಯಾಗಿರುವುದರಿಂದ ರೋಗ ನಿರ್ವಹಣೆಗೆ ಹೆಚ್ಚು ಹಣ ವ್ಯಯವಾಗುತ್ತಿದೆ. ಇದಕ್ಕಿಂತ ಮುಖ್ಯವಾಗಿ ಜನರ ಜೀವನಶೈಲಿ ಬದಲಾಗಿದ್ದು, ಮನೆಯಲ್ಲಿ ಆಹಾರ ತಯಾರಿಕೆಯಲ್ಲಾಗಿರುವ ಬದಲಾವಣೆಯೇ ಆರೋಗ್ಯದ ಏರುಪೇರಿಗೆ ಪ್ರಮುಖ ಕಾರಣ ಎಂದು ತಿಳಿಸಿದರು.

ಆರೋಗ್ಯ ಕ್ಷೇತ್ರಕ್ಕೆ ನರೇಂದ್ರ ಮೋದಿ ಒತ್ತು: ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 77 ವರ್ಷ ಕಳೆದರೂ ವೈದ್ಯಕೀಯ ಕ್ಷೇತ್ರದಲ್ಲಿ ಯಾವ ಪ್ರಧಾನಮಂತ್ರಿಗಳು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ, ಈಗಿನ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಾತ್ರ ಜನ ಸಾಮಾನ್ಯರ ಆರೋಗ್ಯ ಕ್ಷೇತ್ರವನ್ನು ಗಂಭೀರವಾಗಿ ಪರಿಗಣಿಸಿ 'ಆಯುಷ್ಮಾನ್ ಭಾರತ್' ಆರೋಗ್ಯ ವಿಮೆ ಜಾರಿಗೊಳಿಸಿದ್ದಾರೆ. ಇದರಿಂದ ಜನಸಾಮಾನ್ಯರ ವೈದ್ಯಕೀಯ ವೆಚ್ಚಕ್ಕೆ ಈ ಯೋಜನೆ ಸಾಕಷ್ಟು ಪ್ರಯೋಜನವಾಗುತ್ತಿದೆ ಎಂದರು.

ರಾಜ್ಯ ಆರೋಗ್ಯ ನೀತಿಗೆ ಕಿಡಿ: ಆದರೆ, ರಾಜ್ಯ ಸರ್ಕಾರ ಎಲ್ಲದಕ್ಕೂ ಕಡಿವಾಣ ಹಾಕುತ್ತಿದೆ. ಯಾವುದೇ 'ಆರೋಗ್ಯ ವಿಮೆ' ಪ್ರಯೋಜನ ಪಡೆಯಲು ಮೊದಲು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕು. ಬಳಿಕ ಅಲ್ಲಿ ಸಾಧ್ಯವಾಗದಿದ್ದರೆ, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತೆ ಕಾನೂನು ತಂದಿದ್ದಾರೆ. ಇದರಿಂದ ಉತ್ತಮ ಗುಣಮಟ್ಟದ ಚಿಕಿತ್ಸೆ ಪಡೆಯಲು ಜನಸಾಮಾನ್ಯರಿಗೆ ಆಗುತ್ತಿಲ್ಲ ಎಂದು ರಾಜ್ಯ ಸರ್ಕಾರದ ಆರೋಗ್ಯ ನೀತಿಗೆ ಕಿಡಿಕಾರಿದರಲ್ಲದೆ, ಇನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಜನಸಾಮಾನ್ಯರಿಗೆ ಉತ್ತಮ ಗುಣಮಟ್ಟದ ಚಿಕಿತ್ಸೆ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.


ಕೇಂದ್ರ 700 ಕೋಟಿ ರೂ. ನೀಡುತ್ತಿದೆ: ಜನರ ಆರೋಗ್ಯ ಸುಧಾರಣೆಗಾಗಿ ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ 700 ಕೋಟಿ ಮೀಸಲಿಟ್ಟಿದೆ. ಆದರೆ, ರಾಜ್ಯ ಸರ್ಕಾರ ಯಾವುದನ್ನೂ ಬಿಡುಗಡೆ ಮಾಡುತ್ತಿಲ್ಲ. ಅದರಲ್ಲೂ ಖಾಸಗಿ ಆಸ್ಪತ್ರೆಗಳಲ್ಲಿ ಜನಸಾಮಾನ್ಯರು ಚಿಕಿತ್ಸೆ ಪಡೆಯಲು ಅನುಕೂಲ ಮಾಡಿಕೊಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು, ಎಲ್ಲದಕ್ಕೂ ವೈದ್ಯರನ್ನು ದೂಷಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಸಾರ್ವಜನಿಕರಿಗೆ ವ್ಯವಸ್ಥೆಯ ಲೋಪವನ್ನು ವಿವರಿಸಿದರು.

ಪುರುಷರ ಮೇಲೆ ಒತ್ತಡ ಸೃಷ್ಟಿ: ಪ್ರಸ್ತುತ ಪುರುಷರು ಒಂದಿಲ್ಲೊಂದು ವಿಷಯದಲ್ಲಿ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಈ ಒತ್ತಡ ಪುರುಷನ ಮಾನಸಿಕ ಆರೋಗ್ಯ ಹದಗೆಡಲು ಕಾರಣವಾಗುತ್ತಿದೆ. ಪ್ರತಿಯೊಬ್ಬರು ಮಾನಸಿಕ ಆರೋಗ್ಯದ ಬಗ್ಗೆ ಗಮನಹರಿಸಬೇಕು. ಇಲ್ಲದಿದ್ದರೆ ನಾನಾ ರೋಗಗಳು ಆವರಿಸುವ ಸಾಧ್ಯತೆಯಿದೆ. ಆದರೆ, ಹೆಣ್ಣು ಮಕ್ಕಳು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಮರ್ಥರಿದ್ದು, ಪುರುಷರು ಮಾತ್ರ ಮನೋರೋಗ ಕಾಪಾಡಿಕೊಳ್ಳುವುದಕ್ಕೆ ತರಬೇತಿ ಅವಶ್ಯವಾಗಿದೆ. ಮೆಡಿಕಲ್ಸ್ ಅಂಗಡಿ ಮಾಲೀಕರು ಜನಸಾಮಾನ್ಯರು ಕೇಳುವ ಔಷಧಿಗಳನ್ನು ವೈದ್ಯರ ಸಲಹೆ ಚೀಟಿ ಇಲ್ಲದೆ ನೀಡುತ್ತಿದ್ದಾರೆ. ಇದರಿಂದ ಅಪಾಯವೇ ಹೆಚ್ಚು. ಇದಕ್ಕೆ ಅವಕಾಶ ನೀಡಬಾರದು ಎಂದು ಎಚ್ಚರಿಸಿದರಲ್ಲದೆ, ಎಂ.ನಿರಂಜನ್ ಮೂರ್ತಿ ಮೆಡಿಕಲ್ಸ್ ವ್ಯಾಪಾರ ಜೊತೆಗೆ ಜನಸಾಮಾನ್ಯರ ಸೇವೆಗೂ ಒತ್ತು ನೀಡಿ, ಜೀವನ ನಡೆಸಿರುವುದು ಸಂತೋಷ ಸಂಗತಿ ಎಂದರು.

ಮೂವರು ಸಾಧಕರಿಗೆ ಸನ್ಮಾನ: ಮೈಸೂರಿನ ವೇಲ್‌ಕೇರ್ ಫಾರ್ಮಾಸ್ಯೂಟಿಕಲ್ಸ್‌ನ ಮಾಲೀಕ ಶೇಖ್ ಮುಸ್ಲಾಹುದ್ದೀನ್, ಟಿ.ಕೆ.ಬಡಾವಣೆಯ ಮಂಜುನಾಥ ಮೆಡಿಕಲ್ಸ್‌ನ ಟಿ.ಎಸ್. ಮಹೇಶ್, ಎನ್.ಆರ್.ಮೊಹಲ್ಲಾ ಶ್ರೀನಿವಾಸ ಮೆಡಿಕಲ್ಸ್‌ನ ಸಿ.ಆರ್.ಅರವಿಂದ ಅವರಿಗೆ 'ರೋಟರಿ ಫಾರ್ಮಾಸಿಸ್ಟ್ ಮತ್ತು ಕೆಮಿಸ್ಟ್ ಅವಾರ್ಡ್–2025 ಅನ್ನು ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ರೋಟರಿ ಮೈಸೂರು ಉತ್ತರದ ಅಧ್ಯಕ್ಷ ರೊ.ಎಂ.ಚಂದ್ರಶೇಖರ್, ಕಾರ್ಯದರ್ಶಿ ರೊ. ಎ.ಪಿ.ವಿರೂಪಾಕ್ಷ, ರೊ.ರಾಜಶೇಖರ ಕದಂಬ, ರೊ.ಯಶಸ್ವಿ ಎಸ್.ಸೋಮಶೇಖರ್, ರೊ.ಎಂ.ರಾಜು, ರೊ. ಎಂ.ಕೆ.ನಂಜಯ್ಯ, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಡಾ.ಎನ್. ಶರತ್, ಸುಜಾತ ನಿರಂಜನಮೂರ್ತಿ, ರಶ್ಮಿ ವಿರೂಪಾಕ್ಷ ಉಪಸ್ಥಿತರಿದ್ದರು.

ಪಕ್ಷಿ ಛಾಯಾಚಿತ್ರ ಸ್ಪರ್ಧೆ






ಮೈಸೂರು, ಅ.10– ಕರ್ನಾಟಕ ಅರಣ್ಯ ಇಲಾಖೆ ಮೈಸೂರು ಪ್ರಾದೇಶಿಕ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ 71ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಪಕ್ಷಿ ವೀಕ್ಷಣೆ ಮತ್ತು ಪಕ್ಷಿ ಛಾಯಾಚಿತ್ರ ತೆಗೆಯುವ ಸ್ಪರ್ಧೆಯಲ್ಲಿ ಮೈಸೂರಿನ ಶಿವಕುಮಾರ್ ಬಿ, ಅವರು ಪ್ರಥಮ ಬಹುಮಾನ ಗಳಿಸಿದ್ದಾರೆ.

ಮೈಸೂರಿನ ಅರಣ್ಯ ಭವನದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ರವಿಕುಮಾರ್ 'ಮಾನವ ಹಾಗೂ ವನ್ಯಜೀವಿಗಳ ಸಹಬಾಳ್ವೆ' ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ ಜೊತೆಯಲ್ಲಿದ್ದರು.

ಮೈಸೂರಿನ ಲಿಂಗಾಂಬುದಿ ಕೆರೆಯಲ್ಲಿ ನಡೆದ 'ಬಾಯ್ತೆರೆದ ಸ್ಪಾಟ್ ಬಿಲ್ಡ್ ಪೆಲಿಕಾನ್ ಪಕ್ಷಿ'ಯ ಚಿತ್ರಕ್ಕೆ ಸ್ಪರ್ಧೆಯಲ್ಲಿ ಶಿವಕುಮಾರ್ ಪ್ರಥಮ ಬಹುಮಾನ, ಕಶ್ಯಪ್ ದ್ವಿತೀಯ ಹಾಗೂ ರವೀಂದ್ರ ಲಾಲ್ ತೃತೀಯ ಬಹುಮಾನ ಪಡೆದರು.

ಸಿಜೆಐ ಮೇಲೆ ಶೂ ಎಸೆಯಲೆತ್ನಿಸಿದ ವಕೀಲನ ಪರ ವಾದಕ್ಕೆ ಎಂಕೆಎಸ್ ವಿಷಾದ



ಮೈಸೂರು, ಅ.10– ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರತ್ತ ಶೂ ಎಸೆದವನ ಪರವಾಗಿ ಮಾತನಾಡುವುದು ದೇಶದ ದುರಂತ ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಹೇಳಿದ್ದಾರೆ.

ನ್ಯಾಯಪೀಠಕ್ಕೆ ಅಗೌರವ ತೋರುವುದು ಮನುವಾದಿಗಳ ಅಸಹಿಷ್ಣುತೆಯನ್ನು ತೋರಿಸುತ್ತದೆ. ಮುಖ್ಯ ನ್ಯಾಯಮೂರ್ತಿಗಳತ್ತ ಶೂ ಎಸೆದ ಘಟನೆಯನ್ನು ದೇಶದ ಪ್ರತಿಯೊಬ್ಬರು ಒಕ್ಕೊರಲಿನಿಂದ ಖಂಡಿಸಬೇಕಿತ್ತು. ಆದರೆ ಕೆಲ ಆಂತರಿಕ ದೇಶದ್ರೋಹಿಗಳು ಸಮರ್ಥನೆ ಮಾಡಿಕೊಳ್ಳುತ್ತಿರುವುದು ದೇಶದ ಸಂವಿಧಾನ ಬದ್ಧ ವ್ಯವಸ್ಥೆಗೆ ಅಪಚಾರ ಮಾಡಿದಂತೆ ಎಂದಿದ್ದಾರೆ.

ಭಾರತದ ಸಂವಿಧಾನವು ದೇಶವನ್ನು ವಿಶ್ವ ಭೂಪಟದಲ್ಲಿ ಎತ್ತರಕ್ಕೆ ಕೊಂಡೊಯ್ದಿದೆ. ಅಂತಹ ಶ್ರೇಷ್ಠ ಸಂವಿಧಾನದಡಿಯಲ್ಲಿ ನ್ಯಾಯದಾನ ಮಾಡುತ್ತಿರುವವರಿಗೆ ಅಪಮಾನ ಮಾಡಲಾಗಿದೆ. ದಲಿತ ಸಮುದಾಯದ ವ್ಯಕ್ತಿ, ಮುಖ್ಯ ನ್ಯಾಯ ಮೂರ್ತಿ ಸ್ಥಾನಕ್ಕೇರಿರುವುದನ್ನು ಸಹಿಸದ ಕಠೋರ ಹೀನ ಮನಃಸ್ಥಿತಿಯ ಜನ ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಅಂತಹ ದ್ರೋಹಿಗಳನ್ನು ಸಮರ್ಥನೆ ಮಾಡಿಕೊಳ್ಳುವವರಿಗೂ ಮುಂದಿನ ದಿನಗಳಲ್ಲಿ ಇದೇ ಸ್ಥಿತಿ ಬಂದೊದಗುತ್ತದೆ. ಆದ್ದರಿಂದ ಪಕ್ಷ, ಧರ್ಮ, ಜಾತಿ ಬದಿಗಿಟ್ಟು ಇಂತಹ ಕೃತ್ಯಗಳನ್ನು ವಿರೋಧಿಸಬೇಕು. ಮತ್ತೆ ಮರುಕಳಿಸದಂತೆ ಕೇಂದ್ರ ಸರ್ಕಾರ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಕಾರ್ಯದರ್ಶಿಯಾಗಿ ರೋಹಿಣಿ ಸಿಂಧೂರಿ



ಬೆಂಗಳೂರು, ಅ.10– ಹುದ್ದೆ ನಿರೀಕ್ಷೆಯಲ್ಲಿದ್ದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್‌ಎಂಇ ಮತ್ತು ಗಣಿ) ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಐಎಎಸ್ ಅಧಿಕಾರಿ ಸಮೀರ್ ಶುಕ್ಲಾ ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಅವರಿಗೆ ದೆಹಲಿಯಲ್ಲಿನ ಕರ್ನಾಟಕ ಭವನದ ಕಾರ್ಯದರ್ಶಿ (ಸಮನ್ವಯ) ಹುದ್ದೆಯ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ.

ದಸರಾ ವಸ್ತು ಪ್ರದರ್ಶನದಲ್ಲಿ ಮಹಿಳಾ ಆಯೋಗದ ಮಳಿಗೆ

ಮೈಸೂರು, ಅ.10– ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ರಾಜ್ಯ ಮಹಿಳಾ ಆಯೋಗದ ಮಳಿಗೆ ಶನಿವಾರ(ಅ.11) ಸಂಜೆ 6ಕ್ಕೆ ಉದ್ಘಾಟನೆಗೊಳ್ಳಲಿದೆ.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ, ಕಾರ್ಯದರ್ಶಿ ರೂಪಾ, ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮತ್ತಿತರರು ಭಾಗವಹಿಸಲಿದ್ದಾರೆ.

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವ ವಾರ್ಷಿಕ ಮಹಾಸಭೆ

ಮೈಸೂರು, ಅ.10– ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವ ಸಂಘದ 24ನೇ ವಾರ್ಷಿಕ ಮಹಾಸಭೆಯನ್ನು ಅ.12 ರಂದು ಬೆಳಗ್ಗೆ 10ಕ್ಕೆ ವಿದ್ಯಾಶಂಕರ ಬಡಾವಣೆಯಲ್ಲಿನ ಸಂಘದ ಶಾಲಾ ಕಟ್ಟಡದಲ್ಲಿ ಆಯೋಜಿಸಲಾಗಿದೆ.

ಸಂಘದ ಸರ್ವ ಸದಸ್ಯರೂ ಸಭೆಯಲ್ಲಿ ಭಾಗವಹಿಸಬೇಕು, ಸದಸ್ಯರು ಬರುವಾಗ ಮಹಾಸಭೆಯ ನೋಟಿಸ್ ತರುವಂತೆ ಸಂಘದ ಅಧ್ಯಕ್ಷ ಕಡೇಮಾಡ ಎಂ.ಬೆಳ್ಳಿಯಪ್ಪ ಮತ್ತು ಕಾರ್ಯದರ್ಶಿ ಪಟ್ಟಡ ದೇವಯ್ಯ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಸರ್ಕಾರಿ ಭೂಮಿ ರಕ್ಷಣೆಗೆ ಸಂಸದರಿಗೆ ಯರಗನಹಳ್ಳಿ ಗ್ರಾಮಸ್ಥರ ಮನವಿ



ಯರಗನಹಳ್ಳಿ ಗ್ರಾಮಸ್ಥರು ಸಂಸದ ಯದುವೀರ್ ಅವರಿಗೆ ಮನವಿ ಸಲ್ಲಿಸಿದ ಸಂದರ್ಭ.

ಮೈಸೂರು, ಅ.10– ಭೂ ಮಾಫಿಯಾದಿಂದ ಸರ್ಕಾರಿ ಭೂಮಿ ರಕ್ಷಿಸುವಂತೆ ಮೈಸೂರಿನ ಯರಗನಹಳ್ಳಿ ಗ್ರಾಮಸ್ಥರು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ಗೆ ಮನವಿ ಮಾಡಿದ್ದಾರೆ.

ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರೊಂದಿಗೆ ಸಂಸದರನ್ನು ಭೇಟಿ ಮಾಡಿದ ಗ್ರಾಮಸ್ಥರು, ಹಂಚ್ಯಾ ಸಾತಗಳ್ಳಿ ಸರ್ವೆ ನಂಬರ್ 367ರಲ್ಲಿ ಸುಮಾರು 9 ಎಕರೆ ಭೂಮಿಯನ್ನು ಕೆಲ ಭೂ ಮಾಫಿಯಾಗಳು ಒತ್ತುವರಿ ಮಾಡಿಕೊಂಡಿದ್ದು, ಆ ಭೂಮಿಯನ್ನು ರಕ್ಷಿಸಿ ಯರಗನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳ ಅನುಕೂಲಕ್ಕೆ ಬಳಸಲು ಅನುವು ಮಾಡಿಕೊಡಬೇಕು. ಅಲ್ಲಿ ಸರ್ಕಾರಿ ಶಾಲಾ–ಕಾಲೇಜು, ಸರ್ಕಾರಿ ಆಸ್ಪತ್ರೆಗಳು ಮುಂತಾದ ಸಾರ್ವಜನಿಕರ ಉಪಯುಕ್ತ ಕಾರ್ಯಗಳನ್ನು ಮಾಡುವಂತೆ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್‌ಗೆ ಸೂಚನೆ ನೀಡಬೇಕು ಎಂದು ಕೋರಿದರು. ಈ ಸಂದರ್ಭದಲ್ಲಿ ಬಿಜೆಪಿ ಎನ್.ಆರ್. ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜುನಾಥ್, ಮುಖಂಡ ಮಹೇಶ್, ಯರಗನಹಳ್ಳಿ ಗ್ರಾಮದ ಯಜಮಾನರು ಹಾಗೂ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲೂ ವಸ್ತ್ರಸಂಹಿತೆ ಜಾರಿಗೆ ಹಿಂದೂಪರ ಸಂಘಟನೆ ಚಳವಳಿ



ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಹಿಂದೂ ಪುಣ್ಯಕ್ಷೇತ್ರಗಳ ಸಂರಕ್ಷಣಾ ಸಮಿತಿ ವತಿಯಿಂದ ಪೋಸ್ಟ್ ಕಾರ್ಡ್ ಚಳವಳಿ ನಡೆಸಲಾಯಿತು.

ಮೈಸೂರು, ಅ.10(ಎಂಕೆ)– ಚಾಮುಂಡಿ ಬೆಟ್ಟದಲ್ಲಿ ವಸ್ತ್ರಸಂಹಿತೆ ಜಾರಿ ಮಾಡಬೇಕೆಂದು ಆಗ್ರಹಿಸಿ ಹಿಂದೂ ಪುಣ್ಯಕ್ಷೇತ್ರಗಳ ಸಂರಕ್ಷಣಾ ಸಮಿತಿ ವತಿಯಿಂದ ಶುಕ್ರವಾರ ಪೋಸ್ಟ್ ಕಾರ್ಡ್ ಚಳವಳಿ ನಡೆಸಲಾಯಿತು.

ನಗರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಜಮಾಯಿಸಿದ ಸಮಿತಿ ಸದಸ್ಯರು, ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿಯವರಿಗೆ ಪೋಸ್ಟ್ ಕಾರ್ಡ್‌ಅನ್ನು ಪೋಸ್ಟ್ ಮಾಡುವ ಮೂಲಕ ಚಾಮುಂಡಿಬೆಟ್ಟದಲ್ಲಿ ವಸ್ತ್ರಸಂಹಿತೆ ಜಾರಿಗೊಳಿಸಲು ಒತ್ತಾಯಿಸಲಾಯಿತು.

ದೇಶ ಹಾಗೂ ರಾಜ್ಯದ ಅನೇಕ ದೇವಸ್ಥಾನಗಳಲ್ಲಿ ಈಗಾಗಲೇ ವಸ್ತ್ರಸಂಹಿತೆ ಜಾರಿಯಲ್ಲಿದ್ದು, ಪಕ್ಕದ ಹಾಸನಾಂಬೆ ದೇವಸ್ಥಾನದಲ್ಲಿಯೂ ವಸ್ತ್ರಸಂಹಿತೆ ಜಾರಿಯಾಗಿದೆ. ಆದರೆ, ಅಪಾರ ಸಂಖ್ಯೆಯ ಭಕ್ತಾದಿಗಳು ಭೇಟಿ ನೀಡುವ ಚಾಮುಂಡಿಬೆಟ್ಟಕ್ಕೆ ವಸ್ತ್ರಸಂಹಿತೆ ಜಾರಿಯಾಗಿಲ್ಲವೇಕೆ ಎಂದು ಪ್ರಶ್ನಿಸಿದರು.

ಪ್ರವಾಸಿ ಸ್ಥಳ ಹಾಗೂ ಧಾರ್ಮಿಕ ಕ್ಷೇತ್ರಗಳಿಗೂ ವ್ಯತ್ಯಾಸವಿದೆ. ಚಾಮುಂಡಿ ಬೆಟ್ಟ ಧಾರ್ಮಿಕ ಸ್ಥಳವಾಗಿದ್ದು, ವಸ್ತ್ರ ಸಂಹಿತೆ ಕಡ್ಡಾಯವಾಗಿ ಜಾರಿಯಾಗಬೇಕು. ಮಾತ್ರವಲ್ಲ, ರಾಜ್ಯದಲ್ಲಿನ ಮುಜರಾಯಿ ಇಲಾಖೆ ವ್ಯಾಪ್ತಿಯ ಎಲ್ಲಾ ದೇವಸ್ಥಾನಗಳಲ್ಲಿಯೂ ವಸ್ತ್ರಸಂಹಿತೆ ಜಾರಿಯಾಗಬೇಕು ಎಂದು ಆಗ್ರಹಿಸಿದರು. ಬಳಿಕ ಅರಮನೆ ಆವರಣದಲ್ಲಿರುವ ಮುಜರಾಯಿ ಇಲಾಖೆಯ ಕಚೇರಿಗೆ ಮನವಿ ಸಲ್ಲಿಸಲಾಯಿತು.

ಹಿಂದೂ ಪುಣ್ಯಕ್ಷೇತ್ರಗಳ ಸಂರಕ್ಷಣಾ ಸಮಿತಿಯ ಸಂಚಾಲಕ ಮೈಕಾ ಪ್ರೇಮ್ ಕುಮಾರ್, ಸಹ ಸಂಚಾಲಕರಾದ ಸಂಜಯ್, ರಾಕೇಶ್ ಭಟ್, ಮುಖಂಡರಾದ ಶಿವು ಪಟೇಲ್, ಜೀವನ್ ಕುಮಾರ್, ಸಚಿನ್ ನಾಯಕ್, ಪ್ರಜ್ವಲ್ ಮತ್ತಿತರರಿದ್ದರು.

ಮುಡಾ 50:50 ಹಗರಣ

ಮತ್ತೊಬ್ಬ ಮಾಜಿ ಆಯುಕ್ತ ಡಿ.ಬಿ. ನಟೇಶ್ ಬಂಧನಕ್ಕೂ ಆಗ್ರಹ

ಮೈಸೂರು,ಅ.10(ಎಂಟಿವೈ)– ಮುಡಾ 50:50 ಹಗರಣದಲ್ಲಿ ಭಾಗಿಯಾಗಿದ್ದ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಬಂಧಿಸಿದ್ದು, ಅವರೀಗ ನ್ಯಾಯಾಂಗ ಬಂಧನದಲ್ಲಿದ್ದಾರೆ. ಮತ್ತೊಬ್ಬ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರನ್ನೂ ಬಂಧಿಸಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಒತ್ತಾಯಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾರಿ ನಿರ್ದೇಶನಾಲಯ (ಇಡಿ) ತನಿಖೆ ನಡೆಸಿ ದಿನೇಶ್ ಅವರಿಂದ 40 ಕೋಟಿಗೂ ಅಧಿಕ ಮೌಲ್ಯದ 32 ನಿವೇಶನಗಳನ್ನು ಜಪ್ತಿ ಮಾಡಿದೆ. ಅದೇ ರೀತಿ ಇನ್ನಷ್ಟು ಅಧಿಕಾರಿಗಳ ಮೇಲೆ ಕ್ರಮ ಆಗಬೇಕಿದೆ. ಚಾಮುಂಡೇಶ್ವರಿ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ನೀಡಲಾಗಿದ್ದ 44 ನಿವೇಶನಗಳನ್ನು ಮುಡಾ ವಾಪಸ್ ಪಡೆದುಕೊಂಡಿದೆ. ಈಗ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿದ್ದು, ಸದರಿ ಜಾಗಕ್ಕೆ ಕೂಡಲೇ ಫಲಕ ಹಾಕಬೇಕು. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಹಾಗೂ ಎಂಡಿಎ ಆಯುಕ್ತರು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.



ದೇವೇಗೌಡರ ಆರೋಗ್ಯ ವಿಚಾರಿಸಿದ ಶ್ರೀಗಳು...

ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಪ್ರಧಾನಿ ದೇವೇಗೌಡರನ್ನು ಆದಿಚುಂಚನಗಿರಿ ಕ್ಷೇತ್ರದ ಪೀಠಾಧಿಪತಿ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು. ಈ ವೇಳೆ ದೇವೇಗೌಡರ ಬಂಧುವೂ ಆದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಉಪಸ್ಥಿತರಿದ್ದರು.

ರೈಲಿಗೆ ಸಿಲುಕಿ ಯುವಕ ಆತ್ಮಹತ್ಯೆ

ಮೈಸೂರು, ಅ.10– ಯುವಕನೊಬ್ಬ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ. ನಗರದ ಅಶೋಕ ಪುರಂ ನಿವಾಸಿ ಮೂರ್ತಿ ಅವರ ಪುತ್ರ ಕುಮಾರ (30), ಚಾಮರಾಜಪುರಂ ರೈಲು ನಿಲ್ದಾಣ ಹಾಗೂ ಜಯನಗರ ರೈಲ್ವೆ ಕ್ರಾಸಿಂಗ್ ನಡುವೆ ರೈಲಿಗೆ ಸಿಲುಕಿ ಮೃತಪಟ್ಟಿದ್ದಾನೆ.

ಕೂಲಿ ಕೆಲಸ ಮಾಡಿಕೊಂಡಿದ್ದ ಈತ ಇಂದು ಬೆಳಗ್ಗೆ 6.30ರ ಸಮಯದಲ್ಲಿ ಹೋಟೆಲ್‌ನಲ್ಲಿ ಟೀ ಕುಡಿದು ಬರುವುದಾಗಿ ಮನೆಯವರಿಗೆ ಹೇಳಿ ಹೊರಗೆ ಬಂದಿದ್ದ. ಬೆಳಗ್ಗೆ 9.10ರ ಸುಮಾರಿಗೆ ಕೀಮ್ಯಾನ್ ರೈಲ್ವೆ ಹಳಿ ಪರಿಶೀಲಿಸುವ ವೇಳೆ ಘಟನೆ ಬೆಳಕಿಗೆ ಬಂದಿದೆ.

ಯುವಕನ ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿರುವುದಾಗಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರಮೇಶ್ ತಿಳಿಸಿದ್ದಾರೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಶಿವರಾಮ ಕಾರಂತರ ಜನ್ಮ ದಿನಾಚರಣೆ



ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ಸಾಹಿತಿ ಶಿವರಾಮ ಕಾರಂತರ ಜನ್ಮದಿನಾಚರಣೆ ಆಚರಿಸಲಾಯಿತು.

ಮೈಸೂರು, ಅ.10– ನಗರದ ವಿಜಯ ವಿಠಲ ವಿದ್ಯಾಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ಸಾಹಿತಿ ಶಿವರಾಮ ಕಾರಂತರ ಜನ್ಮದಿನಾಚರಣೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಹೆಚ್. ಸತ್ಯಪ್ರಸಾದ್ ಮಾತನಾಡಿ, ಕಡಲತೀರದ ಭಾರ್ಗವ ಶಿವರಾಮ ಕಾರಂತರು ಹೊಸಗನ್ನಡ ಸಾಹಿತ್ಯಕ್ಕೆ ಎಲ್ಲಾ ಪ್ರಕಾರದಲ್ಲೂ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಪ್ರವಾಸ ಸಾಹಿತ್ಯ, ಆತ್ಮಚರಿತ್ರೆ, ಜೀವನಚರಿತ್ರೆ, ಗೀತರೂಪಕ, ಪ್ರಬಂಧ, ಗ್ರಂಥ ಸಂಪಾದನೆ, ಪತ್ರಿಕೋದ್ಯಮ, ನಿಘಂಟು ರಚನೆ, ವಿಶ್ವಕೋಶ, ಮಕ್ಕಳ ಸಾಹಿತ್ಯ, ಚಲನಚಿತ್ರ ಶಿಕ್ಷಣ, ಕಲೆ, ಯಕ್ಷಗಾನ ಸೇರಿದಂತೆ ಎಲ್ಲಾ ಪ್ರಕಾರದಲ್ಲೂ ಸತ್ವ ಹಾಗೂ ವೈವಿಧ್ಯಪೂರ್ಣ ಸಾಹಿತ್ಯದ ಮೂಲಕ ಮೈಲಿಗಲ್ಲು ಸ್ಥಾಪಿಸಿದ್ದಾರೆ ಎಂದು ತಿಳಿಸಿದರು.

ಕಾರಂತರು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರಭುತ್ವ ಸಾಧಿಸಿದ್ದರು. 'ರಾಷ್ಟ್ರಗೀತ ಸುಧಾಕರ' ಮೊದಲ ಕವನಸಂಕಲನವಾದರೆ, 'ವಿಚಿತ್ರಕೂಟ' ಮೊದಲ ಕಾದಂಬರಿಯಾಗಿದೆ. ಇವರ ಕಾದಂಬರಿಗಳು ಸಮಾಜದ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. 'ಮರಳಿ ಮಣ್ಣಿಗೆ' ಕಾದಂಬರಿ ಮೂರು ತಲೆಮಾರುಗಳ ಗ್ರಾಮೀಣ ಚಿತ್ರಣವನ್ನೊಳಗೊಂಡಿದ್ದು ಇಂಗ್ಲಿಷ್, ಹಿಂದಿ, ತಮಿಳು ಭಾಷೆಗೂ ಅನುವಾದವಾಗಿದೆ. 'ಮೂಕಜ್ಜಿಯ ಕನಸುಗಳು' ಕಾದಂಬರಿಗೆ 'ಜ್ಞಾನಪೀಠ' ಪ್ರಶಸ್ತಿ ದೊರೆತಿದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಲವು ಪ್ರಯೋಗಗಳನ್ನು ನಡೆಸಿ ಪ್ರಾಥಮಿಕ ತರಗತಿಗಳಿಗೆ ಕನ್ನಡ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಪರಿಸರ ವಸ್ತುವಿನಿಂದ ಹಿಡಿದು ವಿಶ್ವಕೋಶದವರೆಗೂ ಕೆಲಸ ಮಾಡಿದ್ದಾರೆ ಎಂದು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ವಿನಯ್, ಅಮರನಾಥ್, ನಾಗರೇಖಾ, ಆರತಿ, ಉಪನ್ಯಾಸಕರಾದ ಎಸ್.ಎಸ್. ರಮೇಶ್, ಬಿ.ಜಿ.ದಿವ್ಯಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಗಮನ ಸೆಳೆದ 'ಚೆಲುವನ ಭಕ್ತರಿಗೆ ಕಸದ ದರ್ಶನ!' 'ಮೈಸೂರು ಮಿತ್ರ'ನ ವರದಿ

ಮೇಲುಕೋಟೆಯಲ್ಲಿ ರಾಶಿ ರಾಶಿ ಬಿದ್ದಿದ್ದ ಕಸ ತೆರವು

ಮಂಡ್ಯ, ಅ.10–ಜಿಲ್ಲೆಯ ಐತಿಹಾಸಿಕ ಧಾರ್ಮಿಕ ಸ್ಥಳವಾಗಿರುವ ಮೇಲುಕೋಟೆ ಸ್ವಚ್ಛತೆಗೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಗಮನಹರಿಸಿದ್ದಾರೆ. ಅವರೇ ಖುದ್ದು ಅಧಿಕಾರಿಗಳಿಗೆ ನಿರ್ದೇಶನ ನೀಡಿದಂತಹ ವಿಲಕ್ಷಣ ಸಂಗತಿ ವರದಿಯಾಗಿದೆ.

ಪ್ರಮುಖ ಪ್ರವಾಸಿ ತಾಣವೂ ಆದ ಮೇಲುಕೋಟೆಯಲ್ಲಿ ಅಲ್ಲಿನ ಗ್ರಾಮ ಪಂಚಾಯ್ತಿ ಆಡಳಿತ ಸ್ವಚ್ಛತೆ ಬಗ್ಗೆ ಕಿಂಚಿತ್ತೂ ಗಮನಹರಿಸದೇ ಕಣ್ಮುಚ್ಚಿ ಕುಳಿತ್ತಿತ್ತು. ಚೆಲುವನ ದರ್ಶನಕ್ಕಾಗಿ ಬರುವ ಭಕ್ತಾದಿಗಳು ಬಸ್ ಇಳಿಯುತ್ತಿದ್ದಂತೆಯೇ ಅವರಿಗೆ ಮೊದಲು ದರ್ಶನವಾಗುತ್ತಿದ್ದುದೇ ರಾಶಿ–ರಾಶಿ ಕಸ. ವಾಹನಗಳಲ್ಲಿ ಬರುವವರಿಗೆ ರಸ್ತೆಯ ಎರಡೂ ಬದಿಯಲ್ಲೂ ಗುಡ್ಡದಂತೆ ಬಿದ್ದಿರುವ ಕಸದ ರಾಶಿಗಳು ಸ್ವಾಗತಿಸುತ್ತಿದ್ದವು. ಮೇಲುಕೋಟೆಯ ಎಲ್ಲಾ ಬೀದಿಗಳು ಕಸದಿಂದ ತುಂಬಿ ತುಳುಕುತ್ತಿದ್ದವು. ಚರಂಡಿಗಳು ಗಬ್ಬೆದ್ದು ನಾರುತ್ತಿತ್ತು. ಇದರ ಬಗ್ಗೆ ಅಕ್ಟೋಬರ್ 8ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ


ಚೆಲುವನ ಭಕ್ತರಿಗೆ ಕಸದ ದರ್ಶನ!

ಅ.8ರ ಮೈಸೂರುಮಿತ್ರನ ವರದಿ


ಡಾ. ಕೆ. ವೈಷ್ಣವಿ
Dr. K. Vaishnavi
Officer on Special Duty to Chief Minister
CHIEF MINISTER'S SECRETARIAT
Vidhana Soudha, Bengaluru-560 001
Ph. 080-22033347

ಸಿಎಂ ವಿಶೇಷಾಧಿಕಾರಿ ಬರೆದಿರುವ ಪತ್ರ


ಮೇಲುಕೋಟೆಗ್ರಾಮಪಂಚಾಯತ್ ಕಾರ್ಯಾಲಯ
Email pdomelukote@gmail.com
ದಿನಾಂಕ 10-10-2025

ಗ್ರಾ.ಪಂ. ನೀಡಿರುವ ಅನುಪಾಲನಾ ವರದಿ


ಮೇಲುಕೋಟೆಯಲ್ಲಿ ನಡೆದ ಸ್ವಚ್ಛತಾ ಕಾರ್ಯ

ಮೈಸೂರು ಮಿತ್ರ ಫಲಶ್ರುತಿ ಮೈಸೂರು ಮಿತ್ರ

ಚಿತ್ರ ಸಹಿತ 'ಚೆಲುವನ ಭಕ್ತರಿಗೆ ಕಸದ ದರ್ಶನ!' ಶೀರ್ಷಿಕೆಯಡಿ ವಿಸ್ತೃತ ವರದಿ ಪ್ರಕಟವಾಗಿತ್ತು.

ಈ ವರದಿಯನ್ನು ಕಣ್ಣಾರೆ ಕಂಡು ಕೆಂಡಾಮಂಡಲವಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ವಿಶೇಷ ಕರ್ತವ್ಯಾಧಿಕಾರಿ ಡಾ. ಕೆ.ವೈಷ್ಣವಿ ಅವರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಅದೇ ದಿನ ವೈಷ್ಣವಿ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳು ಮತ್ತು ಮಂಡ್ಯ ಜಿಪಂ ಸಿಇಓ ಅವರಿಗೆ 'ಮೈಸೂರು ಮಿತ್ರ'ದಲ್ಲಿ ಪ್ರಕಟವಾಗಿದ್ದ ವರದಿಯ ಪ್ರತಿಯೊಂದಿಗೆ ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಪತ್ರ ರವಾನಿಸಿ, ಮೇಲುಕೋಟೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲು ತಕ್ಷಣವೇ ಅಗತ್ಯ ಕ್ರಮ ಕೈಗೊಂಡು ಜಿಪಿಎಸ್ ಛಾಯಾಚಿತ್ರಗಳೊಂದಿಗೆ ಅನುಪಾಲನಾ ವರದಿಯನ್ನು ತಮ್ಮ ಕಚೇರಿಗೆ ರವಾನಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಮೇಲುಕೋಟೆ ಗ್ರಾಮ ಪಂಚಾಯ್ತಿ ಆಡಳಿತ ವರ್ಗವು ಅಂತೂ ನಿದ್ದೆಯಿಂದೆದ್ದು ಸಂಪೂರ್ಣ ಸ್ವಚ್ಛತಾ ಕಾರ್ಯ ನಡೆಸಿ ಅಕ್ಟೋಬರ್ 10ರಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ವೈಷ್ಣವಿ ಅವರಿಗೆ ಜಿಪಿಎಸ್ ಛಾಯಾಚಿತ್ರಗಳೊಂದಿಗೆ ಅನುಪಾಲನಾ ವರದಿಯನ್ನು ಸಲ್ಲಿಸಿದೆ.

ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಹಾಗೂ ಪ್ರವಾಸಿ ತಾಣವೂ ಆದ ಮೇಲುಕೋಟೆ ಗ್ರಾಪಂ ಕಚೇರಿಯಲ್ಲಿ ಕೇವಲ ಒಬ್ಬರೇ ಖಾಯಂ ಪೌರ ಕಾರ್ಮಿಕರಿದ್ದು, ಹೆಚ್ಚುವರಿಯಾಗಿ 6 ಮಂದಿಯನ್ನು ಸ್ವಚ್ಛತೆಗಾಗಿ ನೇಮಿಸಿಕೊಳ್ಳಲಾಗಿತ್ತಾದರೂ, ಹಂಗಾಮಿ ಸ್ವಚ್ಛತಾ ಕಾರ್ಮಿಕರು ಕೆಲಸಕ್ಕೆ ಬಾರದ ಕಾರಣ ಮೇಲುಕೋಟೆಯಲ್ಲಿ ಕಂಡ ಕಂಡಲ್ಲಿ ಕಸದ ರಾಶಿ ಕಂಡು ಬಂದಿತ್ತು ಎಂಬ ಸಮಜಾಯಿಷಿಯನ್ನು ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿಗಳಿಗೆ ಗ್ರಾಪಂ ಪಿಡಿಓ ರವಾನಿಸಿದ್ದಾರೆ.

ಒಟ್ಟಾರೆ 'ಮೈಸೂರು ಮಿತ್ರ'ನ ಜನಪರ ವರದಿಯನ್ನ ಗಮನಿಸಿ ಮುಖ್ಯಮಂತ್ರಿಗಳು ಗುಡುಗಿದ ನಂತರ ಪ್ರವಾಸಿ ತಾಣ ಮೇಲುಕೋಟೆ ಸದ್ಯಕ್ಕೆ ಸ್ವಚ್ಛಗೊಂಡಂತಾಗಿದೆ.

ಭಾರಿ ಮಳೆ ಹೆಬ್ಬಾಳ ಸೇತುವೆ ಜಲಾವೃತ


ಭಾರತೀನಗರ ಸಮೀಪದ ಮುಟ್ಟನಹಳ್ಳಿ–ಬೋರಾಪುರ ರಸ್ತೆಯಲ್ಲಿರುವ ಹೆಬ್ಬಾಳ ಸೇತುವೆ (ಕದಂಬ ನದಿ) ಗುರುವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಮುಳುಗಡೆಗೊಂಡಿದೆ.

ಭಾರತೀನಗರ.ಅ.10– ಇಲ್ಲಿಗೆ ಸಮೀಪದ ಮುಟ್ಟನಹಳ್ಳಿ–ಬೋರಾಪುರ ರಸ್ತೆಯಲ್ಲಿರುವ ಹೆಬ್ಬಾಳ ಸೇತುವೆ (ಕದಂಬ ನದಿ) ಗುರುವಾರ ರಾತ್ರಿ ಸುರಿದ ಭಾರಿ ಮಳೆಯಿಂದ ಮುಳುಗಡೆಗೊಂಡಿದೆ.

ಈ ಹೆಬ್ಬಾಳ ಸೇತುವೆಯಲ್ಲಿ 11 ತೂಬುಗಳಿದ್ದು ನಿನ್ನೆ ಸುರಿದ ಭಾರಿ ಮಳೆಯಿಂದ ಸತ್ತೆ, ಗಿಡಗೆಂಟಿಗಳು ತೂಬಿನಲ್ಲಿ ಸಿಕ್ಕಿಹಾಕಿಕೊಂಡಿದ್ದರಿಂದ ನೀರು ತೂಬಿನಲ್ಲಿ ನಿಂತು ಸೇತುವೆ ಮೇಲೆ ಹರಿಯುತ್ತಿದೆ. ಮಳೆ ಬಂದಾಗಲೆಲ್ಲಾ ಈ ಸಮಸ್ಯೆ ಎದುರಾಗುತ್ತಿದೆ ಎಂದು ಮುಟ್ಟನಹಳ್ಳಿ–ಬೋರಾಪುರ ಗ್ರಾಮಸ್ಥರು ದೂರಿದ್ದಾರೆ. ಗ್ರಾಮಕ್ಕೆ ಸಂಪರ್ಕ ಹೊಂದಿರುವ ಈ ಸೇತುವೆಯಲ್ಲಿ ಗ್ರಾಮಸ್ಥರು ಮಳೆಬಂದಾಗ ಓಡಾಡಲು ಹೆದರುವಂತಾಗಿದೆ. ಅದಕ್ಕಾಗಿ ಸೇತುವೆ ಅಭಿವೃದ್ಧಿ ಪಡಿಸಲು ಮುಂದಾಗಬೇಕೆಂದು ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮುಟ್ಟನಹಳ್ಳಿ ಗ್ರಾಮದ ಮುಖಂಡ ಮೂಲೆಹಟ್ಟಿ ಚಂದ್ರಶೇಖರ್ ಆರೋಪಿಸಿದ್ದಾರೆ.

ನಿವೃತ್ತ ಮುಖ್ಯ ಶಿಕ್ಷಕ ಬೋರೇಗೌಡ ನಿಧನ

ಕೆ.ಆರ್.ಪೇಟೆ,ಅ.10–ನಿವೃತ್ತ ಮುಖ್ಯ ಶಿಕ್ಷಕ ಬೋರೇಗೌಡ(90) ಅವರು ಶುಕ್ರವಾರ ವಯೋಸಹಜವಾಗಿ ನಿಧನರಾದರು.



ಬೋರೇಗೌಡರು ಅಗ್ರಹಾರಬಾಚಹಳ್ಳಿ, ಕೆ.ಆರ್.ಪೇಟೆ ಟೌನ್ ಸೇರಿದಂತೆ ವಿವಿಧ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ನಿವೃತ್ತಿಯ ನಂತರ ಕೆ.ಆರ್.ಪೇಟೆ ಪಟ್ಟಣದ ಹೇಮಾವತಿ ಬಡಾವಣೆಯಲ್ಲಿರುವ ತಮ್ಮ ಪುತ್ರನ ನಿವಾಸದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದರು.

ಮೃತರು ರಾಘವೇಂದ್ರ ಪ್ರಿಂಟಿಂಗ್ ಪ್ರೆಸ್‌ನ ಮಾಲಿಕ ಕೆ.ಬಿ.ರವಿ, ತೃಪ್ತಿ ಪ್ರಿಂಟರ್ಸ್‌ನ ಕೆ.ಬಿ.ಪ್ರಭಾಕರ್ ಸೇರಿದಂತೆ ಇಬ್ಬರು ಗಂಡು ಮಕ್ಕಳು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶುಕ್ರವಾರ ಹೇಮಗಿರಿ ರಸ್ತೆಯಲ್ಲಿರುವ ಮೃತರ ಜಮೀನಿನಲ್ಲಿ ನಡೆಯಿತು.

ಸರ್ಕಾರದ ನಿರ್ಧಾರಕ್ಕೆ ಮಾಜಿ ಸಂಸದರ ಸ್ವಾಗತ

ನಾಗಮಂಗಲ, ಅ.10–ಉದ್ಯೋಗಸ್ಥ ಮಹಿಳೆಯರಿಗೆ ರಾಜ್ಯ ಸರ್ಕಾರದಿಂದ ಉಡುಗೊರೆಯಾಗಿ ಮಹಿಳೆಯರಿಗೆ ಪ್ರತಿ ತಿಂಗಳು ವೇತನ ಸಹಿತ ಋತುಚಕ್ರ ರಜೆ ಅಥವಾ ಮುಟ್ಟಿನ ರಜೆ ಹಾಗೂ ಅನ್ನಭಾಗ್ಯ ಯೋಜನೆಯಲ್ಲಿ 10 ಕೆಜಿ ಅಕ್ಕಿ ಬದಲು 5 ಕೆ.ಜಿ ಅಕ್ಕಿ ಹಾಗೂ ಇಂದಿರಾ ಕಿಟ್ ವಿತರಣೆಯ ನಿರ್ಧಾರವನ್ನು ಸ್ವಾಗತಿಸುವುದಾಗಿ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ತಿಳಿಸಿದ್ದಾರೆ.

ಮಳೆಗೆ ಸಿಡಿಎಸ್ ನಾಲೆ ಏರಿ ಒಡೆದು ಅಪಾರ ಪ್ರಮಾಣದ ಬೆಳೆ ನಾಶ


ತಾಲೂಕಿನ ಕೆನ್ನಾಳು ಸಮೀಪದ ಸಿಡಿಎಸ್ ನಾಲೆಯ ಏರಿ ಒಡೆದು ಬೆಳೆಗೆ ನೀರು ನುಗ್ಗಿ ಹಾನಿಯಾಗಿರುವ ಸ್ಥಳವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಪರಿಶೀಲಿಸಿದರು.


ಸಿಡಿಎಸ್ ನಾಲೆ ಏರಿ ಒಡೆದು ಶ್ರೀರಂಗಪಟ್ಟಣದಲ್ಲಿ ಅಡಿಕೆ ಬೆಳೆ ನಷ್ಟ ಉಂಟಾಗಿರುವುದು.

ಪಾಂಡವಪುರ, ಅ.10–ತಾಲೂಕಿನಾದ್ಯಂತ ಕಳೆದ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ತಾಲೂಕಿನ ಕೆನ್ನಾಳು ಸಮೀಪದ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆ ಹಿಂಭಾಗ ಸಿಡಿಎಸ್ ನಾಲೆ ಏರಿ ಒಡೆದು ಅಪಾರ ಪ್ರಮಾಣದ ಬೆಳೆ ನಾಶವಾಗಿರುವ ಘಟನೆ ಶುಕ್ರವಾರ ನಡೆದಿದೆ

ತಾಲೂಕಿನ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆ ಹಿಂಭಾಗದಲ್ಲಿ ಸಿಡಿಎಸ್ ನಾಲೆಯ ಏರಿ ಒಡೆದು ಅಪಾರ ಪ್ರಮಾಣದ ನೀರು ಕೆನ್ನಾಳು ಗ್ರಾಮದ ರೈತರಾದ ಪಾಪಣ್ಣ, ಮರೀಗೌಡ, ದೇವಮ್ಮ ನಿಂಗೇಗೌಡ ಸೇರಿದಂತೆ ಹಲವು ರೈತರ ಜಮೀನಿಗೆ ನುಗ್ಗಿ ಅಪಾರ ಪ್ರಮಾಣದಲ್ಲಿ ಅಡಿಕೆ, ಬಾಳೆ, ಕಬ್ಬು ಬೆಳೆಗೆ ಸಂಪೂರ್ಣವಾಗಿ ಹಾನಿಯುಂಟಾಗಿದೆ.

ಶಾಸಕ ದರ್ಶನ್‌ಪುಟ್ಟಣ್ಣಯ್ಯ ಮಾತನಾಡಿ, ರಾತ್ರಿ ಸುರಿದ ಮಳೆಯಿಂದಾಗಿ ಸಿಡಿಎಸ್ ನಾಲೆಯ ಏರಿ ಒಡೆದು ಸುಮಾರು 30–40 ಎಕರೆ ಪ್ರದೇಶದಲ್ಲಿ ಅಡಿಕೆ, ಬಾಳೆ, ಕಬ್ಬು ಹಾನಿಯುಂಟಾಗಿದೆ. ಈಗಾಗಲೆ ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಜಂಟಿ ಸರ್ವೆ ನಡೆಸುತ್ತಿದ್ದಾರೆ. ಬೆಳೆ ಹಾನಿಯಾಗಿರುವ ರೈತರಿಗೆ ಶೀಘ್ರವೇ ಪರಿಹಾರ ದೊರಕಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಶ್ರೀರಂಗಪಟ್ಟಣ ವರದಿ : ಶ್ರೀರಂಗಪಟ್ಟಣದಲ್ಲೂ ರಾತ್ರಿ ಸುರಿದ ಭಾರಿ ಮಳೆಗೆ ತಾಲೂಕಿನ ದರಸಗುಪ್ಪೆ ಗ್ರಾಮದ ಬಳಿ ಚಿಕ್ಕದೇವರಾಯ ನಾಲೆ ಏರಿ ಒಡೆದು ರೈತರ ಅಪಾರ ಬೆಳೆ ಹಾನಿಯಾಗಿವೆ. ಸುಮಾರು ನೂರಾರು ಎಕರೆ ಜಮೀನು ಮುಳುಗಡೆಗೊಂಡು ಬೆಳೆದು ನಿಂತಿದ್ದ ಕಬ್ಬು, ಭತ್ತ, ಬಾಳೆ, ರಾಗಿ, ಅಡಿಕೆ ತೆಂಗು ಸೇರಿದಂತೆ ಇತರೆ ತೋಟಗಾರಿಕೆ ಬೆಳೆಗಳು ನಷ್ಟಗೊಂಡು ರೈತರು ಕಂಗಾಲಾಗಿದ್ದಾರೆ. ಈ ನಾಲೆ ವ್ಯಾಪ್ತಿಯಲ್ಲಿ ಬರುವ ಕೂಡಲಕುಪ್ಪೆ, ದರಸಗುಪ್ಪೆ, ಕೆನ್ನಾಳು, ಬಾಬುರಾಯನಕೊಪ್ಪಲು, ಕಿರಂಗೂರಿನ ಗ್ರಾಮದ ಕೃಷಿಕರ ಜಮೀನುಗಳಿಗೆ ನೀರು ನುಗ್ಗಿದ್ದು, ಕಬ್ಬು ಬೆಳೆ, ಭತ್ತ ತೆಂಗು, ಅಡಿಕೆ, ಬಾಳೆ ಅಧಿಕವಾಗಿ ನೀರು ನುಗ್ಗಿ ಸಂಪೂರ್ಣವಾಗಿ ನಾಶವಾಗಿದೆ.

ನಾಲಾ ಏರಿ ಒಡೆದ ಪರಿಣಾಮ ಈ ಭಾಗದ ರೈತರಾದ ಶಿವಲಿಂಗೇಗೌಡ, ಅನುಸೂಯ ಕರೀಗೌಡ, ಕೃಷ್ಣ, ಸ್ವಾಮಿಗೌಡ, ಕೆ. ಗೋಪಾಲ್, ಚೆನ್ನೇಗೌಡ, ಚಂದ್ರು, ಶಂಕರ್ ನಾರಾಯಣ್, ನಿಂಗೇಗೌಡ, ಕೆ.ಎನ್. ಕುಮಾರ್, ಶ್ರೀಧರ್, ರವಿತಮ್ಮಣ್ಣೇಗೌಡ, ದೊಡ್ಡಣ್ಣಯ್ಯ, ಬಸವೇಗೌಡ, ಮಹದೇವು ಸೇರಿದಂತೆ ಕೆನ್ನಾಳು ಗ್ರಾಮಗಳ ರೈತರ ಜಮೀನುಗಳು ಸಹ ಮುಳುಗಡೆಗೊಂಡು ಜೊತೆಗೆ ಜಮೀನುಗಳಲ್ಲಿ ನೀರಿನ ಹರಿವಿನಿಂದಾಗಿ ಬೆಳೆ ಕೊಚ್ಚಿ ಹೋಗಿದೆ. ಇದರಿಂದ ಬೆಳೆ ನಷ್ಟಗೊಳಗಾದ ರೈತರು ಕಂಗಾಲಾಗಿದ್ದಾರೆ. ಸ್ಥಳಕ್ಕೆ ನೀರಾವರಿ ಅಧಿಕಾರಿಗಳು ಧಾವಿಸಿ ಸಿಡಿಎಸ್ ನಾಲೆಯ ನೀರನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದಾಗಿ ತಿಳಿಸಿದ್ದಾರೆ. ಅತಿವೃಷ್ಟಿಯಿಂದಾಗಿ ಬೆಳೆ ಹಾಳಾಗಿರುವ ರೈತರ ಸಂಕಷ್ಟಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಮೂರನೇ ಪುಟದಿಂದ

ವರಿಷ್ಠರ ಬ್ರೇಕ್!

ಮೊದಲು ಕಡಿವಾಣ ಹಾಕಿ ಎಂದು ವೇಣುಗೋಪಾಲ್ ಮುಖ್ಯಮಂತ್ರಿ ಅವರಿಗೆ ಕಿವಿಮಾತು ಹೇಳಿದ್ದಾರೆ. ವೇಣುಗೋಪಾಲ್ ಸಲಹೆ ನಂತರ ಮುಖ್ಯಮಂತ್ರಿ ನಿನ್ನೆ ಸಂಪುಟ ಸಭೆ ನಂತರ ನಡೆದ ಅನೌಪಚಾರಿಕ ಸಭೆಯಲ್ಲಿ ಗುತ್ತಿಗೆದಾರರ ಆರೋಪವನ್ನು ವರಿಷ್ಠರು ಗಂಭೀರವಾಗಿ ತೆಗೆದುಕೊಂಡಿರುವುದನ್ನು ಸಹೋದ್ಯೋಗಿಗಳಿಗೆ ವಿವರಿಸಿದ್ದಾರೆ.

ಇದೂ ಸೇರಿದಂತೆ ಕೆಲವು ವಿಚಾರಗಳ ಬಗ್ಗೆ ಚರ್ಚಿಸುವ ಉದ್ದೇಶದಿಂದಲೇ ನಾನು ಔತಣಕೂಟ ಸಭೆ ಇಟ್ಟುಕೊಂಡಿದ್ದು, ಅಲ್ಲಿ ಎಲ್ಲರೂ ಮುಕ್ತವಾಗಿ ಚರ್ಚೆ ಮಾಡಿ, ಸರ್ಕಾರ ಮತ್ತು ಪಕ್ಷದ ವರ್ಚಸ್ಸು ಹೆಚ್ಚಿಸಲು ಕಾರ್ಯಕ್ರಮ ರೂಪಿಸೋಣ ಎಂದಿದ್ದಾರೆ. ಸಂಪುಟ ವಿಸ್ತರಣೆಗೆ ಎಐಸಿಸಿ ನಿರಾಕರಿಸಿದ ಮಾಹಿತಿ ತಿಳಿಯುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪುನರ್ ರಚನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಅದು ಮುಖ್ಯಮಂತ್ರಿ ಹಾಗೂ ವರಿಷ್ಠರಿಗೆ ಬಿಟ್ಟ ವಿಚಾರ ಎಂದು ಹೇಳುವ ಮೂಲಕ ಜಾರಿಕೊಂಡಿದ್ದರು.

ಶೇ. 80 ಕಮಿಷನ್; ವರಿಷ್ಠರ ಛಾಟಿ!

ಆರೋಪಗಳಿಗೆ ಸ್ಪಷ್ಟನೆ ಕೊಡಿಸಿ ಮತ್ತು ಅವರ ಬೇಡಿಕೆಗಳಿಗೆ ಸ್ಪಂದಿಸಿ ಎಂದು ಸಲಹೆ ನೀಡಿದ್ದಾರೆ. ನವೆಂಬರ್‌ನಲ್ಲಿ ಅಧಿಕಾರ ಹಸ್ತಾಂತರ ಆಗುವುದೆಂಬ ಚರ್ಚೆಗಳ ವೇಳೆಯೇ ಪಕ್ಷದ ವರಿಷ್ಠರು ಸಂದೇಶ ಕಳುಹಿಸಿರುವುದು ಮುಖ್ಯಮಂತ್ರಿ ಅವರಿಗೆ ಸ್ವಲ್ಪ ಇರುಸು–ಮುರುಸು ಉಂಟು ಮಾಡಿದೆ.

ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸಚಿವರುಗಳಿಗೆ ನೀಡಿರುವ ಮುಕ್ತ ಅವಕಾಶಗಳಿಂದ ಇಂತಹ ಆರೋಪಗಳು ಎದುರಾಗಿವೆ ಎಂದು ಬೇಸರಗೊಂಡ ಮುಖ್ಯಮಂತ್ರಿ, ಔತಣಕೂಟ ಸಭೆ ಕರೆದು ಸಹೋದ್ಯೋಗಿಗಳ ಸಮ್ಮುಖದಲ್ಲೇ ಎಲ್ಲಾ ವಿಷಯವನ್ನು ಮುಕ್ತವಾಗಿ ಚರ್ಚಿಸಲು ತೀರ್ಮಾನಿಸಿದ್ದಾರೆ. ಗುರುವಾರ ನಡೆದ ಸಂಪುಟ ಸಭೆ ನಂತರ ಪಕ್ಷದ ವರಿಷ್ಠರ ಸಂದೇಶ ರವಾನಿಸಿ, ಗುತ್ತಿಗೆದಾರರ ಆರೋಪವನ್ನು ಯಾರು ಹೊರುತ್ತೀರಿ. ಇದರಲ್ಲಿ ನಿಮ್ಮ ಪಾತ್ರವಿದೆಯೋ ಅಥವಾ ನಿಮ್ಮ ಸುತ್ತಮುತ್ತಲಿನವರ ಪಾತ್ರವೋ ಎಂಬುದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಈ ಆರೋಪ ನನ್ನ ಸರ್ಕಾರ ಮತ್ತು ಪಕ್ಷದ ಮೇಲೆ ಪರಿಣಾಮ ಬೀರಿದೆ. ಇದಕ್ಕೆ ಕಡಿವಾಣ ಹಾಕಬೇಕು. ಮುಂದೆ ಇಂತಹ ಆರೋಪಗಳು ಎದುರಾಗದಂತೆ ಕ್ರಮ ಕೈಗೊಳ್ಳಲು ಸೋಮವಾರ ಕಾವೇರಿ ನಿವಾಸದಲ್ಲಿ ಸಭೆ ಸೇರಿ ಚರ್ಚಿಸೋಣ ಎಂದಿದ್ದಾರೆ.

64 ಜನರ ಒಳಗೊಂಡ ತಜ್ಞರ ಸಮಿತಿ!

ರೈತ ಸಂಘಟನೆಯ ಸುನಂದಾ ಜಯರಾಂ, ಡಾ.ಮಾಲತಿ ಪಟ್ಟಣಶೆಟ್ಟಿ, ಪ್ರೊ.ಜಿ.ಅಬ್ದುಲ್ ಬಷೀರ್, ಎಚ್.ಕೆ.ಸುಬ್ಬು ಹೊಲೆಯಾರ್, ಡಾ.ಅಪ್ಪಗೆರೆ ತಿಮ್ಮರಾಜು, ಶ್ರೀನಿವಾಸ ಜಿ. ಕಪ್ಪಣ್ಣ, ಡಾ.ತುಳಸಿ ರಾಮಚಂದ್ರ, ಎನ್.ಆರ್.ವಿಶುಕುಮಾರ್, ಪ್ರೊ.ರವಿವರ್ಮ ಕುಮಾರ್, ಗುಜ್ಜಾರಪ್ಪ ಸೇರಿದಂತೆ 64 ಸದಸ್ಯರಿದ್ದಾರೆ.

ಬಾಲಕಿಗೆ 19 ಬಾರಿ ಇರಿದಿದ್ದ ದುಷ್ಕರ್ಮಿ

ಇರಿದು ಬರ್ಬರವಾಗಿ ಹತ್ಯೆ ಮಾಡಿದ್ದಾಗಿ ಆತ ಹೇಳಿದ್ದಾನೆ. ಪ್ರಕರಣ ಕುರಿತು ಇಂದು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಆರೋಪಿ ಕಾರ್ತಿಕ್ ಬಸ್ ಕ್ಲೀನರ್ ಆಗಿದ್ದು, ಆತ ಸಿದ್ದಲಿಂಗಪುರದವನು ಎಂದು ಹೇಳಿಕೊಂಡಿದ್ದಾನೆ. ಕಳೆದ 2 ವರ್ಷದಿಂದ ಆತ ಅಲ್ಲಿ ಇಲ್ಲ. ಆದರೆ, ಅವನು ಕೊಳ್ಳೇಗಾಲದವನು. ಆತನ ವಿರುದ್ಧ 2023ರಲ್ಲಿ ಸಿದ್ದಲಿಂಗಪುರದಲ್ಲಿ ಪಕ್ಕದ ಮನೆ ಮಹಿಳೆ ಮೇಲೆ ಹಲ್ಲೆ ಮಾಡಿದ ಪ್ರಕರಣ ಮತ್ತು 2019ರಲ್ಲಿ ಕೊಳ್ಳೇಗಾಲದಲ್ಲಿ ಸರ್ಕಾರಿ ನೌಕರರಾದ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿ ಕೊಲೆಗೆ ಯತ್ನಿಸಿದ ಪ್ರಕರಣ ದಾಖಲಾಗಿದೆ. ಕೊಳ್ಳೇಗಾಲದ ಪ್ರಕರಣದಲ್ಲಿ ಕಳೆದ ಫೆಬ್ರವರಿ ತಿಂಗಳಿನಲ್ಲಿ ಕಾರ್ತಿಕ್‌ಗೆ 4 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದ್ದು, ಹೈಕೋರ್ಟ್‌ನಲ್ಲಿ ಜಾಮೀನು ಪಡೆದು ಕಳೆದ 3 ತಿಂಗಳ ಹಿಂದಷ್ಟೇ ಜೈಲಿನಿಂದ ಜಾಮೀನಿನ ಮೇಲೆ ಹೊರ ಬಂದು, ಈ ಕೃತ್ಯವೆಸಗಿದ್ದಾನೆ.

ಆರೋಪಿಯನ್ನು ಬಂಧಿಸಿ ಕೆಲ ದಾಖಲಾತಿಗಳಿಗಾಗಿ ಕರೆದೊಯ್ಯುತ್ತಿದ್ದಾಗ ಮೇಟಗಳ್ಳಿ ಠಾಣಾ ವ್ಯಾಪ್ತಿಯ ರೈಲ್ವೆ ಗೂಡ್ಸ್ ಶೆಡ್ ಬಳಿ ಬಹಿರ್ದೆಸೆಗೆಂದು ವಾಹನದಿಂದ ಇಳಿದಾಗ ಪೊಲೀಸ್ ಸಿಬ್ಬಂದಿ ಮೇಲೆ ಸ್ಥಳದಲ್ಲಿ ಬಿದ್ದಿದ್ದ ಬಿಯರ್ ಬಾಟಲಿ ಎತ್ತಿಕೊಂಡು ಹಲ್ಲೆ ಮಾಡಲೆತ್ನಿಸಿದ. ಆಗ ಜೊತೆಯಲ್ಲಿದ್ದ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ, ಮೊದಲು ಗಾಳಿಯಲ್ಲಿ ಗುಂಡು ಹಾರಿಸಿ, ಕೊನೆಗೆ ಪರಾರಿಯಾಗಲೆತ್ನಿಸಿದ ಕಾರ್ತಿಕ್ ಕಾಲಿಗೆ ಗುಂಡು ಹಾರಿಸಿದ್ದಾರೆ. ಗಾಯಗೊಂಡ ಆತನನ್ನು ಕೆ.ಆರ್.ಆಸ್ಪತ್ರೆ ಜೈಲು ವಾರ್ಡಿನಲ್ಲಿ ದಾಖಲಿಸಲಾಗಿದ್ದು, ಇಂದು ಕೆಆರ್‌ಎಸ್ ರಸ್ತೆಯ ಟ್ರಾಮಾ ಕೇರ್ ಸೆಂಟರ್‌ಗೆ ಕರೆದೊಯ್ದು ಸ್ಕ್ಯಾನಿಂಗ್ ಮಾಡಿಸಲಾಗಿದೆ ಎಂದು ಅವರು ತಿಳಿಸಿದರು.

ತವರು ಜಿಲ್ಲೆಯ ಜನರ ಬಗ್ಗೆ ಕಾಳಜಿಯೇ ಇಲ್ಲ

ಈಗಲೂ ಅದೇ ರೀತಿ ಜಿಲ್ಲೆಯ ಜನರ ಹಿತ ಕಾಯಲು ಕಾಳಜಿ ತೋರಬೇಕು ಎಂದು ಆಗ್ರಹಿಸಿದರು. ದಸರಾ ಸಂದರ್ಭದಲ್ಲಿ ನಾನಾ ವಸ್ತುಗಳ ವ್ಯಾಪಾರ ಮಾಡಿ, ಜೀವನ ಕಟ್ಟಿಕೊಳ್ಳಲು ಸಾವಿರಾರು ಬಡ ಜನರು ಕುಟುಂಬ ಸಮೇತರಾಗಿ ಮೈಸೂರಿಗೆ ಬರುತ್ತಾರೆ. ಪ್ರತಿ ವರ್ಷ ಹೀಗೆ ಬರುವುದು ಗೊತ್ತಿದ್ದ ಮೇಲೆ ಅವರಿಗೆ ಸೂಕ್ತ ರಕ್ಷಣಾ ವ್ಯವಸ್ಥೆ ಕಲ್ಪಿಸಬೇಕಿರುವುದು ಸರ್ಕಾರದ ಜವಾಬ್ದಾರಿ. ಯಾರು ಬರುತ್ತಿದ್ದಾರೆ... ಅವರೆಲ್ಲಾ ಎಲ್ಲಿ ಉಳಿದುಕೊಳ್ಳುತ್ತಾರೆ ಎನ್ನುವ ಕನಿಷ್ಠ ಮಾಹಿತಿಯಾದರೂ ಪೊಲೀಸ್ ಇಲಾಖೆಗೆ ಇರಬೇಕಾಗಿತ್ತು. ಬಾಲಕಿ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣ ಅತ್ಯಂತ ಹೇಯವಾದದ್ದು. ಅದನ್ನು ಖಂಡಿಸಲು ಪದಗಳೇ ಇಲ್ಲ. ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಪೊಲೀಸ್ ವ್ಯವಸ್ಥೆ ಹಾಳಾಗಿದೆ. ಹೀಗಾಗಿಯೇ ಮೇಲಿಂದ ಮೇಲೆ ಅಪರಾಧ ಕೃತ್ಯಗಳು ನಡೆಯುತ್ತಿವೆ ಎಂದು ದೂರಿದರು.

ಕಾಂಗ್ರೆಸ್ ಕುಟುಂಬಸ್ಥರ ದಸರಾ: ಈ ಬಾರಿಯ ದಸರಾ ಮಹೋತ್ಸವ ಕಾಂಗ್ರೆಸ್ಸಿನ ಕೆಲ ರಾಜಕಾರಣಿಗಳು ಮತ್ತು ಅವರ ಕುಟುಂಬಸ್ಥರಿಗೆ ಮಾತ್ರ ಸೀಮಿತವಾಗಿತ್ತು. ದಸರಾ ಆರಂಭಕ್ಕೂ ಮುನ್ನವೂ ಅನೇಕ ಗೊಂದಲಗಳು ನಡೆದಿದ್ದವು. ಜಂಬೂ ಸವಾರಿಯ ದಿನ ಸಾವಿರಾರು ಜನರು ತಮ್ಮ ಬಳಿ ಪಾಸ್ ಇದ್ದರೂ ಅರಮನೆಯೊಳಗೆ ಬರಲು ಸಾಧ್ಯವಾಗಲಿಲ್ಲ. ಪಾಸ್ ವ್ಯವಸ್ಥೆಗೆ ಪಾರದರ್ಶಕತೆ ತನ್ನಿ ಎಂದು ನಾವು ಅನೇಕ ಬಾರಿ ಹೇಳಿದ್ದೇವೆ. ನಮಗ್ಯಾರಿಗೂ ಪಾಸ್ ಬೇಡ. ಸರ್ಕಾರಿ ಶಿಷ್ಟಾಚಾರದಂತೆ ಕಾರ್ಯಕ್ರಮಗಳಿಗೆ ಬಂದು ಹೋಗುತ್ತೇವೆ. ಆದರೆ ಜಂಬೂ ಸವಾರಿಗೆ ಟಿಕೆಟ್ ವ್ಯವಸ್ಥೆ ಮಾಡಿ. ಎಷ್ಟು ಟಿಕೆಟ್ ಮುದ್ರಿಸಿದ್ದೇವೆ, ಯಾರಿಗೆ ಎಷ್ಟು ಕೊಟ್ಟಿದ್ದೇವೆ ಎಂಬುದನ್ನು ಪಾರದರ್ಶಕವಾಗಿ ನಿರ್ವಹಣೆ ಮಾಡಿ. ಆಗ ಮಾತ್ರವೇ ಈ ಸಮಸ್ಯೆಗೆ ಪರಿಹಾರ ಸಾಧ್ಯ ಎಂದರು.

70 ಕೋಟಿ ರೂ. ವಾಪಸ್: ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಉದ್ದೇಶಪೂರ್ವಕವಾಗಿ ಮುಂದೂಡುತ್ತಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳು ಇಲ್ಲದ ಕಾರಣ 15ನೇ ಹಣಕಾಸು ಯೋಜನೆಯಡಿ ಬಂದಿದ್ದ 60–70 ಕೋಟಿ ರೂ. ಅನುದಾನ ಕೇಂದ್ರಕ್ಕೆ ವಾಪಸ್ ಹೋಗಿದೆ. ಆದ್ದರಿಂದ ಶೀರ್ಘದಲ್ಲೇ ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮಳೆಯಿಂದಾಗಿ ಕ್ಯಾತಮಾರನಹಳ್ಳಿ ಭಾಗದಲ್ಲಿ ಒಳಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಹೇಳುವವರು ಕೇಳುವವರು ಯಾರೂ ಇಲ್ಲವಾಗಿದ್ದಾರೆ. ಅಧಿಕಾರಿಗಳು ಇರಬಹುದು, ಅವರು ಜನಪ್ರತಿನಿಧಿಗಳಲ್ಲ. ಸ್ಥಳೀಯವಾಗಿ ಜನಪ್ರತಿನಿಧಿ ಹೇಳಬೇಕು, ಅದರಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಕಾಂಗ್ರೆಸ್ ಮಾತು ಮಾತಿಗೂ ನಮ್ಮದು ಸಂವಿಧಾನ ಪರವಾದ ಪಕ್ಷ ಎಂದು ಹೇಳಿ ಕೊಳ್ಳುತ್ತದೆ. ಆಂದರೆ ಆ ಸಂವಿಧಾನದ ಪ್ರಕಾರವೇ ನಡೆದು ಕೊಳ್ಳಬೇಕಲ್ಲವೇ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ, ಮಾಜಿ ಮೇಯರ್ ಶಿವಕುಮಾರ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಮಹೇಶ್ ಕೇಬಲ್, ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಸಹ ಸಂಚಾಲಕ ಸಂತೋಷ್ ಕುಮಾರ್ ಇದ್ದರು.

ಕಾನೂನು ಸುವ್ಯವಸ್ಥೆ ಕಾಪಾಡಿ ನಾಗರಿಕ ಸಮಾಜಕ್ಕೆ ನೆಮ್ಮದಿಕೊಡುವಲ್ಲಿ ಸರ್ಕಾರ ಸಂಪೂರ್ಣ ವಿಫಲ

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಕಿಡಿ

ಮೈಸೂರು, ಅ.10–ನಾಡಹಬ್ಬ ದಸರೆಗೆ ಬಲೂನಿನ ಬಣ್ಣ ತುಂಬಲು ಬಂದು ಬದುಕು ಬರಡಾಗಿಸಿಕೊಂಡ ಅಲೆಮಾರಿ ಕುಟುಂಬ, ಆಟ–ಪಾಠದಲ್ಲಿ ಬಾಲ್ಯ ಕಳೆಯಬೇಕಿದ್ದ ಹತ್ತರ ಬಾಲೆ ಮೈಸೂರಿನಲ್ಲಿ ಭಯಾನಕ ಸ್ಥಿತಿಯಲ್ಲಿ ಅತ್ಯಾಚಾರಕ್ಕೊಳಗಾಗಿ ಬರ್ಬರ ಕೊಲೆಯಾಗಿರುವ ವರದಿ ನಾಗರಿಕ ಸಮಾಜ ತಲೆತಗ್ಗಿಸುವ ಅಮಾನುಷ ದುರಂತವಾಗಿದ್ದು, ಈ ಪೈಶಾಚಿಕ ಘಟನೆ ಅತ್ಯಂತ ಖಂಡನೀಯ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ತಿಳಿಸಿದ್ದಾರೆ.


ರಘು ಕೌಟಿಲ್ಯ

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಾಂಸ್ಕೃತಿಕ ನಗರ ಮೈಸೂರು ಕ್ರೈಂ ನಗರವಾಗಿ ಮಾರ್ಪಡುತ್ತಿದೆ. ನಾಡಹಬ್ಬ ದಸರೆಯ ಸಡಗರ ಮರೆಯುವ ಮುನ್ನವೇ ಒಂದರ ಮೇಲೊಂದು ಕೊಲೆ, ಅತ್ಯಾಚಾರ ಘಟನೆಗಳ ಸುದ್ದಿ ಕೇಳಿ ಜನರು ಬೆಚ್ಚಿ ಬೀಳುವ ಆತಂಕಕಾರಿ ಬೆಳವಣಿಗೆ ಸೃಷ್ಟಿ ಯಾಗಿದೆ. ಶಾಂತಿ, ಸುವ್ಯವಸ್ಥೆಯ ಸುರಕ್ಷಿತ ನಗರವೆಂದು ಖ್ಯಾತಿ ಪಡೆದಿದ್ದ ಮೈಸೂರು ನಗರದ ಒಡಲಲ್ಲಿ ಇತ್ತೀಚೆಗೆ ಡ್ರಗ್ಸ್ ಫ್ಯಾಕ್ಟರಿ ಕಾರ್ಯನಿರ್ವಹಿಸುತ್ತಿತ್ತು ಎಂಬ ಆಘಾತಕಾರಿ ಸುದ್ದಿ ರಾಜ್ಯವನ್ನೇ ಬೆಚ್ಚಿಬೀಳಿಸಿತ್ತು. ಆನಂತರ ಒಂದರ ಮೇಲೊಂದರಂತೆ ಕೊಲೆ–ಸುಲಿಗೆಯ ವರದಿಗಳು ಪ್ರಕಟವಾಗುತ್ತಿದೆ ಎಂದಿದ್ದಾರೆ.

ಮೊನ್ನೆಯಷ್ಟೇ ವಸ್ತುಪ್ರದರ್ಶನ ಮೈದಾನದ ಬಳಿ ಯುವಕನೊಬ್ಬನ ಕೊಲೆಯಾದ ಸ್ಥಳದಲ್ಲೇ 10 ವರ್ಷದ ಹೆಣ್ಣು ಮಗುವಿನ ಅತ್ಯಾಚಾರ ನಡೆಸಿ, ಬರ್ಬರವಾಗಿ ಕೊಲೆಗೈದ ಘಟನೆ ಅತ್ಯಂತ ಹೇಯ ಹಾಗೂ ಮಾನವೀಯ ಹೃದಯವನ್ನು ಕಲಕುತ್ತಿದೆ. ನೆಲೆಯಿಲ್ಲದೇ ಮೈದಾನದಲ್ಲಿ ಕುಟುಂಬದೊಂದಿಗೆ ಮಲಗಿ ನಿದ್ರಿಸುತ್ತಿದ್ದ ಮಗುವನ್ನು ಹೊತ್ತೊಯ್ದು ಅತ್ಯಾಚಾರ ಹಾಗೂ ಕೊಲೆ ನಡೆಸಲಾಗಿದೆ ಎಂದು ವರದಿಯಾಗಿರುವುದನ್ನು ಗಮನಿಸಿದರೆ ಮೈಸೂರು ನಗರದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ನೆಲಕಚ್ಚಿರುವುದನ್ನು ಪ್ರತಿಬಿಂಬಿಸುತ್ತಿದೆ. ಸ್ವತಃ ಮುಖ್ಯಮಂತ್ರಿಗಳ ತವರು ಜಿಲೆಯಲ್ಲಿ ಈ ಪರಿಯ ಕೊಲೆ, ಸುಲಿಗೆ, ಹಸುಳೆಗಳ ಮೇಲೆ ಪೈಶಾಚಿಕ ಕೃತ್ಯ ಎಸಗುತ್ತಿರುವುದು ನಾಚಿಕೆಗೇಡಿನ ಪರಮಾವಧಿಯಾಗಿದೆ.

ಕಾಂಗ್ರೆಸ್ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡಿ ನಾಗರಿಕ ಸಮಾಜಕ್ಕೆ ನೆಮ್ಮದಿ ಕೊಡಲು ಸಂಪೂರ್ಣ ವಿಫಲವಾಗಿದೆ. ಕೂಡಲೇ ಸರ್ಕಾರ ಮೈಸೂರಿನ ಪೊಲೀಸ್ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಿ ಕಾನೂನು ಬಿಗಿಗೊಳಿಸಲಿ. ಮುಗ್ಧ ಬಾಲೆಯ ಮೇಲೆ ನಡೆದಿರುವ ಈ ರಾಕ್ಷಸಿ ಕೃತ್ಯವೆಸಗಿದ ಪಾತಕಿಗಳನ್ನು ಪತ್ತೆ ಹುಚ್ಚುವ ನಿಟ್ಟಿನಲ್ಲಿ ದುರುಳನೊಬ್ಬನ ಬಂಧನ ಹಾಗೂ ಆತನ ಮೇಲೆ ಗುಂಡು ಹಾರಿಸಿರುವ ಪೊಲೀಸರ ಕ್ರಮ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಬಾಲಕಿ ಮೇಲಿನ ಕ್ರೌರ್ಯಕ್ಕೆ ಬೆಚ್ಚಿಬಿದ್ದಿರುವ ಜನರು ಹಾಗೂ ಸಂಘ–ಸಂಸ್ಥೆಗಳ ಆಕ್ರೋಶ ತಣ್ಣಗಾಗಿಸಲು ಪೊಲೀಸರು ಕಥೆ ಹೆಣೆಯುತ್ತಿದ್ದಾರೆ ಎಂಬ ಮಾತು ಜನವಲಯದಲ್ಲಿ ಕೇಳಿಬರುತ್ತಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವರಿಗೂ ಜನ ತೆರಿಗೆ ಕಟ್ಟಬೇಕಿದೆ!

ಜನಾಂಗದ ಬಾಲಕಿಯ ಹತ್ಯೆ ಯಾಗಿದೆ. ಅಂತಃಕರಣವೇ ಇಲ್ಲದಂತೆ ಸಿಎಂ ಸುಮ್ಮನಿದ್ದಾರೆ ಎಂದರು.

ಮಿನಿಟ್ ಕಾಟ ಜಾಸ್ತಿಯಾಗಿದೆ: ಪೊಲೀಸ್ ಇಲಾಖೆಯಲ್ಲಿ ಮಿನಿಟ್ ಕಾಟ ಹೆಚ್ಚಾಗಿದೆ. ಯಾವುದೇ ಅಧಿಕಾರಿಗೆ ವರ್ಗಾವಣೆ ಆಗಬೇಕಾದರೆ ಸಿಎಂ ಪುತ್ರನಿಗೆ ತೆರಿಗೆ ಕಟ್ಟಬೇಕು. ಕಲೆಕ್ಷನ್ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ನಡುವೆ ಯಾರು ಕಲೆಕ್ಷನ್ ಮಾಡಿ ರಾಹುಲ್ ಗಾಂಧಿಗೆ ಕೊಡುವುದರಲ್ಲಿ ಪೈಪೋಟಿ ನಡೆಯುತ್ತಿದೆ. ಹಾಗಾಗಿ ಮೈಸೂರು ಪೊಲೀಸರಿಗೆ ಮಿನಿಟ್ ಕಾಟ, ವರ್ಗಾವಣೆ ಕಾಟ, ಜಾತಿ ಕಾಟ ಹೆಚ್ಚಾಗಿದೆ. ಮೈಸೂರಿನಲ್ಲಿ ಭಾರೀ ರೀತಿಯಲ್ಲಿ ಇಸ್ಪೀಟ್ ದಂಧೆ ನಡೆಯುತ್ತಿದೆ. ಅದರ ಮೇಲೂ ಪೊಲೀಸರು ರೈಡ್ ಮಾಡಲು ಹೆದರುತ್ತಿದ್ದಾರೆ. ಯಾವ ಸಚಿವನ, ಶಾಸಕನ ಫೋನ್ ಬರುತ್ತದೋ ಎಂದು ಪೊಲೀಸರಿಗೆ ಭಯ ಆಗುತ್ತೆ. ಮಿನಿಟ್‌ಗೆ ದುಡ್ಡು ತೆಗೆದುಕೊಂಡು ಪೊಲೀಸರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಆರೋಪಿಸಿದರು.

ಡಾ. ಯತೀಂದ್ರ ವರ್ಗಾವಣೆ ಸಚಿವ: ಸಿಎಂ ಪುತ್ರ ಡಾ.ಯತೀಂದ್ರ ವರ್ಗಾವಣೆ ಸಚಿವರಾಗಿದ್ದಾರೆ. ಸಿಎಂ ಸರ್ ನಿಮ್ಮ ಮಗನಿಗೆ ವರ್ಗಾವಣೆ ದಂಧೆ ನಿಲ್ಲಿಸುವಂತೆ ಬುದ್ಧಿ ಹೇಳಿ. ವರ್ಗಾವಣೆ ಸಚಿವರಿಗೂ ಜನ ತೆರಿಗೆ ಕಟ್ಟಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನೀವೇ ಮಗನಿಗೆ ವಸೂಲಿ ಮಾಡಲು ಬಿಟ್ಟಿದ್ದೀರಾ?


ಪರಮೇಶ್ವರ್‌ಗೆ ಸಿಎಂ ಕುರ್ಚಿ ಆಸೆ: ಗೃಹ ಸಚಿವರು ಕಾನೂನು ಸುವ್ಯವಸ್ಥೆ ಕಾಪಾಡುವ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಸಿದ್ದರಾಮಯ್ಯ ಅವರು ಸಿಎಂ ಕುರ್ಚಿ ಖಾಲಿ ಮಾಡಿದರೆ, ಅದರ ಮೇಲೆ ನನ್ನನ್ನು ಕೂರಿಸಬಹುದು ಎಂದು ಪರಮೇಶ್ವರ್ ಅವರು ಕಾಯುತ್ತಿದ್ದಾರೆ. ಆ ಕಾರಣದಿಂದ ಇಲಾಖೆಯನ್ನೇ ಮರೆತಿದ್ದಾರೆ ಎಂದರು.

ಮೈಸೂರಲ್ಲಿ ಒಂದಾದ ಮೇಲೆ ಒಂದರಂತೆ ಕೊಲೆ ಪ್ರಕರಣ ನಡೆಯುತ್ತಿವೆ. ದಸರಾ ಸಂಭ್ರಮದಲ್ಲಿದ್ದ ಮೈಸೂರಲ್ಲಿ ದಸರಾ ವಸ್ತು ಪ್ರದರ್ಶನದ ಬಳಿ ಯುವಕನೊಬ್ಬನನ್ನು ಹಾಡಹಗಲೆ ಹತ್ಯೆ ಮಾಡಿದ ಪ್ರಕರಣ ಜನರ ಮನಸ್ಸಿಂದ ಮಾಸುವ ಮುನ್ನವೇ ತಂದೆ–ತಾಯಿಯೊಂದಿಗೆ ಮಲಗಿದ್ದ 10 ವರ್ಷದ ಬಾಲಕಿಯನ್ನು ಹೊತ್ತೊಯ್ದು ಅತ್ಯಾಚಾರ ಮಾಡಿ, ಕೊಲೆ ಮಾಡಿರುವ ಪ್ರಕರಣ ಮೈಸೂರನ್ನು ಬೆಚ್ಚಿಬೀಳಿಸಿದೆ. ಈ ಹಿಂದೆ ದೇಶದಲ್ಲಿಯೆ ಅತಿ ದೊಡ್ಡಮಟ್ಟದ ಡ್ರಗ್ಸ್ ಜಾಲ ಮೈಸೂರಲ್ಲಿ ಇದ್ದಿದ್ದನ್ನು ಮಹಾರಾಷ್ಟ್ರ ಪೊಲೀಸರು ಭೇದಿಸಿದ್ದರು. ಈಗ ಸರಣಿ ಕೊಲೆ ಪ್ರಕರಣ ನೋಡಿದರೆ ಮೈಸೂರು ಎತ್ತ ಸಾಗುತ್ತಿದೆ, ಏನಾಗುತ್ತಿದೆ ಎನ್ನಿಸುತ್ತಿದೆ ಎಂದು ವಿಷಾದಿಸಿದರು.

ಕೂಗುಮಾರಿಗಳು ಎಲ್ಲಿದ್ದಾರೆ!: ದಸರಾ ವೇಳೆ ಬಲೂನು ಮಾರಾಟ ಮಾಡಲು ಬಂದ ಮಗುವಿನ ಮೇಲೆ ಅತ್ಯಾಚಾರ ಮಾಡಿ, ಕೊಲೆ ಮಾಡಿರುವ ಪ್ರಕರಣ ನಡೆದಿದ್ದರೂ, ಸರ್ಕಾರ ಯಾವುದೆ ಪ್ರತಿಕ್ರಿಯೆ ನೀಡಿಲ್ಲ. ಸರ್ಕಾರದ ಪ್ರತಿನಿಧಿಯಾಗಿ ಯಾರೊಬ್ಬರು ಯಾಕೆ ಧ್ವನಿ ಎತ್ತಿಲ್ಲ. ಉಕ್ರೇನ್, ರಷ್ಯಾ, ಅಮೇರಿಕಾದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಬಗ್ಗೆ ಮಾತನಾಡುವ ಸಚಿವರು, ಮೈಸೂರಲ್ಲಿ ನಡೆದಿರುವ ಬಾಲಕಿ ಕೊಲೆ ಪ್ರಕರಣದ ಬಗ್ಗೆ ಯಾಕೆ ಮಾತನಾಡುತ್ತಿಲ್ಲ. ಸಚಿವರಾದ ಪ್ರಿಯಾಂಕ ಖರ್ಗೆ, ಸಂತೋಷ್ ಲಾಡ್, ಚಿಕ್ಕಬಳ್ಳಾಪುರದ ಕೂಗು ಮಾರಿ ಇವರಲ್ಲಿ ಒಬ್ಬರಾದರೂ ಬಾಯಿ ತೆರೆದಿಲ್ಲ. ಎಲ್ಲರನ್ನೂ ಹೆದರಿಸುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿಲ್ಲ ಎಂದು ದೂರಿದರು.

ರಾಜ್ಯ ರಾಜಕಾರಣ: ನಾನು ಪ್ರಸ್ತುತ ರಾಜ್ಯ ರಾಜಕಾರಣದಲ್ಲಿ ಸಕ್ರಿಯನಾಗಿದ್ದೇನೆ. ಲೋಕಸಭಾ ಚುನಾವಣೆಗೆ ಟಿಕೆಟ್ ಸಿಗದ ಕೆಲವರು ಈಗಾಗಲೇ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು, ಶಾಸಕರಾಗಿದ್ದಾರೆ. ಅದರಲ್ಲಿ ಒಬ್ಬರು ಡಿಸಿಎಂ ಕೂಡ ಆಗಿದ್ದಾರೆ. ನಾನು ರಾಜ್ಯ ರಾಜಕಾರಣದಲ್ಲಿ ಮುಂದುವರೆಯಲು ಬಯಸಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಗೃಹ ಇಲಾಖೆ ವೈಫಲ್ಯಕ್ಕೆ ಖಂಡನೆ



ಮೈಸೂರು, ಅ.10– ರಾಜ್ಯದಲ್ಲಿ ಎರಡೂವರೆ ವರ್ಷಗಳಿಂದ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಗೃಹಸಚಿವ ಡಾ.ಜಿ.ಪರಮೇಶ್ವರ್ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಮೈಸೂರು ನಗರ ಎಸ್ಸಿ ಮೋರ್ಚಾ ಅಧ್ಯಕ್ಷರೂ ಆದ ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ರಾಜ್ಯದಲ್ಲಿ ನಿರಂತರವಾಗಿ ದುರ್ಘಟನೆಗಳು ನಡೆಯುತ್ತಲೇ ಇವೆ ಆದರೂ ಗೃಹ ಇಲಾಖೆ ಕುಂಭಕರ್ಣ ನಿದ್ದೆಯಲ್ಲಿದೆ. ಶಾಂತಿಯ ತಾಣವಾಗಿದ್ದ ಮೈಸೂರಿನಲ್ಲಿ ಇತ್ತೀಚಿಗೆ ಕೊಲೆ, ಸುಲಿಗೆ, ಅತ್ಯಾಚಾರ, ಡ್ರಗ್ ಮಾಫಿಯಾ ಇನ್ನಿತರ ಕಾನೂನು ಬಾಹಿರ ಚಟುವಟಿಕೆಗಳು ಹೆಚ್ಚಾಗಿರುವುದು ಇಲ್ಲಿನ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸಾಕ್ಷಿಯಾಗಿದೆ. ಇದಕ್ಕೆಲ್ಲಾ ಪೊಲೀಸ್ ಇಲಾಖೆಯ ನಿರ್ಲಕ್ಷವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಲೂನ್ ವ್ಯಾಪಾರಕ್ಕೆಂದು ಕಲ್ಬುರ್ಗಿಯಿಂದ ಬಂದಿದ್ದ ಬಡ ಕುಟುಂಬದ ಪುಟ್ಟ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರವೆಸಗಿ, ಹತ್ಯೆ ಮಾಡಿರುವುದು ಪೈಶಾಚಿಕ ಕೃತ್ಯ. ಆರೋಪಿಗೆ ಕಠಿಣಾತಿಕಠಿಣ ಶಿಕ್ಷೆಯಾಗಲೇಬೇಕು. ಮೃತ ಬಾಲಕಿ ಕುಟುಂಬಕ್ಕೆ ರಾಜ್ಯ ಸರ್ಕಾರ ಕೂಡಲೇ 10 ಲಕ್ಷ ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ.

ವೆನಿಜುವೆಲಾದ ಹುಟ್ಟು ಹೋರಾಟಗಾರ್ತಿ ಮಾರಿಯಾ ಮಚಾಡೊಗೆ ನೊಬೆಲ್ ಶಾಂತಿ ಗರಿ



ಮಾರಿಯಾ ಮಚಾಡೊ

ಸ್ಟಾಕ್‌ಹೋಮ್, ಅ.10– 2025ನೇ ಸಾಲಿನ ಪ್ರತಿಷ್ಠಿತ ನೊಬೆಲ್ ಶಾಂತಿ ಪ್ರಶಸ್ತಿ ಈ ಬಾರಿ ವೆನಿಜುವೆಲಾದ ವಿಪಕ್ಷ ನಾಯಕಿ ಮಾರಿಯಾ ಕೊರಿನಾ ಮಚಾಡೊ ಅವರಿಗೆ ಲಭಿಸಿದ್ದು, ಈ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಮುಖಭಂಗವಾಗಿದೆ.

ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನವಾಗಿರುವ ಮಾರಿಯಾ ಅವರು ಒಬ್ಬ ನಿರ್ಭೀತ ಹುಟ್ಟು ಹೋರಾಟಗಾರ್ತಿ. ರಾಕ್–ಸ್ಟಾರ್ ಆಕರ್ಷಣೆಯನ್ನು ಹೊಂದಿರುವ ಮರಿಯಾ ಅವರು ಈಗ ವೆನಿಜುವೆಲಾ ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕಿಯಾಗಿದ್ದಾರೆ. ನಾರ್ವೇಜಿಯನ್ ನೊಬೆಲ್ ಸಮಿತಿಯು 2025ರ ಶಾಂತಿ ಪ್ರಶಸ್ತಿಯನ್ನು ವೆನಿಜುವೆಲಾದ ವಿರೋಧ ಪಕ್ಷದ ನಾಯಕಿ ಮಾರಿಯಾ ಮಾಚಾಡೊ ಅವರಿಗೆ ನೀಡಿದೆ.

ಆಯ್ಕೆ ಸಮಿತಿಯ ಪ್ರಕಾರ ಈ ಪ್ರಶಸ್ತಿ ಅವರನ್ನು 'ವೆನಿಜುವೆಲಾದ ಜನರ ಪ್ರಜಾಪ್ರಭುತ್ವ ಹಕ್ಕುಗಳನ್ನು ಉತ್ತೇಜಿಸುವ ಮತ್ತು ಸರ್ವಾಧಿಕಾರದಿಂದ ಪ್ರಜಾಸತ್ತೆಗೆ ಯಯುವ ನ್ಯಾಯಯುತ ಹಾಗೂ ಶಾಂತಿಯುತ ಬದಲಾವಣೆಗೆ ಹೋರಾಟ ನಡೆಸಿದಕ್ಕಾಗಿ' ಗೌರವಿಸುತ್ತದೆ.

ಮಾರಿಯಾ ಮಚಾಡೊ ಅವರು ಪ್ರಜಾಸತ್ತೆ ಮತ್ತು ಮಾನವ ಹಕ್ಕುಗಳ ಪರ ಹೋರಾಟ ನಡೆಸಿದ ಪ್ರಮುಖ ಮಹಿಳಾ ನಾಯಕಿ. ಅನೇಕ ರಾಷ್ಟ್ರಗಳು ಸರ್ವಾಧಿಕಾರಶಾಹಿಯತ್ತ ಸಾಗುತ್ತಿರುವ ಸಮಯದಲ್ಲಿ ಅವರ ಹೋರಾಟವು ಪ್ರಜಾಸತ್ತೆಯ ಶಕ್ತಿಗೆ ವಿಶ್ವದ ಗಮನ ಸೆಳೆದಿದೆ. ಮಚಾಡೊ ಅವರು 11 ಮಿಲಿಯನ್ ಸ್ವೀಡಿಷ್ ಕ್ರೋನರ್ (ಸುಮಾರು 1.2 ಮಿಲಿಯನ್ ಡಾಲರ್) ಮೌಲ್ಯದ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ಡಿಸೆಂಬರ್ 10ರಂದು, ಆಲ್ಫ್ರೆಡ್ ನೊಬೆಲ್ ಅವರ ಮರಣದ ವಾರ್ಷಿಕೋತ್ಸವದಂದು ಓಸ್ಲೋದಲ್ಲಿ ನಡೆಯಲಿದೆ.

ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಮುಖಭಂಗ

ಪ್ರಶಸ್ತಿ ಆಯ್ಕೆ ಸಮಿತಿ ಮೇಲೆ ಅಮೆರಿಕಾ ಕೆಂಡಾಮಂಡಲ

ಅಮೆರಿಕ, ಅ.10– ಈ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಕಡೆಗಣಿಸಿದ್ದಕ್ಕಾಗಿ ಶ್ವೇತಭವನವು ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿ ವಿರುದ್ಧ ಕಿಡಿಕಾರಿದೆ. ಶ್ವೇತಭವನದ ಸಂವಹನ ನಿರ್ದೇಶಕ ಸ್ಟೀವನ್ ಚೆಯುಂಗ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ ಪೋಸ್ಟ್‌ನಲ್ಲಿ, 'ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿಯು ಮತ್ತೊಮ್ಮೆ ಶಾಂತಿಯ ಮೇಲೆ ರಾಜಕೀಯವನ್ನು ಆದ್ಯತೆಯಾಗಿ ಇಟ್ಟಿದೆ' ಎಂದು ಹೇಳಿದ್ದಾರೆ.

ಸಮಿತಿಯ ಈ ನಿರ್ಧಾರವು 'ಜಾಗತಿಕ ಶಾಂತಿಗೆ ನಿಜವಾದ ಬದ್ಧತೆಗಿಂತ ರಾಜಕೀಯ ಪಕ್ಷಪಾತವನ್ನು ಪ್ರತಿಬಿಂಬಿಸುವಂತದ್ದು' ಎಂದು ಟೀಕಿಸಿದ್ದಾರೆ. ಅವರ ಪ್ರಕಾರ ಅಧ್ಯಕ್ಷ ಟ್ರಂಪ್ ಪ್ರಪಂಚದಾದ್ಯಂತ ಶಾಂತಿ ಒಪ್ಪಂದಗಳನ್ನು ಮುಂದುವರಿಸುತ್ತಿದ್ದಾರೆ, ಯುದ್ಧಗಳನ್ನು ಕೊನೆಗೊಳಿಸುತ್ತಿದ್ದಾರೆ ಮತ್ತು ಅನೇಕ ಜೀವಗಳನ್ನು ಉಳಿಸುತ್ತಿದ್ದಾರೆ. ಅಧ್ಯಕ್ಷ ಟ್ರಂಪ್ ಮಾನವೀಯ ಹೃದಯವನ್ನು ಹೊಂದಿದ್ದಾರೆ ಮತ್ತು ಅವರ ಬಲವಾದ ಇಚ್ಛಾಶಕ್ತಿ ಪರ್ವತಗಳನ್ನೂ ಚಲಿಸಬಲ್ಲದು. ಅವರಂತ ನಾಯಕರು ವಿರಳರು ಎಂದಿದ್ದಾರೆ.

ನೊಬೆಲ್ ಶಾಂತಿ ಪ್ರಶಸ್ತಿಯನ್ನು ಟ್ರಂಪ್‌ಗೆ ಅರ್ಪಿಸಿದ ಮಾರಿಯಾ

ಸ್ಟಾಕ್‌ಹೋಮ್, ಅ.10– 2025ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾಗಿರುವ ಮರಿಯಾ ಮಚಾಡೊ ಅವರು ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಅಮೆರಿಕಾ ಅಧ್ಯಕ್ಷ ಟ್ರಂಪ್ ಅವರಿಗೆ ಅರ್ಪಿಸುವುದಾಗಿ ತಿಳಿಸಿದ್ದಾರೆ.

ಈ ಕುರಿತು ಎಕ್ಸ್ ಪೋಸ್ಟ್‌ನಲ್ಲಿ ಹರ್ಷ ವ್ಯಕ್ತಪಡಿಸಿರುವ ಅವರು, ನೊಬೆಲ್ ಶಾಂತಿ ಪಾರಿತೋಷಕವು ಎಲ್ಲಾ ವೆನಿಜುವೆಲಾ ಜನರ ಹೋರಾಟಕ್ಕೆ ಸಿಕ್ಕ ಮನ್ನಣೆಯಾಗಿದೆ. ಈ ಪುರಸ್ಕಾರವನ್ನು ವೆನಿಜುವೆಲಾದ ದುಃಖಿತ ಜನರು ಹಾಗೂ ಪ್ರಜಾಪ್ರಭುತ್ವದ ಚಳವಳಿಗೆ ನಿರ್ಣಾಯಕ ಬೆಂಬಲ ನೀಡಿದ ಡೊನಾಲ್ಡ್ ಟ್ರಂಪ್ ಅವರಿಗೆ ಅರ್ಪಿಸುವುದಾಗಿ ತಿಳಿಸಿದ್ದಾರೆ.

ನನ್ನ ಎಲ್ಲಾ ವೆನಿಜುವೆಲಾ ಜನರ ಹೋರಾಟಕ್ಕೆ ಇದೊಂದು ಮನ್ನಣೆ ಸಿಕ್ಕಂತಾಗಿದೆ. ಜೊತೆಗೆ ನಮ್ಮ ಕಾರ್ಯವನ್ನು ಪೂರ್ಣಗೊಳಿಸಲು ಹಾಗೂ ಸ್ವಾತಂತ್ರ್ಯ ಪಡೆಯಲು ಉತ್ತೇಜನ ಸಿಕ್ಕಂತಾಗಿದೆ. ನಾವಿಂದು ವಿಜಯದ ಹೊಸ್ತಿಲಲ್ಲಿದ್ದೇವೆ. ಎಂದಿಗಿಂತಲೂ ಹೆಚ್ಚಾಗಿ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಸಾಧಿಸಲು ನಮ್ಮ ಪ್ರಮುಖ ಮಿತ್ರರಾಷ್ಟ್ರಗಳಾಗಿ ಅಧ್ಯಕ್ಷ ಟ್ರಂಪ್, ಯುನೈಟೆಡ್ ಸ್ಟೇಟ್ಸ್‌ನ ಜನರು, ಲ್ಯಾಟಿನ್ ಅಮೆರಿಕದ ಜನರು ಮತ್ತು ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳನ್ನು ನಾವು ನಂಬುತ್ತೇವೆ ಎಂದು ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಖಾಸಗಿ ಬಸ್-ಲಾರಿ ಮುಖಾಮುಖಿ ಡಿಕ್ಕಿ

ಕೇರಳದ ಇಬ್ಬರ ದುರ್ಮರಣ

ಹುಣಸೂರು ಬನ್ನಿಕುಪ್ಪೆ ಬಳಿ ಮುಂಜಾನೆ ದುರ್ಘಟನೆ



ಮೈಸೂರು, ಅ.10(ಆರ್‌ಕೆ)– ಖಾಸಗಿ ಬಸ್ ಮತ್ತು ಸಿಮೆಂಟ್ ತುಂಬಿದ ಲಾರಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಕೇರಳದ ಇಬ್ಬರು ಸಾವನ್ನಪ್ಪಿದ ಘಟನೆ ಶುಕ್ರವಾರ ಮುಂಜಾನೆ ಹುಣಸೂರು ಬನ್ನಿಕುಪ್ಪೆ ಬಳಿ ಬೆಂಗಳೂರು–ಬಂಟ್ವಾಳ ಹೆದ್ದಾರಿಯಲ್ಲಿ ಸಂಭವಿಸಿದೆ.

ಕೇರಳ ಖಾಸಗಿ ಬಸ್ ಚಾಲಕ ಸಂಶುದ್ದೀನ್ ಹಾಗೂ ನಿರ್ವಾಹಕ ದಿನೇಶ್ ಸಾವನ್ನಪ್ಪಿದವರು. ಕೋಝಿಕ್ಕೋಡ್‌ನಿಂದ ಬೆಂಗಳೂರಿಗೆ ಹೋಗುತ್ತಿದ್ದ ಬಸ್ಸು ಬಿಳಿಕೆರೆ ಸಮೀಪದ ಬನ್ನಿಕುಪ್ಪೆ ಬಳಿಯ ಹೊಸ ಪೆಟ್ರೋಲ್ ಬಂಕ್ ಎದುರು ರಸ್ತೆ ಎಡ ಬದಿಯಲ್ಲಿ ಮರದ ರೆಂಬೆ ಜೋತು ಬಿದ್ದಿದ್ದರಿಂದ ಚಾಲಕ ಬಸ್ಸನ್ನು ಬಲ ಭಾಗಕ್ಕೆ ತಿರುಗಿಸಿದಾಗ ಎದುರಿನಿಂದ ಬಂದ ಸಿಮೆಂಟ್ ತುಂಬಿದ ಲಾರಿ ಡಿಕ್ಕಿ ಹೊಡೆದಿದೆ.

ಡಿಕ್ಕಿಯ ರಭಸಕ್ಕೆ ಕೇರಳ ಖಾಸಗಿ ಬಸ್ ವಿರುದ್ಧ ದಿಕ್ಕಿಗೆ ತಿರುಗಿ, ಹುಣಸೂರು ಕಡೆಗೆ ಮುಖ ಮಾಡಿ ನಿಂತಿದೆ. ಇತ್ತ 14 ಚಕ್ರದ ಲಾರಿ ಚಾಲಕನ ನಿಯಂತ್ರಣ ಕಳೆದುಕೊಂಡು ಉರುಳಿ ಬಿದ್ದು, ಸಿಮೆಂಟ್ ಚೀಲಗಳಡಿ ಸಿಲುಕಿ ಬಸ್ ಚಾಲಕ ಸಂಶುದ್ದೀನ್ ಹಾಗೂ ದಿನೇಶ್ ಸ್ಥಳದಲ್ಲೇ ಅಸುನೀಗಿದರು. ಗಾಯಗೊಂಡ ಬಸ್‌ನ 14 ಮಂದಿ ಪ್ರಯಾಣಿಕರನ್ನು ಹುಣಸೂರು ಮತ್ತು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಗುರುಪುರ ಬಳಿ ರಾತ್ರಿ ಗಸ್ತಿನಲ್ಲಿದ್ದ ಹುಣಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ ಹಾಗೂ ಸಿಬ್ಬಂದಿ ವಿಷಯ ತಿಳಿಯುತ್ತಿದ್ದಂತೆಯೇ ಅಪಘಾತ ಸ್ಥಳಕ್ಕೆ ಧಾವಿಸಿ ಆ ಮಾರ್ಗದ ವಾಹನಗಳ ಸಂಚಾರಕ್ಕೆ ಬದಲಿ ಮಾರ್ಗದ ವ್ಯವಸ್ಥೆ ಮಾಡಿ, ಗಾಯಾಳುಗಳನ್ನು ಪೊಲೀಸ್ ವಾಹನಗಳಲ್ಲೇ ಆಸ್ಪತ್ರೆಗಳಿಗೆ ಸ್ಥಳಾಂತರಿಸಿದರು. ನಂತರ ಕ್ರೇನ್ ಮತ್ತು ಜೆಸಿಬಿಯನ್ನು ತರಿಸಿಕೊಂಡು ಸಿಮೆಂಟ್ ಚೀಲಗಳನ್ನು ತೆರವುಗೊಳಿಸಿ, ಅವುಗಳ ಅಡಿಯಲ್ಲಿ ಸಿಲುಕಿದ್ದ ಇಬ್ಬರ ಮೃತದೇಹಗಳನ್ನು ಹೊರ ತೆಗೆದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಲಾಯಿತು.

ಗಾಯಗೊಂಡವರ ಪೈಕಿ, ಲಾರಿ ಚಾಲಕನಿಗೆ ಕಾಲಿನ ಮೂಳೆ ಮುರಿದಿದ್ದು, ಉಳಿದವರು ಆಸ್ಪತ್ರೆಗಳಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಬಿಳಿಕೆರೆ ಠಾಣೆ ಸಬ್‌ಇನ್ಸ್‌ಪೆಕ್ಟರ್ ಲಕ್ಷ್ಮಮ್ಮ ತಿಳಿಸಿದ್ದಾರೆ. ಘಟನಾ ಸ್ಥಳಕ್ಕೆ ಅಡಿಷನಲ್ ಎಸ್‌ಪಿ ನಾಗೇಶ್ ಅವರು ಭೇಟಿ ನೀಡಿ ಪರಿಶೀಲಿಸಿದರು. ಅಪಘಾತದಿಂದಾಗಿ ಈ ಮಾರ್ಗದಲ್ಲಿ ಸುಮಾರು ಎರಡು ಗಂಟೆ ಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಮರದ ರೆಂಬೆ, ಬಸ್, ಲಾರಿ ಮತ್ತು ಸಿಮೆಂಟ್ ಚೀಲಗಳ ತೆರವುಗೊಳಿಸಿದ ಬಳಿಕ ಸಂಚಾರ ಪುನರಾರಂಭವಾಯಿತು.

ಜಾತಿಗಣತಿ ಸಮೀಕ್ಷೆಯಿಂದ ಸರ್ಕಾರಿ ಶಾಲೆ ಮಕ್ಕಳಿಗೆ ಹಿನ್ನಡೆ

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕೆ
- ಗ್ರಾಮೀಣ ಮಕ್ಕಳ ಶೈಕ್ಷಣಿಕ ಭವಿಷ್ಯಕ್ಕೆ ಪೆಟ್ಟು

ಬೆಂಗಳೂರು, ಅ. 10(ಕೆಎಂಶಿ)– ರಾಜ್ಯ ಕಾಂಗ್ರೆಸ್ ಸರ್ಕಾರ ಪೂರ್ವ ತಯಾರಿ ಇಲ್ಲದೆ ಆತುರಾತುರವಾಗಿ ಜಾತಿಗಣತಿ ವಿಷಯದಲ್ಲಿ ತೀರ್ಮಾನ ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿಗಣತಿ ಸಮೀಕ್ಷೆಯಿಂದ ಗಣತಿದಾರ ಶಿಕ್ಷಕ ವೃಂದಕ್ಕೂ ಸಮಸ್ಯೆ ಆಗುತ್ತಿದೆ. ಸರ್ಕಾರಿ ಶಾಲೆಯ ರಜಾ ದಿನಗಳನ್ನು ವಿಸ್ತರಿಸಿದ್ದರಿಂದ ವಿಶೇಷವಾಗಿ ಗ್ರಾಮೀಣ ಭಾಗದ ಮಕ್ಕಳಿಗೆ ಸಮಸ್ಯೆ ಆಗಲಿದೆ ಎಂದರು.

ಗ್ರಾಮೀಣ ಭಾಗದ ಸರ್ಕಾರಿ ಶಾಲಾ ಮಕ್ಕಳಿಗೆ ಒಂದೊಂದು ದಿನವೂ ಮಹತ್ವದ್ದು, ಶಾಲೆಗೆ ರಜೆ ಘೋಷಿಸಿ ಮಕ್ಕಳಿಗೂ ತೊಂದರೆ ನೀಡಲಾಗುತ್ತಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮೊದಲ ಸಭೆ ಕಾರ್ಯಸೂಚಿಯನ್ನೇ ಶಾಸಕರಿಗೆ ನೀಡಿಲ್ಲ, ಜಿಬಿಎ ಅಜೆಂಡಾ ಕೊಡದೆ ಗೌಪ್ಯವಾಗಿ ಸಭೆ ಮಾಡುತ್ತಿದ್ದಾರೆ.

ಡಿಸೆಂಬರ್‌ಗೆ ಚುನಾವಣೆ ನಡೆಸುವುದಾಗಿ ಹೇಳುತ್ತಾರೆ, ತಯಾರಿಯೇ ಇಲ್ಲ, ಮೂಲಭೂತ ಸೌಕರ್ಯಗಳಾವುದೂ ಇಲ್ಲದೇ ರಾಜಕೀಯ ಚಟಕ್ಕೆ ಘೋಷಣೆ ಮಾಡಲಾಗುತ್ತಿದೆ. ಬೆಂಗಳೂರು ಜನತೆ ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಡಿ.ಕೆ.ಶಿವಕುಮಾರ್ ಪ್ರಧಾನಮಂತ್ರಿ ಮನೆ ಮುಂದೆಯೂ ಗುಂಡಿ ಇದೆ ಎಂದು ಲೆಕ್ಕ ಹಾಕಲು ಹೊರಟಿದ್ದಾರೆ.



ವಿಜಯೇಂದ್ರ

ಬೆಂಗಳೂರಿನ ಮಹಾಜನತೆ ತುರ್ತಾಗಿ ಗುಂಡಿ ಮುಚ್ಚುವ ಕೆಲಸ ಆಗಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಸರ್ಕಾರದಲ್ಲಿ ಎಲ್ಲ ಗೊಂದಲಮಯವಾಗಿದೆ. ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿಯಾಗಿದ್ದರೂ ಕೃಷಿ ಮತ್ತು ಕಂದಾಯ ಸಚಿವರಿಗೆ ಭೇಟಿ ನೀಡಬೇಕೆಂದು ಅನಿಸುತ್ತಿಲ್ಲ.

ವಿರೋಧ ಪಕ್ಷದ ನಾಯಕರು ಹಾಗೂ ಬಿಜೆಪಿ ನಿಯೋಗ ಕಲ್ಯಾಣ ಕರ್ನಾಟಕಕ್ಕೆ ಭೇಟಿ ನೀಡದೆ ಇದ್ದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಹವಾ ನಿಯಂತ್ರಿತ ಕೊಠಡಿಯಿಂದಲೇ ವಿಡಿಯೊ ಕಾನ್ಫರೆನ್ಸ್ ತೀರ್ಮಾನ ಮಾಡುತ್ತಿದ್ದರು.

ಮಂಡ್ಯದಲ್ಲೂ ಮೈ ಶುಗರ್ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿದೆ. ಎಲ್ಲ ಗೊಂದಲದ ನಡುವೆ ತೇಪೆ ಹಚ್ಚುವ ಕೆಲಸಕ್ಕೆ ಹೊರಟಿದ್ದಾರೆ. ರಿಯಲ್ ಎಸ್ಟೇಟ್ ಮಾಫಿಯಾ ಜೊತೆ ಸರ್ಕಾರ ಆಡಳಿತ ನಡೆಸುವ ಪರಿಸ್ಥಿತಿ ಬಂದಿದೆ. ಆಡಳಿತ ಪಕ್ಷದ ಶಾಸಕರು, ಸಚಿವರ ಪ್ರತಿಕ್ರಿಯೆ ಗಮನಿಸಿದರೆ ಕಾಂಗ್ರೆಸ್‌ನಲ್ಲಿ 'ಆಲ್ ಈಸ್ ನಾಟ್ ವೆಲ್' ಎಂಬುದು ಸ್ಪಷ್ಟವಾಗುತ್ತದೆ. ರಾಜ್ಯ ರಾಜಕೀಯ ವಿದ್ಯಮಾನಗಳು ಬಿಹಾರ ಚುನಾವಣೆ ಬಳಿಕ ತಾರ್ಕಿಕ ಅಂತ್ಯಕ್ಕೆ ಹೋಗಲಿದೆ ಎಂಬುದಾಗಿ ಆಡಳಿತ ಪಕ್ಷದವರೇ ಮಾತನಾಡುತ್ತಿದ್ದಾರೆ ಎಂದರು.

ಅತ್ಯಾಚಾರ–ಹತ್ಯೆಯಾದ ಬಾಲಕಿಗೆ ಮೊಂಬತ್ತಿ ಬೆಳಗಿಸಿ ಸಂತಾಪ ಸೂಚಿಸಿದ ಡಾ. ಯತೀಂದ್ರ ಗೆಳೆಯರ ಬಳಗ



ಮೈಸೂರು, ಅ.10(ವಿವಿಹೆಚ್)– ಮೈಸೂರಿನ ದೊಡ್ಡಕೆರೆ ಮೈದಾನದಲ್ಲಿ ಬಾಲಕಿಯ ಅತ್ಯಾಚಾರ ಮತ್ತು ಹತ್ಯೆ ಖಂಡಿಸಿ ಡಾ. ಯತೀಂದ್ರ ಸಿದ್ದರಾಮಯ್ಯ ಗೆಳೆಯರ ಬಳಗದ ವತಿಯಿಂದ ಶುಕ್ರವಾರ ಮೈಸೂರು ರಾಮಕೃಷ್ಣನಗರದ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಮೊಂಬತ್ತಿ ಹಿಡಿದು ಸಂತಾಪ ಸೂಚಿಸಿದರು.

ಈ ವೇಳೆ ಮಾತನಾಡಿದ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಂಪತ್ ಕುಮಾರ್, ದಸರಾದಲ್ಲಿ ಬಲೂನ್ ಮಾರಲು ಬಂದ ಬಡ ಬಾಲಕಿ ಮೇಲಿನ ಈ ದಾಳಿ ಬಹಳ ನೋವುಂಟು ಮಾಡಿದೆ. ಇಂತಹ ಘೋರ ಕೃತ್ಯ ನಡೆಸಿದವರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳುವ ಮೂಲಕ, ಮುಂದಿನ ದಿನಗಳಲ್ಲಿ ಹೀಗಾಗದಂತೆ ಎಚ್ಚರವಹಿಸಬೇಕು ಎಂದರು.

ಇಂತಹ ಘಟನೆ ಸಾಂಸ್ಕೃತಿಕ ನಗರಿಯಲ್ಲಿ ನಡೆಯಬಾರದಿತ್ತು. ಈ ಕೃತ್ಯ ಎಸಗಿದ ಆರೋಪಿಯನ್ನು 24 ಗಂಟೆಯಲ್ಲಿ ಬಂಧಿಸಿದ ಪೊಲೀಸರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಯತೀಂದ್ರ ಸಿದ್ದರಾಮಯ್ಯ ಬಳಗದಿಂದ ಬಾಲಕಿ ಶವ ಸಂಸ್ಕಾರಕ್ಕಾಗಿ 54 ಸಾವಿರ ರೂ. ಸಹಾಯ ಮಾಡಿದ್ದೇವೆ. ನೊಂದವರ ಪರವಾಗಿ ನಾವು ನಿಲ್ಲುತ್ತೇವೆ ಎಂದು ಹೇಳಿದರು.

ಡಾ. ಭರತ್ ಗೌಡ ಮಾತನಾಡಿ, ಮೈಸೂರು ದಸರಾದಲ್ಲಿ ಬದುಕು ಕಟ್ಟಿಕೊಳ್ಳಲು ಬಂದಿದ್ದವರ ಮೇಲಿನ ಈ ದಾಳಿ ನೋವುಂಟು ಮಾಡಿದೆ. ಅರಬ್ ದೇಶಗಳಲ್ಲಿ ಅತ್ಯಾಚಾರಿಗಳಿಗೆ ಗಲ್ಲುಶಿಕ್ಷೆ ಇರುವಂತೆ ನಮ್ಮ ದೇಶದಲ್ಲೂ ಅದೇ ಕಾನೂನು ಜಾರಿಯಾಗಬೇಕು. ಹೇಯ ಕೃತ್ಯ ಎಸಗುವವರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ವೇಳೆ ಬಲೂನು, ಆಟಿಕೆ ಸಾಮಾಗ್ರಿಗಳನ್ನು ಮಾರಾಟ ಮಾಡಲು ಗುಲ್ಬರ್ಗಾದಿಂದ ಮೈಸೂರಿಗೆ ಬಂದಿದ್ದ ಬಡ ದಂಪತಿಯ ಪುಟ್ಟ ಮಗಳನ್ನು ಹೊತ್ತೊಯ್ದ ಕೆ.ಎಸ್.ಕಾರ್ತಿಕ್ ಎಂಬ ದುಷ್ಕರ್ಮಿ ಅತ್ಯಾಚಾರವೆಸಗಿ, ಹತ್ಯೆಗೈದಿದ್ದ. ಇವನನ್ನು ಪೊಲೀಸರು ಒಂದೇ ದಿನದಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಂತಾಪ ಸೂಚನೆ ವೇಳೆ ಮೈಸೂರು ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಲಖನ್, ಮಾವಿಯ ಷರೀಫ್, ಪ್ರಮೋದ್, ಕಾಂಗ್ರೆಸ್ ಮುಖಂಡ ನವೀನ್, ಸಚಿನ್, ನಿಖಿಲ್ ಹೊಸೂರು, ರವಿ ಕುಮಾರ್, ಚಂದನ್, ರೊನಾಲ್ಡ್ ಸೇರಿದಂತೆ ಹಲವಾರು ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸರ್ಕಾರಿ ಶಾಲೆಗಳ ನಿರ್ವಹಣೆಗೆ 55.33 ಕೋಟಿ ರೂ. ಬಿಡುಗಡೆಗೆ ಅನುಮೋದನೆ

ಮೈಸೂರು, ಅ.10(ಎಸ್‌ಪಿಎನ್)– 2025–26ನೇ ಸಾಲಿನಲ್ಲಿ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸೆಕಂಡರಿ, ಸೀನಿಯರ್ ಸೆಕೆಂಡರಿ ಶಾಲೆಗಳ ನಿರ್ವಹಣೆಗಾಗಿ ಸರ್ಕಾರ ಶಾಲಾನುದಾನ 55.33 ಕೋಟಿ ರೂಗಳನ್ನು 41,506 ಶಾಲೆಗಳಿಗೆ ಬಿಡುಗಡೆಗೆ ರಾಜ್ಯ ಸರಕಾರ ಅನುಮತಿ ನೀಡಿದೆ.

1–30 ವಿದ್ಯಾರ್ಥಿಗಳಿರುವ 17,310 ಶಾಲೆಗಳಿಗೆ ತಲಾ 5 ಸಾವಿರದಂತೆ 8,65,50 ಸಾವಿರ ರೂ., 31–100 ವಿದ್ಯಾರ್ಥಿಗಳಿರುವ 14,097 ಶಾಲೆಗಳಿಗೆ ತಲಾ 12,500 ರೂನಂತೆ 17,62,12,500 ರೂ., 101–250 ವಿದ್ಯಾರ್ಥಿಗಳಿರುವ 7,471 ಶಾಲೆಗಳಿಗೆ 25 ಸಾವಿರ ರೂ.ನಂತೆ 18,67,75 ಸಾವಿರ ರೂ. ಹಾಗೂ ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ 7 ಶಾಲೆಗಳಿಗೆ 50 ಸಾವಿರ ರೂನಂತೆ 3,50,000 ರೂನಂತೆ ಒಟ್ಟು 41,110 ಶಾಲೆಗಳಿಗೆ 53,33,25,000 ರೂ.ಗಳನ್ನು ಬಿಡುಗಡೆಗೊಳಿಸಲು ಅನುಮತಿ ನೀಡಿದೆ.

ಇದರ ಮೊದಲ ಭಾಗವಾಗಿ ಶೇ.50 ರಷ್ಟು ಅಂದರೆ 13.82 ಕೋಟಿ ಅನುದಾನವನ್ನು 5,281 ಶಾಲೆಗಳ ನಿರ್ವಹಣೆಗೆ ರಾಜ್ಯ ಯೋಜನಾ ನಿರ್ದೇಶಕರ ಕಚೇರಿ ಬಿಡುಗಡೆಗೊಳಿಸಿದ್ದು, ಶೂನ್ಯ ದಾಖಲಾತಿ ತೋರಿರುವ 367 ಶಾಲೆಗಳನ್ನು ಹೊರತು ಪಡಿಸಿ 35 ಜಿಲ್ಲೆಗಳಲ್ಲಿರುವ ಶಾಲೆಗಳಿಗೆ ಅನುದಾನ ಬಿಡುಗಡೆಗೊಳಿಸಲು ರಾಜ್ಯ ಯೋಜನಾ ನಿರ್ದೇಶಕರು ಸೂಚನೆ ನೀಡಿದ್ದಾರೆ.


ಈ ಅನುದಾನದಲ್ಲಿ ಶಾಲೆಗಳಿಗೆ ಸ್ಟೇಷನರಿ ವಸ್ತುಗಳು, ಶಾಲೆ ದುರಸ್ಥಿ ಮತ್ತು ಸ್ವಚ್ಛತೆ ಸೇರಿದಂತೆ ಶಾಲಾ ನಿರ್ವಹಣೆಗೆ ಈ ಅನುದಾನ ಬಿಡುಗಡೆಗೊಳಿಸಲಾಗಿದೆ.

ಗಣಿ–ಭೂವಿಜ್ಞಾನ ಇಲಾಖೆಯಲ್ಲಿ ಅಪರೂಪದ ಖನಿಜಗಳು, ಶಿಲಾಪದರಗಳ ಭರಪೂರ್ಣ ಮಾಹಿತಿ




ರಾಮಲಲ್ಲಾ ಮೂರ್ತಿ ಕೆತ್ತನೆಗೆ ಬಳಸಲಾಗಿರುವ ಬಳಪದ ಕಲ್ಲು.

ಮೈಸೂರಲ್ಲೇ ಇದೆ ಅತ್ಯಂತ ಹಳೆಯ ಶಿಲಾಪದರ!




ಭೂಮಿ ಪ್ರತಿಕೃತಿ



ಪಾರದರ್ಶಕ ಬೆಣಚು ಕಲ್ಲು



ಹವಳ



ಖನಿಜಗಳು ಮತ್ತು ಶಿಲೆಗಳ ಬಗ್ಗೆ ಮಾಹಿತಿ ನೀಡುತ್ತಿರುವ ಸಂಶೋಧನಾ ವಿದ್ಯಾರ್ಥಿ ಮಧು

> ಮಾನವನ ದಿನನಿತ್ಯದ ವ್ಯವಹಾರದಲ್ಲಿ ಖನಿಜಗಳು ಪ್ರಮುಖ ಪಾತ್ರ ವಹಿಸಿವೆ. ಅವುಗಳ ಪಾತ್ರಗಳ ಬಗ್ಗೆ ವಿವರಿಸುವ ಒಂದು ಪ್ರಯತ್ನ ಇದಾಗಿದೆ. ಇದರೊಂದಿಗೆ ಶೈಕ್ಷಣಿಕವಾಗಿ ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವವರಿಗೆ ಅಗತ್ಯ ಮಾಹಿತಿಗಳನ್ನು ಒದಗಿಸಲಾಗಿದ್ದು, ಇದರ ಸದುಪಯೋಗ ಮಾಡಿಕೊಳ್ಳಿ.
>
> –ಡಾ.ಲಕ್ಷ್ಮಮ್ಮ, ಜಂಟಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ದಕ್ಷಿಣ ವಲಯ ಮೈಸೂರು.



ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಗಣಿಗಾರಿಕೆ ಉಲ್ಲೇಖ

ಕರ್ನಾಟಕದಲ್ಲಿರುವ ಚಿನ್ನದ ನಿಕ್ಷೇಪಗಳ ಬಗ್ಗೆ ಮೌರ್ಯರ ಕಾಲದಲ್ಲಿಯೇ ಉಲ್ಲೇಖ ಆಗಿರುವುದು ಗಮನಾರ್ಹ. ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಗಣಿಗಾರಿಕೆಯಿಂದ ಸಂಪತ್ತು ರಾಜ್ಯಕ್ಕೆ ಬರುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ಗಣಿಗಾರಿಕೆಗೆ 2000 ವರ್ಷಗಳ ಇತಿಹಾಸದ ಬಗ್ಗೆ ಉಲ್ಲೇಖಿಸಲಾಗಿದೆ. ರಾಯಚೂರಿನ ಹಟ್ಟಿ ಮತ್ತು ಕೋಲಾರ ಗೋಲ್ಡ್ ಫೀಲ್ಡ್ ಬಗ್ಗೆ ತಿಳಿಸಲಾಗಿದೆ.

ಮೈಸೂರು, ಅ.10(ವಿವಿಹೆಚ್)– ಭೂಮಿ ಮನುಷ್ಯನ ಬದುಕಿನ ಅವಿಭಾಜ್ಯ ಅಂಗ. ಮಾನವ ಹಾಗೂ ಭೂಮಿ ನಡುವಣ ಅವಿನಾಭಾವ ಸಂಬಂಧವಿದೆ. ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದನ್ನು ಬಿಟ್ಟು ಮತ್ತೊಂದು ಎಂದಿಗೂ ಇರಲಾರದು. ಈ ಭೂಮಿಯಲ್ಲಿ ಮಾನವ ಜೀವನಕ್ಕೆ ಬೇಕಾಗುವ ಅಂಶಗಳಲ್ಲಿ ಅತೀ ಪ್ರಮುಖವಾದದ್ದು ಖನಿಜಗಳು. ಖನಿಜಗಳಿಲ್ಲದೇ ಮಾನವನ ಜೀವನವನ್ನು ಊಹಿಸಲೂ ಸಾಧ್ಯವಿಲ್ಲ. ಹಾಗಾದರೆ ಖನಿಜಗಳು ಎಂದರೇನು? ವೈಜ್ಞಾನಿಕವಾಗಿ ಹೇಳುವುದಾದರೆ ಭೂವಿಜ್ಞಾನ ಎಂದರೇನು? ಭೂವಿಜ್ಞಾನದಲ್ಲಿ ಬರುವ ಖನಿಜಗಳೇನು? ಅವುಗಳಿಂದ ಮನುಷ್ಯ ಜೀವನಕ್ಕಾಗುವ ಪ್ರಯೋಜನವಾದರೂ ಏನು? ಮಾನವ ಅವುಗಳ ಪೂರ್ಣಪ್ರಮಾಣದ ಬಳಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವುದಾದರೂ ಹೇಗೆ? ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ...

ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕೇಂದ್ರ ಕಚೇರಿ ವತಿಯಿಂದ ಸ್ಥಾಪಿಸಿರುವ ಮಳಿಗೆಯಲ್ಲಿ ಭೂವಿಜ್ಞಾನದ ಮಹತ್ವ, ಖನಿಜಗಳು, ಮಾನವ ಮತ್ತು ಭೂಮಿ ನಡುವಣ ಸಂಬಂಧಗಳ ಬಗ್ಗೆ ವಿವರಿಸಲಾಗಿದೆ. ಮಳಿಗೆ ಪ್ರವೇಶಿಸುತ್ತಿದ್ದಂತೆ ಭೂಮಿಯ ಚಿತ್ರಣವಿರುವ ಪ್ರತಿಕೃತಿ ಕಣ್ಣಿಗೆ ಬೀಳಲಿದೆ. ಇದರಲ್ಲಿ ಭೂಮಿ ಪದರ ರಚನೆ, ಮೇಲ್ಪದರ, ಖನಿಜಗಳ ಉಗಮ ಸೇರಿದಂತೆ ಹಲವು ಮಾಹಿತಿಗಳನ್ನು ನೀಡಲಾಗಿದೆ. ಮಳಿಗೆಗೆ ಎಂಟ್ರಿ ಪಡೆಯುತ್ತಲೇ ಅದರ ಸುತ್ತಲೂ, ಹಳೇ ಮೈಸೂರು ಪ್ರಾಂತ್ಯದ ಭೂವೈಜ್ಞಾನಿಕ ರಚನೆಯಲ್ಲಿ ಸಂಚಿತ ಶಿಲೆಗಳ ಬಗ್ಗೆ ವಿವರಿಸಲಾಗಿದೆ. ಅವುಗಳನ್ನು ಸರಗೂರು, ಹೊಳೆನರಸೀಪುರ, ಮಂಡ್ಯ, ಕರಿಘಟ್ಟ ಮತ್ತು ಸಂಡೂರು ಭಾಗಗಳಾಗಿ ವಿಂಗಡಿಸಲಾಗಿದ್ದು, ಆ ಪ್ರದೇಶಗಳಲ್ಲಿ ಸಿಗುವ ಶಿಲೆಗಳ ದರ್ಶಿಸಬಹುದಾಗಿದೆ.

ಒಳಹೊಕ್ಕಂತೆ ವಿವಿಧ ಶಿಲೆಗಳ ರೂಪಗಳನ್ನು ಕಣ್ತುಂಬಿಕೊಳ್ಳಬಹುದು. ಅಗ್ನಿಶಿಲೆ, ಪದರ ಶಿಲೆ ಹಾಗೂ ಜಲಜ ಶಿಲೆಗಳ ರಚನೆ, ಮೂಲ ರೂಪಗಳ ಪ್ರದರ್ಶನ ಎಲ್ಲರ ಬೆರಗುಗೊಳಿಸುತ್ತದೆ. ಇದಾದ ಬಳಿಕ ಖನಿಜಗಳ ವಿಧಗಳು, ಅವುಗಳ ಗುಣಲಕ್ಷಣಗಳು, ರಾಸಾಯನ ಮಿಶ್ರಿತವಲ್ಲದ ಶಿಲೆಗಳನ್ನು ಕಾಣಬಹುದಾಗಿದೆ. ಜೊತೆಗೆ ಲ್ಯಾಬೊರೇಟರಿಯಲ್ಲಿ ಖನಿಜಗಳ ವಿಶ್ಲೇಷಣೆ, ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆಯ ಕಾರ್ಯಕ್ರಮಗಳ ವಿವರ, ಗಣಿಗಾರಿಕೆ ಪ್ರದೇಶಗಳ ಪುನರುಜ್ಜೀವನ ಕ್ರಮಗಳ ಬಗ್ಗೆ ಪ್ರದರ್ಶನ ವಿವರವಿದೆ.

ಇದರೊಂದಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇತಿಹಾಸ, ಇಲಾಖೆಗಾಗಿ ಶ್ರಮಿಸಿದ ಕನ್ನಡಿಗರ ಭಾವಚಿತ್ರಗಳ ಪ್ರದರ್ಶನ, ಎಂಸ್ಯಾಂಡ್ ಉತ್ಪಾದನೆ ಹಾಗೂ ಅವುಗಳ ಗಣಿಗಾರಿಕೆಗೆ ಎಸ್‌ಸಿ ಎಸ್‌ಟಿಗೆ ಮೀಸಲಾತಿ ಜೊತೆಗೆ ಕಲ್ಲು ಕುಟುಕರಿಗೆ ವಿಶೇಷ ನಿಯಮದಡಿ ಕಲ್ಲು ಗಣಿ ನೇರ ಗುತ್ತಿಗೆ ಅವರ ಜೀವನ ಮಟ್ಟ ಸುಧಾರಿಸುವ ವಿಷಯಗಳನ್ನು ಹೇಳಲಾಗಿದೆ. ಹಾಗೆಯೇ ಗಣಿಗಾರಿಕೆಯಿಂದ ರಾಜ್ಯದ ಅಭಿವೃದ್ಧಿಗೆ ನೀಡಿರುವ ಕೊಡುಗೆ ಬಗ್ಗೆಯೂ ಇಲ್ಲಿ ವಿವರಿಸಲಾಗಿದೆ.

ಮೈಸೂರಲ್ಲಿದೆ ವಿಶ್ವದ ಹಳೆಯ ಶಿಲೆ: ಮೈಸೂರು ಜಿಲ್ಲೆಯ ಸರಗೂರು ಭಾಗದಲ್ಲಿರುವ ಶಿಲಾ ರಚನೆ ಪ್ರಪಂಚದ ಅತ್ಯಂತ ಹಳೆಯ ಶಿಲಾಪದರ ರಚನೆಯನ್ನು ಒಳಗೊಂಡಿದೆ. ಸುಮಾರು 3500 ಮಿಲಿಯನ್ ವರ್ಷಗಳ ಹಿಂದೆಯೇ ಈ ಶಿಲೆಗಳು ಮಾರ್ಪಟ್ಟಿತ್ತು. ಎಂದು ಹೇಳಲಾಗಿದೆ. ವಿಶೇಷವೆಂದರೆ ನಮ್ಮ ಮೈಸೂರಲ್ಲಿ ದೊರೆತ ಬಳಪದ ಕಲ್ಲಿನಿಂದ ಅಯೋಧ್ಯೆಯ ಶ್ರೀರಾಮಲಲ್ಲಾ ಮೂರ್ತಿ ಕೂಡ ನಿರ್ಮಾಣಗೊಂಡಿದೆ ಎಂಬುದನ್ನು ಸ್ಮರಿಸಬಹುದು.

ಹಟ್ಟಿ ಗಣಿಗಾರಿಕೆ ಸಾಕ್ಷ್ಯಚಿತ್ರಗಳ ಅನಾವರಣ: ರಾಜ್ಯದ ಹಳೆಯ ಚಿನ್ನದ ನಿಕ್ಷೇಪ ರಾಯಚೂರಿನ ಹಟ್ಟಿಯಲ್ಲಿನ ಅಂಡರ್ ಗ್ರೌಂಡ್ ಮೈನಿಂಗ್ ಬಗ್ಗೆ ಸಾಕ್ಷ್ಯ ಚಿತ್ರಗಳನ್ನು ಅನಾವರಣಗೊಳಿಸಲಾಗಿದೆ. ಅಲ್ಲಿನ ಕಾರ್ಮಿಕರು ಬಳಸುವ ವಸ್ತ್ರ, ಸಾಫ್ಟ್ ಸಾಧನದ ಮೂಲಕ ಕಾರ್ಮಿಕರು ಭೂಗರ್ಭಕ್ಕೆ ಹೇಗೆ ಪ್ರವೇಶಿಸುತ್ತಿದ್ದರು ಎಂಬುದನ್ನು ಕಣ್ಣಿಗೆ ಕಟ್ಟಿದಂತೆ ತೋರಿಸಲಾಗಿದ್ದು, ಭೂಮಿಯ ಒಳಭಾಗದಲ್ಲಿ ಚಿನ್ನ ದ್ರವ ರೂಪದಲ್ಲಿ ಹೇಗೆ ಸಿಗಲಿದೆ ಎಂಬುದನ್ನು ನಿಖರವಾಗಿ ತೋರಿಸಿದ್ದಾರೆ.

ಮೈಸೂರು ವಿವಿಯಿಂದ ಬಂದ ಶಿಲೆಗಳು: ಈ ಶಿಲಾ ಮತ್ತು ಖನಿಜಗಳ ಪ್ರದರ್ಶನದಲ್ಲಿ ಮೈಸೂರು ವಿವಿ ಭೂವಿಜ್ಞಾನ ಶಾಸ್ತ್ರ ಮ್ಯೂಸಿಯಂನಿಂದ ಶಿಲಾ ಮಾದರಿಗಳನ್ನು ತಂದು ಪ್ರದರ್ಶನಕ್ಕಿರಿಸಲಾಗಿದೆ. ಇಲಾಖೆ ಕಾರ್ಯಕ್ಕೆ ಮೈಸೂರು ವಿವಿ ಕೈಜೋಡಿಸಿದೆ.

ಭಾರೀ ಮಳೆಯಿಂದ ಕೆಸರುಮಯವಾದ ರಸ್ತೆ

ಬಸ್ಸುಗಳು ಸೇರಿ ವಾಹನಗಳು ಸಿಲುಕಿ ಪರದಾಟ, ಟ್ರಾಫಿಕ್ ಜಾಮ್

ಸಿದ್ದಾಪುರ,ಅ.10– ಭಾರೀ ಮಳೆಯಿಂದ ಕೆಸರು ತುಂಬಿದ ರಸ್ತೆಯಲ್ಲಿ ಸತತ 4 ಗಂಟೆಗಳ ಕಾಲ ಬಸ್ಸುಗಳು ಸೇರಿದಂತೆ ಹಲವು ವಾಹನಗಳು ಕೆಸರಿನಲ್ಲಿ ಸಿಲುಕಿ ಸಂಚರಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾದ ಘಟನೆ ಸಿದ್ದಾಪುರ ಪಟ್ಟಣದಲ್ಲಿ ಸಂಭವಿಸಿದೆ.

ವಿರಾಜಪೇಟೆ ತಾಲೂಕಿನ ಸಿದ್ದಾಪುರದಲ್ಲಿ ಅಂತಾರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಕೊಣನೂರು–ಮಾಕುಟ್ಟ ರಾಜ್ಯ ಹೆದ್ದಾರಿ ಸಂಪರ್ಕದ ಸಿದ್ದಾಪುರ ಮುಖ್ಯ ರಸ್ತೆಯ 1 ಕಿಮೀ ರಸ್ತೆ ಅಗಲೀಕರಣ ಅಭಿವೃದ್ಧಿ ಕಾಮಗಾರಿ 11 ತಿಂಗಳು ಕಳೆದರೂ ಪೂರ್ಣವಾಗದೆ ಇರುವುದರಿಂದ ಈ ಪರದಾಟ ಸಂಚಾರ ಅಸ್ತವ್ಯಸ್ತಕ್ಕೆ ಕಾರಣವಾಯಿತು.

ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಕಾಮಗಾರಿ ವಿಳಂಬವಾಗುತ್ತಿರುವ ಪರಿಣಾಮ ವಾಹನ ಸವಾರರು ನಿತ್ಯ ಸಮಸ್ಯೆ ಎದುರಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಕಳೆದೆರಡು ದಿನಗಳಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಾರಂಭಿಸಲಾಗಿತ್ತು. ರಾತ್ರಿ ಸುರಿದ ಮಳೆಯಿಂದ ರಸ್ತೆ ಸಂಪೂರ್ಣ ಕೆಸರುಮಯವಾಗಿತ್ತು. ಸಿದ್ದಾಪುರ ಮಾರ್ಗವಾಗಿ ಸಂಚರಿಸುವ ನೂರಾರು ವಾಹನಗಳು ಸಾಲುಗಟ್ಟಿ ನಿಂತು ಗ್ರಾಮದ ಎಲ್ಲ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಆಗಿತ್ತು.


ಕೆಸರುಮಯವಾದ ರಸ್ತೆಯಲ್ಲಿ ವಾಹನಗಳು ಚಲಿಸಲಾಗದೆ ಸಿಲುಕಿಕೊಂಡಿರುವುದು.


ಕೆಸರಿನಲ್ಲಿ ಸಿಲುಕಿ ಬಿದ್ದ ಬೈಕ್.

ಈ ನಡುವೆ 4 ಬಸ್‌ಗಳು ಕೆಸರಿನಲ್ಲಿ ಸಿಲುಕಿಕೊಂಡ ಪರಿಣಾಮ ಜೆಸಿಬಿ ಹಾಗೂ ಕ್ರೇನ್ ಯಂತ್ರಗಳು ಬಸ್‌ಗಳನ್ನು ಹಗ್ಗ ಕಟ್ಟಿ ಎಳೆದು ಸಂಚರಿಸಲು ಅನುವು ಮಾಡಿಕೊಟ್ಟ ದೃಶ್ಯ ಕಂಡು ಬಂದಿತು. ಸಿದ್ದಾಪುರ ಪೊಲೀಸರು ವಾಹನಗಳ ಸುಗಮ ಸಂಚಾರಕ್ಕೆ ಹರಸಾಹಸ ಪಡಬೇಕಾಯಿತು. ಪೋಷಕರು ಮಕ್ಕಳನ್ನು ಬೈಕ್‌ನಲ್ಲಿ ಕರತರುವ ವೇಳೆ ಜಾರಿ ಬಿದ್ದು ಗಾಯಗೊಂಡ ಘಟನೆಯು ನಡೆಯಿತು. ಘಟನೆಯಲ್ಲಿ ಮಹಿಳೆಯೊಬ್ಬರು ಬಿದ್ದು ಗಂಭೀರ ಗಾಯಗೊಂಡ ಹಿನ್ನೆಲೆ ಸಿದ್ದಾಪುರ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಯಿತು. ಕೂಲಿ ಕಾರ್ಮಿಕರು ವಾಹನಗಳಲ್ಲಿ ಕೆಲಸಕ್ಕೆ ತೆರಳಲು ಸಾಧ್ಯವಾಗದೆ ಮನೆಗೆ ಹಿಂತಿರುಗಿದರು. ವಾಹನ ಸಂಚಾರ ಸುಗಮಗೊಂಡ ನಂತರ ಕೆಸರು ರಸ್ತೆಗೆ ವೆಟ್ ಮಿಕ್ಸ್ ಜಲ್ಲಿಯನ್ನು ಹಾಕಿ ಸಮತಟ್ಟು ಮಾಡಲಾಯಿತು. ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕೆಂದು ಸ್ಥಳೀಯರು ಒತ್ತಾಯಿಸಿದರು.

ಪೊನ್ನಂಪೇಟೆ ಅರಣ್ಯ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ

ಅರಣ್ಯ ಇಲಾಖೆಯ ಹುದ್ದೆಗಳ ನೇಮಕಾತಿಯಲ್ಲಿ ಅವಕಾಶ ನೀಡಲು ಆಗ್ರಹ


ಪೊನ್ನಂಪೇಟೆಯಲ್ಲಿ ಅರಣ್ಯ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಅ.10– ಅರಣ್ಯ ಇಲಾಖೆಯ ಹುದ್ದೆಗಳಿಗೆ ಅರಣ್ಯ ಶಾಸ್ತ್ರ ಪದವೀಧರರಿಗೆ ಶೇ.100ರಷ್ಟು ನೇರ ನೇಮಕಾತಿಗೆ ಅವಕಾಶ ನೀಡಬೇಕೆಂದು ಆಗ್ರಹಿಸಿ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ತರಗತಿ ಬಹಿಷ್ಕರಿಸಿದ ವಿದ್ಯಾರ್ಥಿಗಳು ಪೊನ್ನಂಪೇಟೆ ಪಟ್ಟಣಕ್ಕೆ ಮೆರವಣಿಗೆ ಮೂಲಕ ಆಗಮಿಸಿ ಬಸ್ ನಿಲ್ದಾಣ ಮುಂಭಾಗ ಮಾನವ ಸರಪಳಿ ರಚಿಸಿ ಆಕ್ರೋಶ ವ್ಯಕ್ತಪಡಿಸಿದರಲ್ಲದೇ ನಾಟಕದ ಮೂಲಕ ಅರಣ್ಯ ಶಿಕ್ಷಣದ ಮಹತ್ವ ಸಾರಿದರು.

ಅರಣ್ಯ ಇಲಾಖೆಯ ನೇರ ನೇಮಕಾತಿಯಲ್ಲಿ ಉಳಿದ ಪದವೀದರರಿಗೆ ಶೇ.50ರಷ್ಟು ಮೀಸಲಾತಿ ನೀಡಿರುವುದರಿಂದ ಅರಣ್ಯ ಶಾಸ್ತ್ರ ವಿದ್ಯಾರ್ಥಿಗಳಿಗೆ ಹುದ್ದೆ ಕಡಿತದ ಆತಂಕ ಎದುರಾಗಿದೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯ ಅಧಿಕಾರಿ ಮತ್ತು ಉಪ ವಲಯ ಅರಣ್ಯಾಧಿಕಾರಿ ಹುದ್ದೆ ನೇಮಕಕ್ಕೆ ಅರಣ್ಯ ಬಿ.ಎಸ್ಸಿ ಪದವಿಯನ್ನೇ ಕನಿಷ್ಠ ವಿದ್ಯಾರ್ಹತೆಯಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಸಿಇಟಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಮಾತ್ರ ಅರಣ್ಯ ಶಾಸ್ತ್ರ ಪ್ರವೇಶ ಪಡೆಯಲು ಸಾಧ್ಯ. ಅರಣ್ಯ ಶಾಸ್ತ್ರದಿಂದ ಪರಿಸರ ರಕ್ಷಣೆ, ಕೃಷಿ, ವನ್ಯ ಜೀವಿಗಳ ಬಗ್ಗೆ ಸಂರಕ್ಷಣೆಯೊಂದಿಗೆ ಹುದ್ದೆಗೆ ಗುಣಮಟ್ಟ ಕಾಯ್ದುಕೊಳ್ಳಲು ಸಾಧ್ಯ. ಬೇರೆ ಶಿಕ್ಷಣ ಪಡೆದವರಿಂದ ಹುದ್ದೆಯಲ್ಲಿನ ಗೌರವ ಕಾಪಾಡಿಕೊಳ್ಳಲು ಆಗುತ್ತಿಲ್ಲ ಎಂಬುದನ್ನು ನಾಟಕದ ಮೂಲಕ ತಿಳಿಸಿದರು. ಹುದ್ದೆ ಖಾತ್ರಿ ಎಂದು ನಂಬಿ ಶಿಕ್ಷಣ ಪಡೆದ ವಿದ್ಯಾರ್ಥಿ ಸರ್ಕಾರದ ಮೀಸಲಾತಿ ಕಡಿತದ ಆಘಾತಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾಗುವುದನ್ನು ನಾಟಕದ ಮೂಲಕ ಮನ ಕಲುಕುವಂತೆ ಪ್ರದರ್ಶಿಸಿದರು.

ಪೊನ್ನಂಪೇಟೆ ತಹಶೀಲ್ದಾರ್ ಕಚೇರಿ ಎದುರು ಸರ್ಕಾರದ ವಿರುದ್ಧ ಘೋಷಣೆ ಕೂಗಿದ ವಿದ್ಯಾರ್ಥಿಗಳು ಪೊನ್ನಂಪೇಟೆ ತಹಶೀಲ್ದಾರ್ ಕೆ.ಎನ್ ಮೋಹನ್ ಕುಮಾರ್ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಪ್ರಸಾದ್ ಮಿತ್ರೆ, ಶ್ರೀಧರ್, ಆದರ್ಶ, ಕೀರ್ತನ್, ಶ್ರೀನಾಥ್, ವರುಣ್, ತರುಣ್, ನಿಶಾಂತ್, ವಿಶ್ವಸಾಗರ್, ಸಿ.ಎನ್.ದೀಕ್ಷಿತ್, ಭುವಿ? ಕಿರಣ್, ರಮೇಶ್, ಪಂಚಮಿ, ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಅಗ್ನಿ ದುರಂತಕ್ಕೀಡಾದ ವಸತಿ ಶಾಲೆಯಲ್ಲಿ ನಿಯಮಗಳ ಉಲ್ಲಂಘನೆ

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ತನಿಖೆ ಆರಂಭ



ಮಡಿಕೇರಿ,ಅ.10– ಮಡಿಕೇರಿ ತಾಲೂಕಿನ ಕಾಟಕೇರಿ ಗ್ರಾಮದ ಹರ್‌ಮಂದಿರ ಖಾಸಗಿ ಶಾಲೆಯ ವಸತಿ ನಿಲಯದಲ್ಲಿ ಸಂಭವಿಸಿದ ಅಗ್ನಿ ಅವಘಡಕ್ಕೆ ಸಂಬಂಧಿಸಿದಂತೆ ಶಾಲೆಯ ವತಿಯಿಂದ ಕೆಲವು ನಿಯಮಗಳ ಉಲ್ಲಂಘನೆ ಆಗಿರುವುದು ಕಂಡು ಬಂದಿದೆ. ಈ ಕುರಿತು ಸಾರ್ವಜನಿಕರ ಶಿಕ್ಷಣ ಇಲಾಖೆ ವತಿಯಿಂದ ತನಿಖೆ ನಡೆಸಲಾಗುತ್ತಿದೆ ಎಂದು ಡಿಡಿಪಿಐ ಬಸವರಾಜು ಮಾಹಿತಿ ನೀಡಿದ್ದಾರೆ.

ಶಾಲೆಯಲ್ಲಿ ವಸತಿ ಸೌಕರ್ಯ ಕಲ್ಪಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೂಲಕ ಅನುಮತಿ ಪಡೆಯಬೇಕಿದೆ. ಆದರೆ ಅದನ್ನು ಪಡೆಯದಿರುವುದು ಪ್ರಾಥಮಿಕ ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡು ಬಂದಿದೆ. ಮಾತ್ರವಲ್ಲದೇ ಸ್ಥಳೀಯ ಪಂಚಾಯಿತಿಯಿಂದಲೂ ವಸತಿ ಶಾಲೆಗೆ ನಿರಾಪೇಕ್ಷಣಾ ಪತ್ರ ಪಡೆಯದಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಸಂಪೂರ್ಣ ತನಿಖೆ ನಡೆಸಿ ಇಲಾಖಾ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಡಿಡಿಪಿಐ ಬಸವರಾಜು ಸ್ಪಷ್ಟಪಡಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಅಲ್ಲಿ 2018–19ರ ಸಾಲಿನಿಂದ ಶಾಲೆ ಆರಂಭವಾಗಿದೆ. 1ರಿಂದ 8ನೇ ತರಗತಿವರೆಗೆ ಶಾಲೆ ನಡೆಸಲು ಮಾತ್ರವೇ ಸಾರ್ವಜನಿಕರ ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆಯಲಾಗಿತ್ತು ಎಂದು ಹೇಳಿದರು. ಘಟನೆ ನಡೆದ ದಿನ 30 ಮಂದಿ ಬಾಲಕರು ಮತ್ತು 23 ಮಂದಿ ಬಾಲಕಿಯರು ಅಲ್ಲಿನ ವಸತಿ ನಿಲಯದಲ್ಲಿ ತಂಗಿದ್ದರು. ಬೆಳಗಿನ 4.30ರ ಸಮಯದಲ್ಲಿ ಬೆಂಕಿ ಅವಘಡ ಸಂಭವಿಸಿದೆ. 52 ವಿದ್ಯಾರ್ಥಿಗಳು ಸುರಕ್ಷಿತವಾಗಿ ಹೊರ ಬಂದಿದ್ದಾರೆ. ಈ ಘಟನೆಯಲ್ಲಿ ಓರ್ವ ವಿದ್ಯಾರ್ಥಿ ಮೃತಪಟ್ಟಿದ್ದಾನೆ. ಈ ಘಟನೆ ಕುರಿತು ವಿಷಾಧ ವ್ಯಕ್ತಪಡಿಸುವುದಾಗಿ ಡಿಡಿಪಿಐ ಬಸವರಾಜು ಹೇಳಿದರು.

ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣ ಸಂವಿಧಾನಕ್ಕೆ ವಿರುದ್ಧವಾದ ಘಟನೆ

ಅ.13ರಂದು ಮಡಿಕೇರಿ ಜಿಲ್ಲಾಡಳಿತ ಕಚೇರಿ ಮುಂಭಾಗ ಪ್ರತಿಭಟನೆ


ಸುದ್ದಿಗೋಷ್ಠಿಯಲ್ಲಿ ಅಂಬೇಡ್ಕರ್ ವಿಚಾರವಾದಿ ಸಿ.ಜೆ.ಮೋಹನ್ ಮೌರ್ಯ ಮಾತನಾಡಿದರು.

ಮಡಿಕೇರಿ, ಅ.10– ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ಪ್ರಕರಣವನ್ನು ತೀವ್ರವಾಗಿ ಖಂಡಿಸಿರುವ ಪ್ರಗತಿಪರ, ಚಿಂತಕರ, ದಲಿತಪರ ಸಂಘಟನೆಗಳ ಒಕ್ಕೂಟ, ಪ್ರಕರಣವನ್ನು ಸಂವಿಧಾನಕ್ಕೆ ವಿರುದ್ಧವಾದ ಘಟನೆ ಎಂದು ಅಭಿಪ್ರಾಯಿಸಿ ಅ.13ರಂದು ನಗರದ ಜಿಲ್ಲಾಡಳಿತ ಕಚೇರಿಯ ಮುಂಭಾಗ ಬೆಳಗ್ಗೆ 10.30 ಗಂಟೆಗೆ ಪ್ರತಿಭಟನೆ ನಡೆಸುವುದಾಗಿ ತಿಳಿಸಿದೆ.

ಕಠಿಣ ಕ್ರಮ ಕೈಗೊಳ್ಳಬೇಕು: ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಒಕ್ಕೂಟದ ಪದಾಧಿಕಾರಿಗಳಾದ ಅಂಬೇಡ್ಕರ್ ವಿಚಾರವಾದಿ ಸಿ.ಜೆ.ಮೋಹನ್ ಮೌರ್ಯ, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ವಿರುದ್ಧ ನಡೆದಿರುವ ಘಟನೆ ಸಂವಿಧಾನ ವಿರೋಧಿ ಕೃತ್ಯವಾಗಿದೆ. ಆ ಮೂಲಕ ನ್ಯಾಯಾಂಗ ವ್ಯವಸ್ಥೆಗೆ ಅಪಮಾನ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ದುಷ್ಕೃತ್ಯ ಎಸಗಿದ ವಕೀಲ ರಾಕೇಶ್ ಕಿಶೋರ್ ವಿರುದ್ಧ ಕೇಂದ್ರ ಸರ್ಕಾರ 'ದೇಶ ದ್ರೋಹ' ಪ್ರಕರಣವನ್ನು ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಗಲ್ಲಾಗಿರುವ ಸಂವಿಧಾನಕ್ಕೆ ಮಾಡಿರುವ ಅಪಮಾನದ ಘಟನೆ ಇದಾಗಿದ್ದು, ಇದನ್ನು ಪ್ರತಿಯೊಬ್ಬ ನಾಗರಿಕರು ವಿರೋಧಿಸಬೇಕೆಂದು ಕರೆ ನೀಡಿದರು.

ದುಷ್ಕೃತ್ಯ ಎಸಗಿದ ವಕೀಲನನ್ನು ದೆಹಲಿ ವಕೀಲರ ಸಂಘ ಸಂಘದಿಂದ ಉಚ್ಛಾಟಿಸಿದೆ. ದೆಹಲಿ ವಕೀಲರ ಸಂಘಕ್ಕೆ ಇರುವ ಬದ್ಧತೆ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಇಲ್ಲವೆಂದು ಟೀಕಿಸಿದ ಅವರು ಸಂವಿಧಾನದ ಬಗ್ಗೆ ಬಿಜೆಪಿಗೆ ಗೌರವವಿದ್ದಲ್ಲಿ ವಕೀಲ ರಾಕೇಶ್ ಕಿಶೋರ್ ವಿರುದ್ಧ ದೇಶ ದ್ರೋಹದ ಪ್ರಕರಣ ದಾಖಲಿಸಲಿ ಎಂದು ಆಗ್ರಹಿಸಿದರು.

ಸಂವಿಧಾನಕ್ಕೆ ಅವಮಾನ: ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲೆತ್ನಿಸಿದ ಸಂವಿಧಾನ ವಿರೋಧಿ ಕೃತ್ಯವನ್ನು ಸಮರ್ಥಿಸಿಕೊಂಡಿರುವ ರಾಜ್ಯದ ನಿವೃತ್ತ ಪೊಲೀಸ್ ಅಧಿಕಾರಿ, ಪ್ರಸ್ತುತ ಬಿಜೆಪಿಯಲ್ಲಿ ಗುರುತಿಸಿಕೊಂಡಿರುವ ಭಾಸ್ಕರ ರಾವ್ ಅವರನ್ನು ಪಕ್ಷದಿಂದ ಉಚ್ಛಾಟಿಸಬೇಕೆಂದು ಒತ್ತಾಯಿಸಿದರು.

ಪ್ರಗತಿಪರ ಚಿಂತಕ ಎಸ್.ಐ.ಮುನೀರ್ ಅಹಮದ್ ಮಾತನಾಡಿ, ವಕೀಲ ರಾಕೇಶ್ ಕಿಶೋರ್ ನ್ಯಾಯಮೂರ್ತಿಗಳನ್ನು ಅವಮಾನಿಸಿದ್ದಲ್ಲ ಬದಲಾಗಿ ತಮ್ಮ ಕೃತ್ಯದಿಂದ ಸುವಿಧಾನವನ್ನು ಅವಮಾನಿಸಿದ್ದಾರೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಚಿಂತಕರಾದ ನೆರವಂಡ ಉಮೇಶ್, ಇಸಾಖ್ ಖಾನ್, ಪರಿಶಿಷ್ಟ ಜಾತಿ ಘಟಕದ ಕೆಎಸ್‌ಆರ್‌ಟಿಸಿ ನೌಕರು ಸಂಘದ ಗೌರವ ಅಧ್ಯಕ್ಷ ವಿನಯ್, ದಸಂಸ ಸಂಚಾಲಕ ದಿವಾಕರ್ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಅ.10– ನಾಪೋಕ್ಲು ಫೀಡರ್‌ನಲ್ಲಿ ಕೊಡಗು ವಿದ್ಯುತ್ ಜಾಲದ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಅ.11 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಹೊದ್ದೂರು, ಕೊಟ್ಟಮುಡಿ, ಪಾಲೂರು, ಹೊದವಾಡ, ನಾಪೋಕ್ಲು, ಬೇತು, ಹಳೆತಾಲೂಕು, ಕೊಳಕೇರಿ, ಕಕ್ಕಬೆ, ನಾಲಡಿ, ಚೋನಕೆರೆ, ಎಮ್ಮೆಮಾಡು, ಪಡಿಯಾನಿ, ಬಲ್ಲಮಾವಟಿ, ಪೇರೂರು, ಕಿಯಲ್‌ಕೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಆನಂದಯ್ಯ ನಿಧನ



ನಾಪೋಕ್ಲು: ಚೇಯ್ಯಂಡಾಣೆ ಗ್ರಾಮ ಪಂಚಾಯತಿಯ ನರಿಯಂದಡ ಗ್ರಾಮದ ನಿವಾಸಿ ಪೊಕ್ಕುಳಂಡ್ರ ಆನಂದಯ್ಯ (93) ಶುಕ್ರವಾರ ನಿಧನರಾದರು. ಶ್ರೀಯುತರ ಅಂತ್ಯ ಸಮಸ್ಕಾರ ಕ್ರೀಯೆ ಮೃತರ ಸ್ವಗೃಹದಲ್ಲಿ ನೆರವೇರಿಸಲಾಯಿತು. ಮೃತರು ಒಂದು ಗಂಡು ಮೂರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂದು ಬಂದವರನ್ನು ಅಗಲಿದ್ದಾರೆ.

ರೈಲ್ವೆ ಕಾಮಗಾರಿ ತ್ವರಿತ ಪೂರ್ಣಗೊಳಿಸಲು ಲೋಕಸಭಾ ಸದಸ್ಯ ಸುನೀಲ್ ಬೋಸ್ ಸೂಚನೆ


ಸುನೀಲ್ ಬೋಸ್ ಅಧಿಕಾರಿಗಳ ಜೊತೆ ಚರ್ಚೆ ನಡೆಸುತ್ತಿರುವುದು.

ಚಾಮರಾಜನಗರ, ಅ.10– ಲೋಕಸಭಾ ಸದಸ್ಯ ಸುನೀಲ್ ಬೋಸ್ ಚಾಮರಾಜನಗರದ ಜಿಲ್ಲಾಡಳಿತ ಭವನದಲ್ಲಿರುವ ಅವರ ಕಚೇರಿಯಲ್ಲಿ ಗುರುವಾರ ರೈಲ್ವೆ ಹಾಗೂ ಅರಣ್ಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು–ಚಾಮರಾಜನಗರ ರೈಲ್ವೆ ವಿದ್ಯುದೀಕರಣ ಕಾಮಗಾರಿ ಮತ್ತು ಚಾಮರಾಜನಗರದ ರೈಲ್ವೆ ನಿಲ್ದಾಣದ ಕಾಮಗಾರಿಯ ಬಗ್ಗೆ ಸಮಗ್ರ ಮಾಹಿತಿಯನ್ನು ಅಧಿಕಾರಿಗಳಿಂದ ಪಡೆದುಕೊಂಡರು. ನಿಗದಿತ ಸಮಯದೊಳಗೆ ಕಾಮಗಾರಿಯನ್ನು ಮುಗಿಸುವಂತೆ ಸೂಚನೆ ನೀಡಿದರು.

ಮಲೆ ಮಹದೇಶ್ವರಬೆಟ್ಟ ವನ್ಯಜೀವಿಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಸಭೆ ನಡೆಸಿದ ಸುನೀಲ್ ಬೋಸ್ ಅವರು ವನ್ಯಜೀವಿ ಧಾಮದಲ್ಲಿ ಇತ್ತೀಚೆಗೆ ನಡೆದ ಹುಲಿ ಹತ್ಯೆ ಮತ್ತು ಹೆಚ್ಚುತ್ತಿರುವ ಮಾನವ–ಪ್ರಾಣಿ ಸಂಘರ್ಷದ ಕುರಿತು ಮಾಹಿತಿ ಪಡೆದರು.

ಅರಣ್ಯದಂಚಿನಲ್ಲಿರುವ ಗ್ರಾಮಸ್ಥರೊಂದಿಗೆ ಸೌಜನ್ಯದಿಂದ ವರ್ತಿಸಿ, ಅವರ ವಿಶ್ವಾಸ ಗಳಿಸಬೇಕು. ಅರಣ್ಯದ ಮಹತ್ವ ತಿಳಿದು ಮುಂದಿನ ದಿನಗಳಲ್ಲಿ ವನ್ಯಜೀವಿಗಳ ಹತ್ಯೆಯಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಕ್ರಮಗಳನ್ನು ವಹಿಸುವಂತೆ ಲೋಕಸಭಾ ಸದಸ್ಯರಾದ ಸುನಿಲ್ ಬೋಸ್ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಯುವ ಜನೋತ್ಸವ : ಸಕಲ ಸಿದ್ಧತೆಗೆ ಜಿಪಂ ಸಿಇಓ ಸೂಚನೆ


ಅಧಿಕಾರಿಗಳೊಂದಿಗೆ ಯುವಜನೋತ್ಸವ ಕುರಿತು ಚರ್ಚಿಸುತ್ತಿರುವ ಜಿಪಂ ಸಿಇಓ ಮೋನಾ ರೋತ್

ಚಾಮರಾಜನಗರ, ಅ.10– ಕಲೆ, ಸಂಸ್ಕೃತಿ, ಕ್ರೀಡಾ ಕೌಶಲ್ಯ, ಕಥೆ, ಕವನ, ಚಿತ್ರಕಲೆ ಚಟುವಟಿಕೆಗಳನ್ನು ಯುವಜನರಲ್ಲಿ ಉತ್ತೇಜಿಸುವ ಸಲುವಾಗಿ ಅ.16ರಂದು ನಗರದಲ್ಲಿ ಜಿಲ್ಲಾ ಯುವಜನೋತ್ಸವವನ್ನು ಆಯೋಜಿಸಲಾಗಿದ್ದು, ಇದಕ್ಕಾಗಿ ಸಕಲ ಸಿದ್ಧತೆಗಳನ್ನು ಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಯುವ ನೀತಿಯಡಿ ಯುವಜನರಲ್ಲಿರುವ ಕಲೆ, ಕ್ರೀಡಾ ಕೌಶಲ್ಯವನ್ನು ಪ್ರೋತ್ಸಾಹಿಸುವ ಸಲುವಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದ್ದು, ಇದೇ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿಯೂ ನಿಗದಿಯಾಗಿರುವ ಯುವ ಜನೋತ್ಸವಕ್ಕೆ ಎಲ್ಲ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡುವಂತೆ ಜಿ.ಪಂ ಸಿಇಓ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಯುವಜನೋತ್ಸವದ ಅಂಗವಾಗಿ ಆಯೋಜಿಸಲಾಗಿರುವ ವಿವಿಧ ಸ್ಪರ್ಧೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲು ಸೂಕ್ತ ಪ್ರಚಾರ ವ್ಯವಸ್ಥೆ ಕೈಗೊಳ್ಳಬೇಕು. ಯುವಜನೋತ್ಸವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ, ವಿಜಯ ಫಲಕಗಳನ್ನು ನೀಡಲಾಗುತ್ತದೆ.

ಯುವಜನೋತ್ಸವ ಸ್ಪರ್ಧೆಗಳಲ್ಲಿ 15 ರಿಂದ 29ರವರೆಗೆ ವಯೋಮಿತಿಯಲ್ಲಿರುವ ಜಿಲ್ಲೆಯ ಎಲ್ಲಾ ಯುವಕ ಯುವತಿಯರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ಶಾಲಾ–ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರು ಭಾಗವಹಿಸಲು ಅವಕಾಶವಿರುತ್ತದೆ. ಈ ಯುವಜನೋತ್ಸವವನ್ನು ಸದುಪಯೋಗಪಡಿಸಿಕೊಳ್ಳಲು ವ್ಯಾಪಕವಾಗಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ವಿದ್ಯಾಗಣಪತಿ ವಿಸರ್ಜನಾ ಕಾರ್ಯಕ್ರಮ : ಅನುಮತಿ ಪಡೆದ ಸ್ಥಳಗಳನ್ನು ಹೊರತುಪಡಿಸಿ ಉಳಿದ ಕಡೆ ಫ್ಲವರ್ ಬ್ಲಾಸ್ಟಿಂಗ್, ಪೇಪರ್ ಬ್ಲಾಸ್ಟಿಂಗ್, ಪಟಾಕಿ ನಿಷೇಧ

ಚಾಮರಾಜನಗರ, ಅ.10– ಚಾಮರಾಜನಗರ ಪಟ್ಟಣದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ವಿದ್ಯಾಗಣಪತಿ ವಿಗ್ರಹದ ವಿಸರ್ಜನಾ ಕಾರ್ಯಕ್ರಮದಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಅ.13ರ ವಿಸರ್ಜನಾ ಕಾರ್ಯಕ್ರಮ ಮುಗಿಯುವವರೆಗೆ ವಿಸರ್ಜನಾ ಮೆರವಣಿಗೆ ಸಾಗುವ ಬೀದಿಗಳಲ್ಲಿ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆದ ಸ್ಥಳಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಫ್ಲವರ್ ಬ್ಲಾಸ್ಟಿಂಗ್, ಪೇಪರ್ ಬ್ಲಾಸ್ಟಿಂಗ್, ಪಟಾಕಿ ಎಲೆಕ್ಟ್ರಿಕ್ ಸ್ಪಾರ್ಕರ್, ಇತ್ಯಾದಿಗಳನ್ನು ಸಿಡಿಸದಂತೆ ನಿರ್ಬಂಧಿಸಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ಆದೇಶ ಹೊರಡಿಸಿದ್ದಾರೆ.

ವಿದ್ಯಾಗಣಪತಿಯ ವಿಗ್ರಹದ ವಿಸರ್ಜನಾ ಮೆರವಣಿಗೆಯು ಚಾಮರಾಜನಗರ ಪಟ್ಟಣದ ಪ್ರಮುಖ ಬೀದಿಗಳಾದ ಖಡಕ್‌ಪುರ ಮೊಹಲ್ಲಾ–ಅಂಬೇಡ್ಕರ್ ಬಡಾವಣೆ, ಕೆ.ಎಸ್.ಆರ್.ಟಿ.ಸಿ ಬಸ್ ಸ್ಟ್ಯಾಂಡ್ ರಸ್ತೆ, ದೇವಾಂಗ 3ನೇ ಬೀದಿ, ನಾಗಪ್ಪ ಶೆಟ್ಟಿ ವೃತ್ತ, ದೊಡ್ಡ ಅಂಗಡಿ ಬೀದಿ, ಗುಂಡ್ಲುಪೇಟೆ ವೃತ್ತ, ಗಾಡಿಖಾನೆ ಮೊಹಲ್ಲಾ ಬೀದಿ, ಮೇಗಲ ಪರಿವಾರ ನಾಯಕರ ಬೀದಿ, ಕನ್ನಿಕಾ ಪರಮೇಶ್ವರಿ ದೇವಸ್ಥಾನ, ಮಾರ್ಕೆಟ್ ವೃತ್ತ, ಸಂತೇಮರಹಳ್ಳಿ ವೃತ್ತ, ಆದಿಶಕ್ತಿ ದೇವಾಸ್ಥಾನ, ಬಣಜಿಗರ ಬೀದಿ, ಭ್ರಮರಾಂಭ ಬಡಾವಣೆಯ 1ನೇ, 2ನೇ ಕ್ರಾಸ್, ಕುರುಬರ ಬೀದಿ, ಹಳ್ಳದ ಬೀದಿ, ಅಗ್ರಹಾರ ಬೀದಿ, ಪೊಲೀಸ್ ಕಚೇರಿ ರಸ್ತೆ, ಖಾಸಗಿ ಬಸ್ ನಿಲ್ದಾಣ, ವೀರಭದ್ರಸ್ವಾಮಿ ದೇವಸ್ಥಾನ, ಜೈನರ ಬೀದಿ ಮತ್ತು ಆಂಜನೇಯ ಸ್ವಾಮಿ ದೇವಸ್ಥಾನದ ಮಾರ್ಗವಾಗಿ ಸಾಗಿ ದೊಡ್ಡ ಅರಸನ ಕೊಳದಲ್ಲಿ ವಿಗ್ರಹ ವಿಸರ್ಜನೆ ಮಾಡಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಅ.13ರ ವಿಸರ್ಜನಾ ಕಾರ್ಯಕ್ರಮ ಮುಗಿಯುವವರೆಗೆ ವಿಸರ್ಜನಾ ಮೆರವಣಿಗೆ ಸಾಗುವ ಬೀದಿಗಳಲ್ಲಿ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆದ ಸ್ಥಳಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಫ್ಲವರ್ ಬ್ಲಾಸ್ಟಿಂಗ್, ಪೇಪರ್ ಬ್ಲಾಸ್ಟಿಂಗ್, ಪಟಾಕಿ ಎಲೆಕ್ಟ್ರಿಕ್ ಸ್ಪಾರ್ಕರ್, ಇತ್ಯಾದಿಗಳನ್ನು ಸಿಡಿಸದಂತೆ ನಿರ್ಬಂಧಿಸಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಆದೇಶ ಹೊರಡಿಸಿದ್ದಾರೆ.

ಶಾಲಾ ಕಾಲೇಜಿಗೆ ಮೂಲ ಸೌಕರ್ಯ ಕಲ್ಪಿಸಿಕೊಡುವುದಕ್ಕೆ ಪ್ರಥಮ ಆದ್ಯತೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಶಾಸಕರಿಂದ ಗುದ್ದಲಿ


ಚಾಮರಾಜನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ, ಅ.10– ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ಶಾಲಾ–ಕಾಲೇಜಿಗೆ ಬೇಕಾದ ಮೂಲಸೌಕರ್ಯ ಕಲ್ಪಿಸಿಕೊಡುವುದಕ್ಕೆ ತಮ್ಮ ಪ್ರಥಮ ಆದ್ಯತೆ ಎಂದು ಎಂಎಸ್‌ಐಎಲ್ ಅಧ್ಯಕ್ಷ ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಕರಿನಂಜನಪುರ ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ರೈಟ್ ಸಂಸ್ಥೆಯಿಂದ 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ 5 ತರಗತಿ 1 ಪ್ರಾಧ್ಯಾಪಕರ ಕೊಠಡಿ ಸೇರಿದಂತೆ 6 ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು.

ಚಾಮರಾಜನಗರ ಜಿಲ್ಲಾ ಕೇಂದ್ರವಾದ ಬಳಿಕ ಗ್ರಾಮೀಣ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ರಾಜ್ಯ ಸರ್ಕಾರ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ಸುವರ್ಣ ಗಂಗೋತ್ರಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ವೈದ್ಯಕೀಯ ಕಾಲೇಜು, ಕೃಷಿ ವಿಜ್ಞಾನ ಕಾಲೇಜು, ಎರಡು ವರ್ಷದ ಹಿಂದೆ ರಾಜ್ಯ ಸರ್ಕಾರ ಚಾಮರಾಜನಗರಕ್ಕೆ ಪ್ರತ್ಯೇಕ ವಿವಿ ಮಂಜೂರು ಮಾಡಿದೆ. ಉನ್ನತ ಶಿಕ್ಷಣ ಪಡೆಯಲು ಮೈಸೂರು, ಬೆಂಗಳೂರು ನಗರಗಳಿಗೆ ತೆರಳಬೇಕಿದ್ದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಸರ್ಕಾರ ಉನ್ನತ ಶಿಕ್ಷಣಕೊಡುವ ನಿಟ್ಟಿನಲ್ಲಿ ಪದವಿ ಹಾಗೂ ತಾಂತ್ರಿಕ ವಿದ್ಯಾಲಯವನ್ನು ತೆರೆದಿದೆ ಜಿಲ್ಲೆಯ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆಯುವತ್ತ ಮುಂದಾಗಬೇಕು ಎಂದು ಸಲಹೆ ನೀಡಿದರು.

ರೈಟ್ ಸಂಸ್ಥೆ ಗುಣಮಟ್ಟದ ಕೊಠಡಿಗಳನ್ನು ನಿರ್ಮಾಣ ಮಾಡಿಕೊಡುವ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು. ಕಾಲೇಜು ಪ್ರಾಂಶುಪಾಲೆ ಅಶ್ವಿನಿ, ರೈಟ್ ಸಂಸ್ಥೆ ಎಂಜಿನಿಯರ್ ಆಯೂಬ್‌ಖಾನ್ ನೇಸರ ಎಂಟರ್ ಪ್ರೈಸಸ್‌ನ ಗುತ್ತಿಗೆದಾರ ಮಹೇಶ್‌ಕುಮಾರ್, ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ನಾಗೇಶ್, ಉಪನ್ಯಾಸಕರು ಹಾಜರಿದ್ದರು.

ಡಿವೈಎಸ್ಪಿಗೆ ಬೀಳ್ಕೊಡುಗೆ

ಚಾಮರಾಜನಗರ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಚಾಮರಾಜನಗರ ಉಪವಿಭಾಗದಲ್ಲಿ 2 ವರ್ಷಕ್ಕೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಬೇರೆಡೆಗೆ ವರ್ಗಾವಣೆಗೊಂಡ ಡಿವೈಎಸ್ಪಿ ಲಕ್ಷ್ಮಯ್ಯ ಅವರಿಗೆ ಬೀಳ್ಕೊಡಲಾಯಿತು. ಎಸ್‌ಪಿ ಡಾ.ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಧರ್ಮೇಂದ್ರ, ಇನ್ಸ್‌ಪೆಕ್ಟರ್ ಶ್ರೀಕಾಂತ್, ಶೇಷಾದ್ರಿ, ನವೀನ್, ವಿಜಯಕುಮಾರ್ ಇತರರಿದ್ದರು.



ದಸರಾದಲ್ಲಿ ಪ್ರಥಮ ಸ್ಥಾನ ಪಡೆದ ಚಾ.ನಗರ ಸ್ತಬ್ಧ ಚಿತ್ರ ನಿರ್ಮಿಸಿದ ಕಲಾವಿದ ಮಧುಸೂದನ್‌ಗೆ ಸನ್ಮಾನ

ಚಾಮರಾಜನಗರ, ಅ.10– ವಿಶ್ವ ಪ್ರಸಿದ್ಧ ಮೈಸೂರು ದಸರಾದ ಜಂಬೂಸವಾರಿ ಮೆರವಣಿಯಲ್ಲಿ ಮೈಸೂರು ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಚಾಮರಾಜನಗರ ಜಿಲ್ಲೆಯ ಸ್ತಬ್ಧ ಚಿತ್ರವನ್ನು ನಿರ್ಮಿಸಿದ ಚಿತ್ರ ಕಲಾವಿದ ಮಧುಸೂದನ್ ಹೊಸೂರು ಅವರನ್ನು ಜಿಲ್ಲಾ ಪಂಚಾಯತ್ ವತಿಯಿಂದ ಸನ್ಮಾನಿಸಲಾಯಿತು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಪಂ ಸಿಇಓ ಮೋನಾ ರೋತ್ ಮಧುಸೂಧನ್ ಅವರಿಗೆ ಶಾಲು ಹೊದಿಸಿ, ಸ್ಮರಣಿಕೆ ಫಲಪುಷ್ಪ ನೀಡಿ ಗೌರವಿಸಿದರು.

ಈ ಬಾರಿಯ ದಸರಾ ಜಂಬೂಸವಾರಿಯ ಮೆರವಣಿಗೆಯಲ್ಲಿ ಜಿಪಂ ವತಿಯಿಂದ ಪ್ರಕೃತಿಯ ಸೌಹಾರ್ದತೆಯೊಂದಿಗೆ ಪ್ರಗತಿಯತ್ತ ಸಾಗೋಣ ಎಂಬ ಮಾನವ ಅರಣ್ಯ ಸಹಬಾಳ್ವೆಯ ಮಹತ್ವವನ್ನು ಸಾರುವ ಸ್ತಬ್ಧ ಚಿತ್ರವನ್ನು ನಿರ್ಮಿಸಲಾಗಿತ್ತು. ಜಿಲ್ಲೆಯವರೇ ಆದ ಮಂಗಲ ಹೊಸೂರು ಕಲಾವಿದ ಮಧುಸೂದನ್ ಸ್ತಬ್ಧಚಿತ್ರವನ್ನು ಆಕರ್ಷಕವಾಗಿ ನಿರ್ಮಿಸಿದ್ದು, ಮೈಸೂರು ವಿಭಾಗದಲ್ಲಿ ಮೊದಲ ಸ್ಥಾನ ಪಡೆದುಕೊಂಡಿತು.

ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಕಲಾವಿದ ಮಧುಸೂದನ್ ಅವರನ್ನು ಗೌರವಿಸಿ ಜಿಲ್ಲೆಗೆ ಕೀರ್ತಿ ತಂದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಲಾಯಿತು.

ಜಿಪಂ ಮುಖ್ಯ ಯೋಜನಾಧಿಕಾರಿ ಹೊನ್ನರಾಜು, ಮುಖ್ಯ ಲೆಕ್ಕಾಧಿಕಾರಿ ಬಸವರಾಜು, ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನಾ ಅಧಿಕಾರಿ ದೀಪಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಕೆ.ಸುರೇಶ್, ಇನ್ನಿತರ ಅಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

ನಾಳೆಯಿಂದ ಖೋ–ಖೋ ಪಂದ್ಯಾವಳಿ

ಚಾಮರಾಜನಗರ, ಅ.10– ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025–26ನೇ ಸಾಲಿನ 14 ರಿಂದ 17ರ ವಯೋಮಿತಿಯ ಮೈಸೂರು ವಿಭಾಗ ಮಟ್ಟದ ಬಾಲಕ ಹಾಗೂ ಬಾಲಕಿಯರ ಖೋ–ಖೋ ಪಂದ್ಯಾವಳಿಯು ಅ. 12 ಹಾಗೂ 13ರಂದು ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟದ ಶ್ರೀ ಮಹದೇಶ್ವರ ಪ್ರೌಢಶಾಲೆ ಆವರಣದಲ್ಲಿ ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಸ್ಲಂಪಾಷ ನಿಧನ



ಯಳಂದೂರು, ಅ.10– ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಅಸ್ಲಂಪಾಷ(56) ಗುರುವಾರ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಇವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೃತರಿಗೆ ಪತ್ನಿ ಸೇರಿದಂತೆ ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ. ಇವರ ಅಂತ್ಯಕ್ರಿಯೆಯು ಪಟ್ಟಣದ ಮುಸ್ಲಿಮರ ಖಬರಸ್ತಾನದಲ್ಲಿ ಗುರುವಾರ ಸಂಜೆ ನೆರವೇರಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿವೇಶನ ಮಾರಾಟಕ್ಕಿದೆ
SITE FOR SALE
30x36, 30x40
ವೃಷ್ಟಿ (ವಿಆರ್‌ಎಲ್, ವಿಪಿಎಲ್) ಗೃಹ ನಿರ್ಮಾಣ ಸಹಕಾರ ಸಂಘ ಚಿತ್ರವನ ರೆಸಾರ್ಟ್ ಹಿಂಭಾಗ ಎಚ್.ಡಿ.ಕೋಟೆ ರಸ್ತೆ, ಮೈಸೂರು ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9740976850

ಸೈಟು ಮಾರಾಟಕ್ಕಿದೆ
ಹೊಸ ಆರ್.ಟಿ. ನಗರ ಅಳತೆ 40x60, Prime location. ನಾರ್ತ್ ವೆಸ್ಟ್ ಕಾರ್ನರ್, ಪಾರ್ಕ್ ಎದುರು.
Mob: 9886281713

SITE FOR SALE
30x40, N/E Corner
MUDA Approved
27 Lakhs (Negotiable)
'E' Khatha, Near Chitravana Resort, H.D. Kote Road, Mysore.
Mob: 8088839853

PROPERTIES FOR SALE IN MYSORE
1) Dhanagalli (Near KHB)
2) Bogadi Road
3) Kergalli (Near Adithya Circle)
READY TO REGISTER
30x40, 30x50, 40x60 sites
9611825399, 8618939078

WANTED
Nursery teaching staff for reputed institution. Transport facilities available. Drop your resume through Whatsapp. Contact:
8971577685, 9980631121

SITES FOR SALE
30x40 Dementions
1.5 K.M From TVS Factory, Talur, Mysore
8746040443, 9743935558

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

ನಿವೃತ್ತರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗಾವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ವಿದ್ಯಾರ್ಹತೆ SSLC ಮೇಲ್ಪಟ್ಟು & Any Degree ದಿನಾಂಕ: 13–10–2025, ಸಮಯ 11 A.M. ಸ್ಥಳ : ಮೌರ್ಯ ರೆಸಿಡೆನ್ಸಿ ಹೋಟೆಲ್, ಹರ್ಷ ರಸ್ತೆ ಉಡ್‌ಲ್ಯಾಂಡ್ ಟಾಕೀಸ್ ಹತ್ತಿರ, ಮೈಸೂರು–01, ದಾಖಲಾತಿಗಳು : 1) ಫೋಟೋ, 2) ಪಾನ್‌ಕಾರ್ಡ್, 3) ಆಧಾರ್ ಕಾರ್ಡ್, 4) ವಿದ್ಯಾರ್ಹತೆ ಮಾರ್ಕ್ಸ್ ಕಾರ್ಡ್, 5) ಬ್ಯಾಂಕ್ ಪಾಸ್ ಪುಸ್ತಕ 1st page, Followed by Lunch, Call
9449068132
7022034200

ತಕ್ಷಣ ಬೇಕಾಗಿದ್ದಾರೆ
ಜೆ.ಪಿ.ನಗರ, ಕುವೆಂಪುನಗರದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ : 20000+ ESI ಮತ್ತು PF ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819, 9620667819

3 ದಿನಗಳ ಕಾಮಾಕ್ಯ ಪ್ರವಾಸ 29/10/25
10 ದಿನಗಳ ಮಧ್ಯ ಪ್ರದೇಶ ಮತ್ತು ಗುಜರಾತ್ ಪ್ರವಾಸ 4 ಜ್ಯೋತಿರ್ಲಿಂಗದೊಂದಿಗೆ 3/11/25
10 ದಿನಗಳ ಕಾಶಿ, ಅಯೋಧ್ಯ ಮತ್ತು ನೇಪಾಳ ಪ್ರವಾಸ 18/11/25
7 ದಿನಗಳ ಅಂಡಮಾನ್ ಪ್ರವಾಸ 12/11/25
4 ದಿನಗಳ ಕಾಶಿ ಅಯೋಧ್ಯ ಪ್ರವಾಸ 14/11/25
7 ದಿನಗಳ ಕಾಶಿ ಅಯೋಧ್ಯಾ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ 28/11/25
ಸುವರ್ಣ ಯಾತ್ರಾ
9480843945 / 9019462508

ದೀಪಾವಳಿ ಹಬ್ಬದ ಶುಭಾಶಯಗಳು 2025 ಕೊಡುಗೆ
ಡ್ರಿಲ್ಲಿಂಗ್ 6.5" ಬೋರ್‌ವೆಲ್
ಮೈಸೂರು ತಾಲ್ಲೂಕು ಸೈಟ್ ಪಾಯಿಂಟ್‌ಗಳು

Drilling. 0 to 300	85/- Feet
7" PVC Non ISI Pipe	200/- Feet
7" MS 1.6mm Pipe	280/- Feet
10" PVC Non ISI Pipe	280/- Feet
Collar, Welding, Cap	200/- Each
Holes	800/- Per 20 Feet
Labour Bata	1000/- Per Point

ಮಾರುತಿ ಬ್ಯಾಬ್ ವೆಲ್ಸ್ (R)
Mobile : 81840 00444

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ 10,800 (24 CT)
Mob: 9108146123

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. Security Guard, Salary -14000/- to 18000/-, Supervisor - 21000/- ESI, PF ಊಟ ವಸತಿ ಸೌಲಭ್ಯವಿರುತ್ತದೆ.
9900663249, 9620613034
9060106667, 9880116412

ಮನೆ ಮಾರಾಟಕ್ಕಿದೆ
Srirampura, 2nd Stage, 13th cross, 20x30
8951820020

ಬೇಕಾಗಿದ್ದಾರೆ
PGಯಲ್ಲಿ ಅಡುಗೆ ಸಹಾಯಕಿ ಹಾಗೂ ವಾರ್ಡನ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ, ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು. ಊಟ ಮತ್ತು ವಸತಿ ಇರುತ್ತದೆ.
9535744143, 9900944982

ಸೈಟ್ ಮಾರಾಟಕ್ಕಿದೆ
ವಿಜಯನಗರ 4ನೇ ಹಂತ, 2ನೇ ಫೇಸ್ 20x30 ಉತ್ತರ ದಿಕ್ಕು 45 ಲಕ್ಷ ಮತ್ತು ಕುಬೇರನಂದ ಸಾಗರ, 2ನೇ ಫೇಸ್, ಇಲವಾಲ ಹತ್ತಿರ 50x80, ಪಶ್ಚಿಮ ದಿಕ್ಕು
Rate : 1350/- Sqft
8050204172

GO MYSORE HOLIDAYS
LUXURY TOURIST BUS
Available for Family Trips, Corporate, Wedding, College & all types of Package Tours.
Call : Sudhir Ganapathy
94487 38617 / 90361 54301
90361 54302

WANTED COOK
A Brahimin Lady Cook for a small family in Dattagalli 3rd Stage.
6.30 - 9.30 am.
Good salary offered.
Call: 9845971425

SITE FOR SALE
MUDA Approved 30x30 in Bhairava Enclave.
Just 200 mtr from Gaddige road. Attached to Vijayanagara 4th stage. Just 2km from proposed cricket stadium. Price 4500/- per sqft.
Call: 8073300783
8884616461

SITE FOR SALE
Vijayanagara 4th stage Kalyani nagara attached to Reshab Layout E/F 30x42 Site with 40 feet Road
Call: 8884616461
8073300783

SITE FOR SALE
40x23 North Facing Site for sale in Panchacharya Layout, attached to Vijayanagar 4th stage.
Total 900 sqft, 5750 Rupees/sqft.
Call: 8884616461
8073300783

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 50 ವರ್ಷದೊಳಗಿನ ಪುರುಷರು ಬೈಕ್ ಇರುವಂತವರು ಬೇಕಾಗಿದ್ದಾರೆ. S.S.L.C ವಿದ್ಯಾರ್ಹತೆ ಇರಬೇಕು, ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ, ಇಲವಾಲ, ಮೈದನಹಳ್ಳಿ, ಗೋಕುಲಂ, ಮೇಟಗಳ್ಳಿ, ಹೆಬ್ಬಾಳು, ವಿಜಯನಗರ ಹಾಗೂ ಇನ್‌ಫೋಸಿಸ್ ಸುತ್ತಮುತ್ತಲಿನವರು ಸಂಪರ್ಕಿಸಿ:
7259598615

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 50 ವರ್ಷದೊಳಗಿನ ಪುರುಷರು ಬೈಕ್ ಇರುವಂತವರು ಬೇಕಾಗಿದ್ದಾರೆ. S.S.L.C ವಿದ್ಯಾರ್ಹತೆ ಇರಬೇಕು, ಬೊಂತಗಳ್ಳಿ, ಚಿಕ್ಕಅಂಕನಹಳ್ಳಿ, ಮೆಲ್ಲಹಳ್ಳಿ, ಹಾರೋಹಳ್ಳಿ, ರಂಗಸಮುದ್ರ, ವಾಜಮಂಗಲ ಹಾಗೂ ಬನ್ನೂರು ರೋಡ್ ಸುತ್ತಮುತ್ತಲಿನವರು ಸಂಪರ್ಕಿಸಿ:
7259598615

GODOWN FOR RENT
1200 Square Feet
Opposite to APMC
Attached to Ring Road, Mysore. Contact:
9886386698
9900334477

VILLA PLOT
On New NH 275
8000 to 10000 Sft.
@ Just 735/Sft.
Next to Bilikere. Buy Back guaranteed. Main Habitants from reputed Public Sector
Bank Loan Available
Few Plots only
Call 9886697052

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
40x60, 8-E
W/F Paramananda Sagara, Phase-2. Rate: 55 Lakhs. Location: Yelwala, near St. Joseph School. MUDA Approved. Contact:
Mob: 8861220989

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

SITE FOR SALE
30X46 West Face
30x46 South Face (60 Feet Road)
Tripuramba Railway Layout, Nagarthahalli, Mysore
9066642570

HOUSE FOR SALE
20X30 Sqft
1207, Lalbahadhur Shastri Nagar, Mysore, Contact:
9845837123, 6363185131

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9108048064

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
In Srinagara, JP Nagara
Dimension: 10890. Facing: North. 40 feet road, opposite to MMG Ambari Layout, close to Airport. Conversion land. Contact:
Mob: 93421 14717

20x55 ಸೆಮಿ ಕಮರ್ಷಿಯಲ್ ಮಾರಾಟಕ್ಕಿದೆ, ಹೆಬ್ಬಾಳ್ 2ನೇ ಹಂತ. ಲಕ್ಷ್ಮೀಕಾಂತನಗರ, 5 ಮಳಿಗೆಗಳಿವೆ.
Mob: 94484 25692

SITE FOR SALE
Site No. 69
30x40 Rajeev Township, 'B' Block, Danagalli, H.D. Kote Road. Rate: Rs. 20 Lakhs.
MUDA Approved Contact:
Mob: 8861220989

20x30 ಆಶ್ರಯ ಮನೆ
ಮಾರಾಟಕ್ಕಿದೆ. ಶ್ರೀನಗರದ ಪಕ್ಕ, ರಾಷ್ಟ್ರೋತ್ಥಾನ ಶಾಲೆ ಹತ್ತಿರ, ದಡದಹಳ್ಳಿ ರಸ್ತೆ
Ph. 9341050560

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಫೀಲ್ಡ್ ಸೂಪರ್‌ವೈಸರ್ (ದ್ವಿಚಕ್ರ ಹೊಂದಿರಬೇಕು)
2) ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: 1) ತಿಲಕ್‌ನಗರ 2) ವಿದ್ಯಾರಣ್ಯಪುರಂ, 3) ಕುವೆಂಪುನಗರ 4) ಹೆಬ್ಬಾಳ್
9686422400 / 9242406261

WANTED
Female candidate Telecalling and office work.
9845452922, 9845233998

Samagra Super Store
(Super Market)
A venture of Bharat Bhuvi Ventures Ltd.
WE ARE HIRING !!!
* Billing Executive
* Customer Sales Executive.
Mob: 9606030930

WANTED
Female candidates to work in property consultant & real estate office. Contact:
Balaji Properties, Vijayanagar, Mysore.
Mob: 8904812796

House for Rent
2 BHK ground floor, RCC house with solar (semi-furnished) at 3rd Cross, Chamundipuram.
For vegetarians only.
Interested persons call:
Mob: 9663396121

ಟೈಲರ್‌ಗಳು ಬೇಕಾಗಿದ್ದಾರೆ
ಅನುಭವಿ ಲೇಡೀಸ್ ಟೈಲರ್‌ಗಳು ಬೇಕಾಗಿದ್ದಾರೆ. ಸ್ಥಳ: ಕುವೆಂಪುನಗರ, ಮೈಸೂರು.
Mob: 9945616487

ವಧು ಬೇಕಾಗಿದ್ದಾರೆ BRIDE
FOR 45 YEAR OLD MALE SOFTWARE PROFESSIONAL SETTLED IN MYSORE. FIRST MARRIAGE. divorced or others please excuse, Contact
Phone: 7019452928

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ – ವಿಳಾಸ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

SITE FOR SALE
50x80 MUDA Allotment site for sale in Srirampura, Mysore.
30x50 & 40x60 site for sale near R.T. Nagara, Dattagalli, Mysore.
Mob: 9900464111

WE OFFICING ALL TYPE OF LOANS
ROI starts from 7.4%
Housing loan, mortgage loan, site purchase and mortgage, commercial property loan, all types of khata, MUDA, Corporation, G.P., 9 & 11A and 11B, Form No. 3.
9845452922, 9845233998

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

ಬೇಕಾಗಿದ್ದಾರೆ
ಸೇಲ್ಸ್ ಮ್ಯಾನೇಜರ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 20000-25000/-
Ph.7406 369 369

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ರೂ. 800. ಸಂಪರ್ಕಿಸಿ:
Mob: 7022960835

ಕಾರ್ನರ್ ಸೈಟ್ ಮಾರಾಟಕ್ಕೆ
TVS ಫ್ಯಾಕ್ಟರಿ ಹಾಗೂ ಮೇನ್ ರೋಡ್ ಗೆ ಹತ್ತಿರ, ಈಗಲೇ ಮನೆ ಕಟ್ಟಬಹುದಾದ ಪ್ರಾಪರ್ಟಿ. ಆಹಾರ/ ಬಟ್ಟೆ ವ್ಯಾಪಾರಕ್ಕೆ ಬಂಡವಾಳ ಹಾಕುವವರು ಬೇಕಾಗಿದ್ದಾರೆ. ಉತ್ತಮ ಆದಾಯ ನೀಡಲಾಗುವುದು.
8088063609

HOUSE FOR RENT
9(Nine) bedrooms Suitable for PG, Guest House and Home Stay at Mysore University Layout # No 564 With all Facilities like Broad Band Mini Function Hall on the Top of the House. Rent will Be decided in person, Contact : Veeresh
9448572102

ಸೋಲಾರ್ ಸರ್ವೀಸ್ ಅನ್ನು ಕಂಪನಿ ಕಡೆಯಿಂದ 700 ರೂ.ಗೆ ಮಾಡಿಕೊಡಲಾಗುತ್ತದೆ.
Mob: 8197383645



SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತಮುತ್ತ ಕೈಗಾರಿಕಾ ಪ್ರದೇಶ ಕಾರ್ಖಾನೆಗಳಲ್ಲಿ, ಐಟಿ ಕಂಪನಿ, ಹೋಟೆಲ್, ಸ್ಕೂಲ್, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್, ಡಾಟಾ ಎಂಟ್ರಿ ಆಪರೇಟರ್, ಟೆಲಿಕಾಲರ್ ಹಾಗೂ ಎಲೆಕ್ಟ್ರಿಕಲ್ ಕಂಪನಿಯಲ್ಲಿ ಕೆಲಸ ಮಾಡಲು ಮಹಿಳೆಯರು ಹಾಗೂ ಹೆಲ್ಪರ್‌ಗಳು, ಹೌಸ್‌ಕೀಪಿಂಗ್, ಸೆಕ್ಯೂರಿಟಿಗಳು ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ. ಕೋ ಆಪರೇಟಿವ್‌ನಲ್ಲಿ ಕೆಲಸ ಮಾಡಲು ಬಿ.ಕಾಂ. ವಿದ್ಯಾಭ್ಯಾಸವುಳ್ಳ ಮಹಿಳೆಯರು ಹಾಗೂ ಪಿಗ್ಮಿ ಕಲೆಕ್ಟರ್ ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9036461347, 9611208553, 9036757650

ಸೈಟು ಮಾರಾಟಕ್ಕಿದೆ
30x50 N/F
KBL Silicon City, Phase-2
BEML ಹತ್ತಿರ, KRS Road.
Mob: 9243536373

SITE FOR SALE
SILVER SPRING LAYOUT
30x40, Bogadi Road.
Mob: 8050821108

ತಕ್ಷಣ ಬೇಕಾಗಿದ್ದಾರೆ
ವೆಲ್ಡರ್ ಮತ್ತು ಫ್ಯಾಬ್ರಿಕೇಟರ್ ಬೇಕಾಗಿದ್ದಾರೆ. ಮೈಸೂರು, ಸಂಪರ್ಕಿಸಿ
8147469991

PLOT AND LAND FOR SALE
1) 50x80 Commercial Plot for Sale, Vijayanagar 4th stage, Mysore
2) 39 acres Land for Sale, Yelachahalli Elwaala, Mysore
7022910042

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸೆಲ್ ಸರ್ವೀಸ್ ಹೋಟೆಲ್‌ಗೆ ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಮಯ: 9 ರಿಂದ 12. ಸಂಬಳ: 7,000.
Mob: 7204404170

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9449990513

Wanted (Receptionist)
J.P. Nagar Service Apartment ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. Education: Degree. Ladies only. Language: Kannada, English, Hindi fluency. Computer knowledge must.
Mob: 9686225522

ಮನೆ ಮಾರಾಟಕ್ಕಿದೆ
20x30 ಈಸ್ಟ್ ಫೇಸಿಂಗ್, ಸಿಂಗಲ್ ಫ್ಲೋರ್, ಶ್ರೀರಾಂಪುರ 2ನೇ ಹಂತ, ಅಶೋಕಪುರಂ ಹೊಸ ರೈಲ್ವೆ ಸ್ಟೇಷನ್ ಎದುರು. ಸಂಪರ್ಕಿಸಿ:
9845713284, 9141353309

SITE FOR SALE
S/W Corner, 1800 sq.ft. KHB Kenchalagudu, H.D. Kote Road.
Mob: 9964733988

ಹೊಸಮನೆ ಮಾರಾಟಕ್ಕಿದೆ
20x30, 3 BHK
ಡುಪ್ಲೆಕ್ಸ್ ಹೌಸ್, ಯೂನಿವರ್ಸಿಟಿ ಲೇಔಟ್, ಮೈಸೂರು
97398 25766

DIRECT BY OWNER
40X60 Site | Corner | Pragathi Layout | Ananda Sagara, Belavadi East | MUDA Approved
09844434381

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಕೆಲಸದಲ್ಲಿ ಅನುಭವ ಇರಬೇಕು. (ಎಸ್‌ಎಸ್‌ಎಲ್‌ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45ರ ಒಳಗೆ).
9449547603, 8105522314

HOME FOR THE AGED
ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರೀಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ.
Call: 9607172737

ಕಲ್ಯಾಣ ಮಂಟಪ ಖಾಲಿ ಇದೆ
ದಿನಾಂಕ : 18–10–2025 ಮತ್ತು 19–10–2025 ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ ಉದಯರವಿ ರಸ್ತೆ, ಕುವೆಂಪುನಗರ, ಸಂಪರ್ಕಿಸಿ : ವೆಂಕಟೇಶ್(ವ್ಯವಸ್ಥಾಪಕರು)
9900666920

ತಕ್ಷಣ ಬೇಕಾಗಿದ್ದಾರೆ
B.A. ಐಚ್ಛಿಕ ಕನ್ನಡ ಓದಿರುವ ಪುರುಷ/ಮಹಿಳಾ ಅಭ್ಯರ್ಥಿಗಳು. ಸಂಪರ್ಕಿಸಿ
9448601454

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ವಿಜಯನಗರದಲ್ಲಿ ನೂತನವಾಗಿ ಪ್ರಾರಂಭವಾಗಿರುವ ವೆಜ್ ಅಂಡ್ ನಾನ್ ವೆಜ್ ರೆಸ್ಟೋರೆಂಟ್‌ಗೆ ಅನುಭವವುಳ್ಳ ಒಬ್ಬರು ಕ್ಯಾಷಿಯರ್ ಬೇಕಾಗಿದ್ದಾರೆ (ಪುರುಷ) ಒಬ್ಬರು ಕಿಚನ್ ಹೆಲ್ಪರ್ ಬೇಕಾಗಿದ್ದಾರೆ (ಪುರುಷ) ಸಮಯ ಬೆಳಗ್ಗೆ 11.00 ರಿಂದ ರಾತ್ರಿ 11.00ರ ವರೆಗೆ
ಸಂಪರ್ಕಿಸಿ: 9353263974

OFFICE SPACE FOR RENT
North Face, 600 sq ft
1st floor, 120 sq ft
Near Kuvempunagar Bus Depot
9902609424

ಫ್ಲಾಟ್ ಮಾರಾಟಕ್ಕಿದೆ
ಪೂರ್ವಾಭಿಮುಖ, 2 ಬಿಹೆಚ್‌ಕೆ ಈಜುಕೊಳ, ಜಿಮ್, ಕ್ಲಬ್ ಹೌಸ್, ಮಕ್ಕಳ ಆಟದ ಪ್ರದೇಶ ಸೌಕರ್ಯಗಳೊಂದಿಗೆ, ಜಯದೇವ ಆಸ್ಪತ್ರೆ ಹತ್ತಿರ, ಕೆಆರ್‌ಎಸ್ ರಸ್ತೆ, ಮೈಸೂರು –570016. ಬೆಲೆ –72.5 ಲಕ್ಷ
9620888836, 9837894461

Sites for Sale
ಬನ್ನೂರು ರಸ್ತೆ ಜಲಮಹಲ್ ಹತ್ತಿರ 29 ಲಕ್ಷ, ಹೆಚ್.ಡಿ. ಕೋಟೆ ರಸ್ತೆ, ತಳೂರು ಸರ್ಕಲ್ 16 ಲಕ್ಷ, ಸಪ್ತಮಾತೃಕ ಲೇಔಟ್, ಯಾಂದಳ್ಳಿ 24 ಲಕ್ಷ, ನಾಗವಾಲ ರಸ್ತೆ, ಇಲವಾಲ 16.5 – 22 ಲಕ್ಷ, ಮನೆ ಬಾಡಿಗೆ (6 ಸಾವಿರ) ಭೋಗ್ಯ (6 ಲಕ್ಷ) ರಾಮಕೃಷ್ಣನಗರ ಹಾಗೂ ಜಾಕಿ ಕ್ವಾಟ್ರಸ್ ಬಳಿ.
BROKERS EXCUSE
Mob: 9742878878

ಬೇಕಾಗಿದ್ದಾರೆ
ಮೈಸೂರು ರಾಮಕೃಷ್ಣನಗರದಲ್ಲಿ ಪ್ರತಿಷ್ಠಿತ ಕುಟುಂಬಕ್ಕೆ ಮನೆ ಕೆಲಸಕ್ಕೆ ಮಧ್ಯ ವಯಸ್ಸಿನ ಮಹಿಳೆ ಬೇಕಾಗಿದ್ದಾರೆ. ಮನೆಯಲ್ಲಿ ಇರುವವರಿಗೆ ಆದ್ಯತೆ
9686667141

WANTED
Accountant, Male or Female, Tally prime Compulsory, 3 Years of Experience, Location : Saraswathi Puram
Mob. 7026355153

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಪೌರ ಕಾರ್ಮಿಕರಿಂದ ಪುರಸಭೆಗೆ ರಾಷ್ಟ್ರ ಮಟ್ಟದ ಪ್ರಶಸ್ತಿ

● ಸಮಾರಂಭಕ್ಕೆ ತೆರಳಲು ಪೌರ ಕಾರ್ಮಿಕರಿಗೆ ಅನುಕೂಲ ಕಲ್ಪಿಸುವೆ ● ನಿವೇಶನ ನೀಡಲು ಕ್ರಮ: ಶಾಸಕ ಡಿ.ರವಿಶಂಕರ್



ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಅ.10– ಪಟ್ಟಣದ ಪುರಸಭೆ ರಾಷ್ಟ್ರ ಮಟ್ಟದ ಸ್ವಚ್ಛತಾ ನಗರ ಎಂಬ ಪ್ರಶಸ್ತಿ ಮುಡಿಗೇರಿಸಿಕೊಳ್ಳಲು ಮೂಲ ಕಾರಣರಾದ ಪೌರ ಕಾರ್ಮಿಕರು ಕೂಡ ಅಧಿಕಾರಿಗಳು ಮತ್ತು ಅಧ್ಯಕ್ಷರೊಂದಿಗೆ ದೆಹಲಿಯಲ್ಲಿ ನಡೆಯುವ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಪೌರಾಡಳಿತ ಸಚಿವ ರಹೀಂ ಖಾನ್ ಅವರಿಗೆ ಮನವಿ ಮಾಡುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಶುಕ್ರವಾರ ನಡೆದ ಪೌರ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಇಲ್ಲಿವರೆಗೆ ಪ್ರಶಸ್ತಿ ಸ್ವೀಕಾರ ಮಾಡಲು ಅಧ್ಯಕ್ಷರು ಮತ್ತು ಅಧಿಕಾರಿಗಳು ಮಾತ್ರ ತೆರಳುತ್ತಿದ್ದರು. ಆದರೆ ಸ್ವಚ್ಛತೆ ಪ್ರಶಸ್ತಿಗೆ ಮೂಲ ಕಾರಣಕರ್ತರಾದ ಪೌರ ಕಾರ್ಮಿಕರಿಗೂ ಗೌರವ ಸಲ್ಲಿಸುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಪೌರ ಕಾರ್ಮಿಕ ಮುಖಂಡರ ಮನವಿ ಮತ್ತು ಅವರು ವಾಸಿಸುತ್ತಿರುವ ಬಡಾವಣೆ ಪರಿಸ್ಥಿತಿ ಅವಲೋಕಿಸಿ ಒಂದೇ ಮನೆಯಲ್ಲಿ ಹೆಚ್ಚಿನ ಕುಟುಂಬಗಳು ವಾಸಿಸುತ್ತಿರುವುದು ತಿಳಿದು ಬಂದಿದ್ದು, ಈ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಪ್ರಸ್ತುತ ನಿರ್ಮಾಣವಾಗುತ್ತಿರುವ ಗುಂಪು ಮನೆಗಳಲ್ಲಿ ಪೌರ ಕಾರ್ಮಿಕರಿಗೆ ಮನೆಗಳನ್ನು ಮೀಸಲಾಗಿ ಇಡುವ ಜೊತೆಗೆ ಸ್ಥಳೀಯವಾಗಿ ಜಾಗ ಗುರುತಿಸಿ ಪೌರ ಕಾರ್ಮಿಕರ ಕುಟುಂಬಗಳಿಗೆ ನಿವೇಶನ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

> ಆರೋಗ್ಯಕರ ಪರಿಸರ ನಿರ್ಮಾಣಕ್ಕೆ ಪೌರ ಕಾರ್ಮಿಕರ ಶ್ರಮ ಮುಖ್ಯ ಕಾರಣವಾಗಿದ್ದು, ಅವರಿಗೆ ವೈಯಕ್ತಿಕವಾಗಿ ಪಟ್ಟಣದ ಎಲ್ಲಾ ನಾಗರಿಕರ ಪರವಾಗಿ ಕೃತಜ್ಞತೆ ಸಲ್ಲಿಸುವ ಜೊತೆಗೆ ಪ್ರತಿಯೊಬ್ಬ ಪೌರ ಕಾರ್ಮಿಕರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ತಮ್ಮ ವೃತ್ತಿಯಲ್ಲಿ ತಮ್ಮ ಮಕ್ಕಳು ಮುಂದು ವರಿಯಬಾರದು ಎಂಬ ಉದ್ದೇಶದಿಂದ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಿಸಿ ಸಮಾಜದಲ್ಲಿ ಉತ್ತಮ ಸ್ಥಾನಮಾನಗಳಿಗೆ ಹೋಗುವಂತೆ ಪ್ರೇರೇಪಿಸಬೇಕು. - ಡಿ.ರವಿಶಂಕರ್, ಶಾಸಕ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪೌರ ಕಾರ್ಮಿಕರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಇದನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಂಡು ಮುನ್ನಲೆಗೆ ಬರಬೇಕು. ಪೌರ ಕಾರ್ಮಿಕರ ವೇತನ ಪರಿಷ್ಕರಣೆ ಮತ್ತು ಇನ್ನಿತರ ಅನುಕೂಲ ಕಲ್ಪಿಸಿಕೊಡುವಂತೆ ನಾನು ಸಿಎಂಗೆ ಮನವಿ ಮಾಡುವ ಜೊತೆಗೆ ಮುಂದಿನ ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸುತ್ತೇನೆ. ಪಟ್ಟಣದ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು. ಜಿಲ್ಲಾ ಸ್ಥಾಯಿ ಕರ್ಮಚಾರಿ ವಿಚಕ್ಷಣಾ ಜಾಗೃತ ಸಮಿತಿ ಶಾಶ್ವತ ಸದಸ್ಯ ಕೆ.ನಂಜಪ್ಪ ಬಸವನಗುಡಿ, ಪುರಸಭಾಧ್ಯಕ್ಷ ಶಿವು ನಾಯಕ್, ಸದಸ್ಯರಾದ ಪ್ರಕಾಶ್, ಕೆ.ಎಲ್. ಜಗದೀಶ್, ಉಮೇಶ್, ನಟರಾಜ್, ಶಂಕರ್, ಮುಖ್ಯಾಧಿಕಾರಿ ಜಿ.ಎಸ್.ರಮೇಶ್ ಮಾತನಾಡಿದರು.

ಕಾರ್ಯಕ್ರಮಕ್ಕೂ ಮುನ್ನ ಮೈಸೂರು ರಸ್ತೆ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮೆರವಣಿಗೆಯಲ್ಲಿ ತೆರಳಿ ಗರಡುಗಂಭ ವೃತ್ತದಲ್ಲಿರುವ ಶ್ರೀಕೃಷ್ಣರಾಜ ಒಡೆಯರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ವಾಣಿವಿಲಾಸ ರಸ್ತೆಮೂಲಕ ತೆರಳಿ ಪುರಸಭಾ ವೃತ್ತದಲ್ಲಿರುವ ಡಾ.ಬಾಬು ಜಗಜೀವನ ರಾಮ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ವೇದಿಕೆಗೆ ಆಗಮಿಸಿದರು.

ವೇದಿಕೆಯಲ್ಲಿ ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಹಾಗೂ ಸೇವೆ ಸಲ್ಲಿಸುತ್ತಿರುವ ಎಲ್ಲಾ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಪುರಸಭಾ ಸದಸ್ಯರಾದ ಸೈಯದ್ ಸಿದ್ದೀಕ್, ಮಂಜುಳಾ, ಶಂಕರ್ ಸ್ವಾಮಿ, ಸರೋಜ, ಸಂತೋಷಗೌಡ, ಮಾಜಿ ಸದಸ್ಯ ಕೆ.ವಿ.ಲೋಕೇಶ್, ಪೌರಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಕೃಷ್ಣ, ಗೌರವಾಧ್ಯಕ್ಷ ಎಸ್.ಪಳನಿ, ಪ್ರಧಾನ ಕಾರ್ಯದರ್ಶಿ ಕೆ.ಆರ್.ಕುಮಾರ. ಉಪಾಧ್ಯಕ್ಷ ನಂಜುಂಡ, ಖಜಾಂಚಿ ಹೇಮಂತ ಕುಮಾರ್, ಮುಖಂಡರಾದ ಪುಟ್ಟರಾಜು, ಆದರ್ಶ, ನವೀದ್, ಧರ್ಮ, ಆರೋಗ್ಯ ನಿರೀಕ್ಷಕರಾದ ರಾಜೇಂದ್ರ, ಹೆಚ್.ಎಸ್. ಲೋಕೇಶ್ ಸೇರಿದಂತೆ ಇನ್ನಿತರರಿದ್ದರು.

ಮಾರಮ್ಮನ ದೇವಾಲಯದ ಬೀಗ ಒಡೆದು ಚಿನ್ನಾಭರಣ ಕಳವು



ಹೆಚ್.ಡಿ.ಕೋಟೆ, ಅ.10– ದೇವಾಲಯದ ಬೀಗ ಒಡೆದು ಚಿನ್ನಾಭರಣ, ನಗದು ಕಳವು ಮಾಡಿರುವ ಘಟನೆ ಪಟ್ಟಣದ ವಾರಾಹಿ ಮತ್ತು ಮಾರಮ್ಮನವರ ದೇವಾಲಯದಲ್ಲಿ ಶುಕ್ರವಾರ ಮುಂಜಾನೆ ನಡೆದಿದೆ.

ಪಟ್ಟಣದ ಒಂದನೇ ಮುಖ್ಯ ರಸ್ತೆಯಲ್ಲಿರುವ ವಾರಾಹಿ ಮತ್ತು ಮಾರಮ್ಮನವರ ದೇವಾಲಯದ ಬೀಗ ಒಡೆದು ಒಳನುಗ್ಗಿರುವ ದುಷ್ಕರ್ಮಿಗಳು ಅಮ್ಮನವರಿಗೆ ಧರಿಸಿದ್ದ ಚಿನ್ನದ 13 ತಾಳಿಗಳು, ಎರಡು ಕಾಸುಗಳು, 10 ಗುಂಡುಗಳು ಸೇರಿದಂತೆ 1.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ, ಹುಂಡಿಯಲ್ಲಿದ್ದ ಸುಮಾರು 30 ಸಾವಿರ ರೂ. ದೋಚಿ ಪರಾರಿಯಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸ್ಐ ಚಿಕ್ಕನಾಯಕ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದು, ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇತ್ತೀಚಿನ ದಿನಗಳಲ್ಲಿ ಕೋಟೆ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ದೇವಾಲಯಗಳನ್ನು ದುಷ್ಕರ್ಮಿಗಳು ದೋಚುತ್ತಿದ್ದು, ಕಳ್ಳರನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿ.ಸಿ.ಪೊನ್ನಮ್ಮ ನಿಧನ



ಹುಣಸೂರು, ಅ.10– ನಗರದ ಗೋಕುಲ ಬಡಾವಣೆ ನಿವಾಸಿ, ನಿವೃತ್ತ ಸಮಾಜ ಕಲ್ಯಾಣ ಇಲಾಖೆ ಸಹಾಯಕ ವ್ಯವಸ್ಥಾಪಕಿ ಸಿ.ಸಿ.ಪೊನ್ನಮ್ಮ(79) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ವಕೀಲ ಜಾಲಿ ಕುಮಾರ್, ಮಡಿಕೇರಿ ಆರ್‌ಟಿಓ ಇನ್ಸ್‌ಪೆಕ್ಟರ್ ಮಹೇಶ್ ಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೊಡಗಿನ ಪೊನ್ನಂಪೇಟೆಯಲ್ಲಿರುವ ಮೃತರ ತೋಟದಲ್ಲಿ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಲ್ಕುಂದದಲ್ಲಿ ತಂಬಾಕು ಹರಾಜಿಗೆ ಚಾಲನೆ



ಚಿಲ್ಕುಂದ ತಂಬಾಕು ಹರಾಜು ಮಾರುಕಟ್ಟೆಗೆ ಸಚಿವ ಕೆ.ವೆಂಕಟೇಶ್ ಭೇಟಿ ನೀಡಿದರು.

ಕಂಪಲಾಪುರ, ಅ.10– ಇಲ್ಲಿಗೆ ಸಮೀಪದ ಜವನಿಕುಪ್ಪೆ ಗೇಟ್ ಬಳಿಯ ಚಿಲ್ಕುಂದ ತಂಬಾಕು ಹರಾಜು ಮಾರುಕಟ್ಟೆ ಸಂಖ್ಯೆ 62 ರಲ್ಲಿ ಈ ಸಾಲಿನ ಹರಾಜು ಪ್ರಕ್ರಿಯೆಗೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

ಮಾರುಕಟ್ಟೆಗೆ ಒಟ್ಟು 18 ಬೇಲುಗಳು ಬಂದಿದ್ದವು. ಈ ಪೈಕಿ 9 ಬೇಲುಗಳ ಹರಾಜಿಗೆ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು. ಬಳಿಕ ಸಂಸದ ಯದುವೀರ್ ಉಳಿದ 9 ಬೇಲುಗಳ ಹರಾಜಿಗೆ ಚಾಲನೆ ನೀಡಿದರು. ಎಲ್ಲವೂ ಗುಣಮಟ್ಟದ ತಂಬಾಕು ಆದ್ದರಿಂದ ಪ್ರತಿ ಕೆಜಿಗೆ 320 ರೂ. ದೊರೆಯಿತು. ಹರಾಜಿನಲ್ಲಿ ಐಟಿಸಿ, ಜಿಪಿಐ, ಅಲಯನ್ಸ್, ಮುಸ್ತಫ, ಪಿಟಿಪಿ, ಎಂಪಿಎಸ್ ಸೇರಿದಂತೆ ಒಟ್ಟು 6 ಕಂಪನಿಗಳು ಭಾಗವಹಿಸಿದ್ದವು. ಈ ವೇಳೆ ಪ್ರಾದೇಶಿಕ ವ್ಯವಸ್ಥಾಪಕ ಕೆ.ಗೋಪಾಲ್, ಹರಾಜು ಅಧೀಕ್ಷಕ ಸಿದ್ದರಾಮ ಡಾಂಗೆ, ಮಾಜಿ ಶಾಸಕ ಹೆಚ್.ಸಿ.ಬಸವರಾಜ್, ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ, ಉಪಾಧ್ಯಕ್ಷ ಎ.ಮಂಜು, ರೈತ ಮೋರ್ಚಾ ಅಧ್ಯಕ್ಷ ನಿತ್ಯಾನಂದ, ಕೊತ್ತೇಗಾಲ ಗ್ರಾಪಂ ಮಾಜಿ ಅಧ್ಯಕ್ಷ ಕರುಣಾಕರ್, ಬೇಲಾಳು ಶಿವಣ್ಣ, ಈರಣ್ಣ, ಡಿ.ಸ್ವಾಮಿ, ಕಣಗಾಲ್ ಮಲ್ಲೇಶ್, ಕಲ್ಲಳ್ಳಿ ಶಿವಣ್ಣ, ಹುಣಸೂರು ನಗರಸಭೆ ಮಾಜಿ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ಸೇರಿದಂತೆ ಹಲವರಿದ್ದರು.

ಬಂಕಹಳ್ಳಿ: ಉದ್ಭವ ಶಿವಲಿಂಗ, ನಂದಿ ಬಸವ ಭಗ್ನ



ಬಂಕಹಳ್ಳಿ ಹೊರ ವಲಯದ ಜಮೀನಿನಲ್ಲಿ ಭಗ್ನಗೊಂಡಿರುವ ಉದ್ಭವ ಶಿವಲಿಂಗ ಹಾಗೂ ನಂದಿಬಸವ ಮೂರ್ತಿಗಳು

ನಂಜನಗೂಡು, ಅ.10– ತಾಲೂಕಿನ ಬಂಕಹಳ್ಳಿ ಗ್ರಾಮದ ಜಮೀನಿನಲ್ಲಿದ್ದ ಉದ್ಭವ ಶಿವಲಿಂಗ ಹಾಗೂ ನಂದಿ ಬಸವ ಮೂರ್ತಿಗಳನ್ನು ಕಿಡಿಗೇಡಿಗಳು ಭಗ್ನಗೊಳಿಸಿ, ಗ್ರಾಮಸ್ಥರು ಪೂಜಾ ಕೈಂಕರ್ಯ ನಡೆಸದಂತೆ ದಿಗ್ಬಂಧನ ವಿಧಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಹೊಸದಾಗಿ ಮದುವೆಯಾದ ಜೋಡಿಗಳು ಗ್ರಾಮದ ಹೊರವಲಯದ ಜಮೀನಿನಲ್ಲಿರುವ ಉದ್ಭವ ಶಿವಲಿಂಗ ಹಾಗೂ ನಂದಿ ಬಸವ ವಿಗ್ರಹಗಳಿಗೆ ಪೂಜೆ ಸಲ್ಲಿಸಿ ಆಶೀರ್ವಾದ ಪಡೆಯುವುದು ವಾಡಿಕೆ. 1982–83ರ ಸಾಲಿನಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಅನ್ಯ ಕೋಮಿನ ವ್ಯಕ್ತಿಗೆ ನಿಯಮಬಾಹಿರವಾಗಿ ಜಮೀನನ್ನು ಖಾತೆ ಮಾಡಿಕೊಟ್ಟಿದ್ದು, ಇತ್ತೀಚೆಗೆ 2 ತಿಂಗಳಿಂದ ಗ್ರಾಮಸ್ಥರು ಸ್ಥಳಕ್ಕೆ ತೆರಳಿ ಪೂಜಾ ಕೈಂಕರ್ಯ ನಡೆಸದಂತೆ ಅನ್ಯ ಕೋಮಿನ ವ್ಯಕ್ತಿ ಅಡ್ಡಿಪಡಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಶಾಸಕ ಬಿ.ಹರ್ಷವರ್ಧನ್, ಶಿವಲಿಂಗದ ಮೇಲೆ ಪೆಟ್ಟು ಬಿದ್ದಿರುವ ಗುರುತುಗಳಿದ್ದು, ಪಕ್ಕದಲ್ಲಿ ನಂದಿ ಬಸವನ ತಲೆ ಭಾಗ ಮುರಿದು ಬಿದ್ದಿದೆ. ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತಂದಿರುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ದಾಖಲಾತಿಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಸ್ಥಳದಲ್ಲಿ ದೇವಾಲಯ ಇತ್ತು ಎಂಬುದಕ್ಕೆ ಕುರುಹು ಇದೆ. ಹಾಗಾಗಿ ಇದೇ ಸ್ಥಳದಲ್ಲಿ ದೇವಾಲಯ ನಿರ್ಮಿಸಬೇಕಿದೆ. ಬಂಕಹಳ್ಳಿ ಗ್ರಾಮಸ್ಥರು ಶಿವಲಿಂಗವನ್ನು ಭಗ್ನಗೊಳಿಸಿರುವ ಕುರಿತು ತಹಸೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದಾರೆ. ಸಂಬಂಧಪಟ್ಟ ಕಂದಾಯ ಮತ್ತು ಪುರಾತತ್ವ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದಲ್ಲಿ ಉಂಟಾಗಿರುವ ಅಶಾಂತಿಯ ವಾತಾವರಣಕ್ಕೆ ತೆರೆ ಎಳೆಯಬೇಕಿದೆ. ಇಲ್ಲವಾದಲ್ಲಿ ಉಗ್ರ ಹೋರಾಟ ಮಾಡಲಾಗುತ್ತದೆ ಎಂದರು.

ಉಪವಿಭಾಗಾಧಿಕಾರಿ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ



ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ವಾಲ್ಮೀಕಿ ಜಯಂತಿ ನಡೆಯಿತು.

ಹುಣಸೂರು, ಅ.10– ಮೂಲ ರಾಮಾಯಣವನ್ನು ಪ್ರಸ್ತುತ ಕಾಲಘಟ್ಟಕ್ಕೆ ತಕ್ಕಂತೆ ಬಹು ವಿವರವಾಗಿ ಸಾಮಾಜಿಕವಾಗಿ ತಿಳಿ ಹೇಳುವ ಮೂಲಕ ಈ ಗ್ರಂಥ ಜನರಿಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಉಪ ವಿಭಾಗಾಧಿಕಾರಿ ವಿಜಯ್‌ಕುಮಾರ್ ತಿಳಿಸಿದರು.

ನಗರದ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿದ ಅವರು, ರಾಮಾಯಣ ಜನರಿಂದ ಜನರಿಗೆ, ಬಾಯಿಂದ ಬಾಯಿಗೆ ಹರಿದು ತ್ರಿಡಿ ಡಿಜಿಟಲ್ ಹಾಗೂ ದೃಶ್ಯ ಕಾವ್ಯವಾಗಿ ಜನರಿಗೆ ಪರಿಚಯಿಸುವ ಕಾವ್ಯವಾಗಿದೆ. ಈ ನಿಟ್ಟಿನಲ್ಲಿ ವಾಲ್ಮೀಕಿಯವರ ಮಹಾಕಾವ್ಯದ ಜೊತೆಗೆ ಸಮಾಜಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದರು.

ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರ ಮೂಲ ರಾಮಾಯಣ ಇಟ್ಟುಕೊಂಡು ಹಲವು ಕಥೆಗಳು ಅವರವರ ಕಲ್ಪನೆಗೆ ತಕ್ಕಂತೆ ಹುಟ್ಟಿಕೊಂಡಿವೆ. ಆದರೂ ಸಮಾಜದಲ್ಲಿ ಧರ್ಮ ರಕ್ಷಣೆಗಾಗಿ ವಾಲ್ಮೀಕಿಯವರು ಬರೆದ ರಾಮಾಯಣ ಸ್ಫೂರ್ತಿದಾಯಕವಾಗಿದೆ ಎಂದರು.

ನಾಯಕ ಸಮಾಜದ ತಾಲೂಕು ಅಧ್ಯಕ್ಷ ಅಣ್ಣಯ್ಯ ನಾಯಕ ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ಅ.29ರಂದು ನಗರದಲ್ಲಿ ಅದ್ಧೂರಿಯಾಗಿ ಆಚರಿಸಲಾಗುವುದು. ಹೀಗಾಗಿ ಎಲ್ಲಾ ಸಮುದಾಯದವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಗಂಗಾಧರ್, ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವು, ತಾಪಂ ಇಓ ಹೊಂಬಯ್ಯ, ಪೌರಾಯುಕ್ತೆ ಮಾನಸ, ಅಧ್ಯಕ್ಷ ಮಲ್ಲಿಕ್ ಪಾಷ, ಉಪಾಧ್ಯಕ್ಷೆ ಆಶಾ, ಸದಸ್ಯ ಸಿ.ದೇವರಾಜ್, ತಾಪಂ ಮಾಜಿ ಸದಸ್ಯ ದೇವರಾಜು, ತಾಲೂಕು ನಾಯಕರ ಸಂಘದ ಕಾರ್ಯದರ್ಶಿ ರವಿ, ಆದಿ ಜಾಂಬವ ಸಮಾಜದ ತಾಲೂಕು ಅಧ್ಯಕ್ಷ ಶಿವಣ್ಣ, ಜಿಲ್ಲಾ ಕಾರ್ಯದರ್ಶಿ ಡಿ.ಕುಮಾರ್, ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಎಸ್ಐ ಸಂತೋಷ್ ಕಶ್ಯಪ್, ಸುಬ್ಬರಾವ್, ರಾಚಪ್ಪ ಜಯರಾಂ, ಡೀಡ್ ಶ್ರೀಕಾಂತ್, ನಿವೃತ್ತ ಪ್ರಾಂಶುಪಾಲ ಮಹೇಶಾರಾಧ್ಯ, ರಾಜು ಸೇರಿದಂತೆ ಇನ್ನಿತರರಿದ್ದರು.

ಆದಿ ಕರ್ನಾಟಕ ಮಹಾಸಭಾ ಪದಾಧಿಕಾರಿಗಳ ಆಯ್ಕೆ



ಸಭೆಯಲ್ಲಿ ಮಹಾಸಭಾ ತಾಲೂಕು ಅಧ್ಯಕ್ಷ ಇಟ್ನ ರಾಜಣ್ಣ ಮಾತನಾಡಿದರು.

ಸರಗೂರು, ಅ.10– ಸಮಾಜದ ಅಭಿವೃದ್ಧಿಗಾಗಿ ದುಡಿಯುತ್ತಿರುವ ಆದಿ ಕರ್ನಾಟಕ ಮಹಾಸಭಾ ನೂತನ ತಾಲೂಕು ಸರಗೂರಿನಲ್ಲಿಯೂ ಅಸ್ತಿತ್ವಕ್ಕೆ ಬಂದಿದ್ದು, ಎರಡನೇ ಅವಧಿಗೂ ತನ್ನ ಪದಾಧಿಕಾರಿಗಳನ್ನು ಆಯ್ಕೆ ಮಾಡಿಕೊಂಡಿದೆ ಎಂದು ಮಹಾಸಭಾ ತಾಲೂಕು ಅಧ್ಯಕ್ಷ ಇಟ್ನ ರಾಜಣ್ಣ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಗೌರವಾಧ್ಯಕ್ಷರಾಗಿ ಇದಿಯಪ್ಪ, ಉಪಾಧ್ಯಕ್ಷರಾಗಿ ಪುಟ್ಟಸ್ವಾಮಿ, ಚಿನ್ನಣ್ಣ, ಕಾಳಸ್ವಾಮಿ, ನಾಗೇಂದ್ರ, ಬಿಡಗಲು ಶಿವಣ್ಣ, ಪ್ರಧಾನ ಕಾರ್ಯದರ್ಶಿ ಹಾದನೂರು ಪ್ರಕಾಶ್, ಖಜಾಂಚಿ ಶ್ರೀನಿವಾಸ್, ಸಹ ಕಾರ್ಯದರ್ಶಿ ಸೂರ್ಯ ಕುಮಾರ್, ನಿರ್ದೇಶಕರಾಗಿ ಹಾಲಯ್ಯ, ವೆಂಕಟಾಚಲ, ಕೂಡಗಿ ಗೋವಿಂದ, ಸಣ್ಣಪಾಪ, ಕೆ.ಗೋವಿಂದ, ಶಿವ ಕುಮಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದರು.

ಮಹಾಸಭಾ ಜನಾಂಗದ ಅಭಿವೃದ್ಧಿ, ತಾಲೂಕು ಅಭಿವೃದ್ಧಿಯೊಂದಿಗೆ ಇತರೆ ಜನಾಂಗದವರೊಂದಿಗೆ ಉತ್ತಮ ಒಡನಾಟವಿಟ್ಟುಕೊಂಡು ಸಮಾಜವನ್ನು ಮುಂಚೂಣಿಗೆ ತರಲು ಪ್ರಾಮಾಣಿಕವಾಗಿ ಕೆಲಸ ಮಾಡಲಾಗುವುದು. ಅಲ್ಲದೇ ತಮ್ಮ ಜವಾಬ್ದಾರಿ ಅರಿತು ಯಾವುದೇ ಕಪ್ಪು ಚುಕ್ಕೆ ಬಾರದಂತೆ ಎಚ್ಚರ ವಹಿಸಿ ಕೆಲಸ ಮಾಡಲಾಗುವುದು ಎಂದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಎಸ್. ಗವಾಯಿ ಅವರ ಮೇಲೆ ವಕೀಲರೊಬ್ಬರು ಶೂ ಎಸೆಯಲು ಯತ್ನಿಸಿರುವುದನ್ನು ಖಂಡಿಸಿ ಆದಿ ಕರ್ನಾಟಕ ಮಹಾಸಭಾದಿಂದ ಅ.13ರಂದು ಪಟ್ಟಣದಲ್ಲಿ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದರು.

ಸಭೆಯಲ್ಲಿ ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ನಾಗರಾಜು, ಜಿಪಂ ಮಾಜಿ ಉಪಾಧ್ಯಕ್ಷೆ ಭಾಗ್ಯಲಕ್ಷ್ಮಿ, ನಿಂಗರಾಜು, ಮಹೇಂದ್ರ ಹೂವಿನಕೊಳ, ಲೋಕೇಶ್, ಗ್ರಾಮೀಣ ಮಹೇಶ್, ಅಣ್ಣಯ್ಯಸ್ವಾಮಿ, ಲಕ್ಷ್ಮಣ, ಕುಮಾರ್ ಸೇರಿದಂತೆ ಪದಾಧಿಕಾರಿಗಳು ಹಾಜರಿದ್ದರು.

ಸಂಪೂರ್ಣ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ

ನಾಳೆ ಕ್ರಾಂತಿಕಾರಿ ಪ್ರತಿಭಟನಾ ಸಮಾವೇಶ



ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಮಾತನಾಡಿದರು.

ತಿ.ನರಸೀಪುರ, ಅ.10– ಸಂಪೂರ್ಣ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಅ.12ರಂದು ಗೋಪಾಲಪುರದ ಎನ್.ರಾಚಯ್ಯ ಸ್ಮಾರಕ ಮೈದಾನದಲ್ಲಿ ಕ್ರಾಂತಿಕಾರಿ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಜಾರಿಗೊಳಿಸಲಾಗಿರುವ ಒಳ ಮೀಸಲಾತಿ ವರ್ಗೀಕರಣ ಗೊಂದಲದಿಂದ ಕೂಡಿರುವ ಹಿನ್ನೆಲೆಯಲ್ಲಿ ಸಂಪೂರ್ಣ ಒಳ ಮೀಸಲಾತಿ ಜಾರಿಗೊಳಿಸುವಂತೆ ಸಮಾವೇಶದಲ್ಲಿ ಒತ್ತಾಯ ಮಾಡಲಿದ್ದು, ತಾಲೂಕಿನ ಮಾದಿಗ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಮನವಿ ಮಾಡಿದರು.

2024 ರಲ್ಲಿ 7 ಮಂದಿ ನ್ಯಾಯಾಧೀಶರನ್ನು ಒಳಗೊಂಡ ಪೀಠವು ಸರ್ವೋಚ್ಛ ನ್ಯಾಯಾಲಯದಲ್ಲಿ ಒಳ ಮೀಸಲಾತಿ ಆದೇಶ ತೀರ್ಮಾನ ಮಾಡಿತು. ಆದರೆ ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಒಂದು ವರ್ಷ ವಿಳಂಬ ಮಾಡಿ 2025ರ ಆ.19ರಂದು ನಾಗಮೋಹನ್ ದಾಸ್ ಆಯೋಗ ರಚನೆ ಮಾಡಿ ಒಳ ಮೀಸಲಾತಿಯನ್ನು ಜನಸಂಖ್ಯೆಗನುಗುಣವಾಗಿ ಹಂಚಿಕೆ ಮಾಡಿ ಮಾದಿಗ ಸಮುದಾಯಕ್ಕೆ ಶೇ.6ರಷ್ಟು ಮೀಸಲು ಎಂದು ನಿಗದಿ ಮಾಡಿ ಆದೇಶ ಹೊರಡಿಸಿತು. ಆದೇಶದ ಪ್ರಕಾರ ಒಳ ಮೀಸಲಾತಿಗಾಗಿ ಆದೇಶ ಹೊರಡಿಸಿತೇ ಹೊರತು, ಮೀಸಲಾತಿ ಪ್ರಮಾಣ ಯಾವುದಕ್ಕೆ ಅನ್ವಯಿಸುತ್ತದೆ. ರಾಜಕೀಯವಾಗಿಯೋ ಅಥವಾ ಹುದ್ದೆ ಪಡೆಯುವುದಕ್ಕಾಗಿಯೋ, ಶಿಕ್ಷಣಕ್ಕಾಗಿಯೋ ಎಂಬ ಬಗ್ಗೆ ಮಾಹಿತಿ ನೀಡಿಲ್ಲ. 35 ವರ್ಷ ಮಾದಿಗ ಸಮಾಜ ಒಳ ಮೀಸಲಾತಿ ಜಾರಿಗೆ ಹೋರಾಟ ನಡೆಸಿದೆ. ಆದರೆ ರಾಜ್ಯ ಸರ್ಕಾರ ಮೀಸಲಾತಿ ಯಾವುದಕ್ಕೆ ಅನ್ವಯಿಸುತ್ತದೆ ಎಂದು ಸರಿಯಾಗಿ ಮಾಹಿತಿ ನೀಡದಿರುವುದರಿಂದ ಗೊಂದಲ ಉಂಟಾಗಿದೆ. ಒಳ ಮೀಸಲಾತಿಯಲ್ಲಿ ಯಾವುದೇ ಸ್ಪಷ್ಟತೆ ಇಲ್ಲದಂತಾಗಿದೆ. ಈಗ ಡಿಸೆಂಬರ್‌ನಲ್ಲಿ ಗ್ರಾಪಂ, ಜಿಪಂ ಹಾಗೂ ತಾಪಂ ಚುನಾವಣೆಗಳು ನಡೆಯುತ್ತಿದ್ದು, ಸರ್ಕಾರ ಒಳ ಮೀಸಲಾತಿ ಅಂಕಿ ಅಂಶ ನೀಡಿದೆಯೇ ಹೊರತು ಅಧಿಕೃತವಾಗಿ ಆದೇಶ ಹೊರಡಿಸಿಲ್ಲ. ಮುಖ್ಯಮಂತ್ರಿಗಳು ಆದೇಶಿಸಲು ಮುತುವರ್ಜಿ ತೋರಿಲ್ಲ. ಅಥವಾ ಕೆಲ ಸಚಿವರಿಂದ ಮೀಸಲಾತಿ ಆದೇಶಕ್ಕೆ ತೊಡಕಾಗಿರಬಹುದು. ಕಾಣದ ಕೈಗಳು ಇಲ್ಲಿ ಕೆಲಸ ಮಾಡಿರುವಂತೆ ಕಾಣುತ್ತಿದೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ಹೀಗಾಗಿ ಸಂಪೂರ್ಣ ಒಳ ಮೀಸಲಾತಿ ಜಾರಿಗಾಗಿ ಅ.12 ರಂದು ಮಧ್ಯಾಹ್ನ 3 ಗಂಟೆಗೆ ಗೋಪಾಲಪುರದ ಎನ್.ರಾಚಯ್ಯ ಸ್ಮಾರಕ ಮೈದಾನದ ದಿ.ಟಿ. ನಾಗಣ್ಣ ವೇದಿಕೆಯಲ್ಲಿ ಕ್ರಾಂತಿಕಾರಿ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಮಾದಿಗ ಸಮುದಾಯದ ನಾಯಕರಾದ ಭಾಸ್ಕರ್ ಪ್ರಸಾದ್ ಭಾಗವಹಿಸುತ್ತಿದ್ದಾರೆ. ಸಮಾವೇಶದಲ್ಲಿ ಮುಂದಿನ ಹೋರಾಟದ ಸಾಧಕ ಭಾದಕಗಳ ಬಗ್ಗೆ ಚರ್ಚೆ ನಡೆಸಲಾಗುತ್ತದೆ. ಭಾಸ್ಕರ ಪ್ರಸಾದ್ ಸೇರಿದಂತೆ ಮತ್ತಷ್ಟು ರಾಜ್ಯ ನಾಯಕರು ಆಗಮಿಸುತ್ತಿದ್ದು, ತಿ.ನರಸೀಪುರ ಪಟ್ಟಣದಲ್ಲಿಯೇ ಸಮಾವೇಶ ನಡೆಯುತ್ತಿರುವುದರಿಂದ ತಾಲೂಕಿನ 28–30 ಹಳ್ಳಿಗಳಲ್ಲಿರುವ ಮಾದಿಗ ಸಮಾಜದವರು, ಜನಪ್ರತಿನಿಧಿಗಳು, ಸಂಘಟನೆ ಮುಖ್ಯಸ್ಥರು, ಮಹಿಳಾ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಸಂಪೂರ್ಣ ಒಳ ಮೀಸಲಾತಿ ಹೋರಾಟಕ್ಕೆ ಮುನ್ನುಡಿ ಬರೆಯುವಂತೆ ಮನವಿ ಮಾಡಿದರು.

ಈ ವೇಳೆ ಡಾ.ಬಾಬು ಜಗಜೀವನರಾಂ ಜನ ಕಲ್ಯಾಣ ಸಂಘದ ಉಪಾಧ್ಯಕ್ಷ ಸಿದ್ದನಹುಂಡಿ ಗೋವಿಂದರಾಜು, ಕೇತಹಳ್ಳಿ ಕೆ.ಸಿ.ಲಿಂಗರಾಜು, ಮಂಗಿಪಚ್ಚನಹುಂಡಿ ನಾಗಯ್ಯ, ಪ್ರಧಾನ ಕಾರ್ಯದರ್ಶಿ ಹೊಸಹಳ್ಳಿ ಮಾದೇಶ್, ಸದಸ್ಯರಾದ ಸ್ವಾಮಿ, ನಾಗೇಂದ್ರ, ಶಿವರಾಜು, ಕುಮಾರ್, ಮಹ ದೇವು, ಎನ್.ಡಿ.ರಾಚಪ್ಪ, ಬಿ.ರಾಚಯ್ಯ ಹಾಜರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಪ್ರಜಾಪ್ರಭುತ್ವ, ಸಂವಿಧಾನದ ಉಳಿವಿಗೆ ಯೋಗ್ಯರ ಆಯ್ಕೆ ಮಾಡಬೇಕು

ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಕರೆ

ಮೈಸೂರು, ಅ.10(ಎಂಕೆ)– ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೂ ಸೋತು, ಪತ್ರಿಕಾರಂಗ ದಾರಿತಪ್ಪಿರುವ ಕಾಲಘಟ್ಟದಲ್ಲಿ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಉಳಿಯಬೇಕಾದರೆ ಚುನಾವಣೆಗಳಲ್ಲಿ ಯೋಗ್ಯರನ್ನು ಆಯ್ಕೆ ಮಾಡಬೇಕು ಎಂದು ಹಿರಿಯ ನಟ, ರಾಜಕಾರಣಿ ಮುಖ್ಯಮಂತ್ರಿ ಚಂದ್ರು ಕರೆ ನೀಡಿದರು.

ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ದಾರಿ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ' ಕುರಿತ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅನ್ನದಾನ, ರಕ್ತದಾನ ಸೇರಿದಂತೆ ಇನ್ನಿತರೆ ದಾನಗಳಿಗಿಂಲೂ ಶ್ರೇಷ್ಠ ದಾನವೇ 'ಮತದಾನ'ವಾಗಿದ್ದು, ಮತದಾನ ಮಾಡುವಾಗ ಕುಟುಂಬ ರಾಜಕಾರಣ, ಜಾತಿ ಮತ್ತು ಧರ್ಮ ರಾಜಕಾರಣವನ್ನು ಬಿಟ್ಟು ದೇಶ ಹಾಗೂ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಜವಾಬ್ದಾರಿಯಿಂದ ಮತದಾನ ಮಾಡುವಂತೆ ಎಚ್ಚರಿಸಿದರು.

ಸ್ಥಳೀಯ ಸಂಸ್ಥೆಗಳಿಂದ ಹಿಡಿದು ವಿಧಾನಸಭೆ, ಲೋಕಸಭೆವರೆಗೆ ಯೋಗ್ಯರೇ ಆಯ್ಕೆಯಾಗಬೇಕು. ಯಾವುದೇ ರಾಜಕೀಯ ಪಕ್ಷವೂ ಯೋಗ್ಯರಿಗೆ ಟಿಕೆಟ್ ನೀಡಲಿಲ್ಲ ಎಂದರೆ ಸ್ಥಳೀಯರೇ ಉತ್ತಮ ಅಭ್ಯರ್ಥಿಯನ್ನು ನಿಲ್ಲಿಸಿ, ಗೆಲ್ಲಿಸಬೇಕು. ಮತದಾನ ಕಡ್ಡಾಯ ಮಾಡಬೇಕು. ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸಬೇಕು. ಯಾವುದೇ ಪ್ರಕರಣದಲ್ಲಿ ಜೈಲಿಗೆ ಹೋಗಿ ಜಾಮೀನಿನ ಮೇಲೆ ಆಚೆ ಬಂದವರನ್ನು ಹಾರ–ತುರಾಯಿ ಹಾಕಿ ಸ್ವಾಗತಿಸಬಾರದು ಎಂದು ಸಲಹೆ ನೀಡಿದರು.



ಮೈಸೂರಿನ ಯುವರಾಜ ಕಾಲೇಜಿನಲ್ಲಿ ಆಯೋಜಿಸಿದ್ದ 'ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ' ಕುರಿತ ಸಂವಾದ ಕಾರ್ಯಕ್ರಮವನ್ನು ಹಿರಿಯ ನಟ, ರಾಜಕಾರಣಿ ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿದರು.

12ನೇ ಶತಮಾನದಲ್ಲಿ ಬಸವಣ್ಣನವರ ಅನುಭವ ಮಂಟಪವೇ ಇಂದಿನ ಸಂಸತ್ತು ಎಂದು ಹೇಳುತ್ತೇವೆ. 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ, ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ. ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ'... ಎಂಬ ಬಸವಣ್ಣನವರ ವಚನದ ಸಾರವನ್ನು ಅನುಸರಿಸಿದ್ದರೆ ಯಾವುದೇ ಸಮಸ್ಯೆ ಎದುರಾಗುತ್ತಿರಲಿಲ್ಲ. ಈಗ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರ ನಡೆಯುತ್ತಿದೆ. ಇಡಿ, ಸಿಬಿಐ, ಚುನಾವಣಾ ಆಯೋಗದ ದುರುಪಯೋಗ ನಡೆಯುತ್ತಿದೆ. ಎಲ್ಲಾ ಪಕ್ಷಗಳಲ್ಲೂ ಕುಟುಂಬ ರಾಜಕಾರಣ ನಡೆಯುತ್ತಿದ್ದು, ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ 180ಕ್ಕೂ ಹೆಚ್ಚು ಕುಟುಂಬ ರಾಜಕಾರಣ, ಶ್ರೀಮಂತ ರಾಜಕಾರಣದಿಂದ ಕೂಡಿದೆ. 50 ಕೋಟಿಗಿಂತ ಹೆಚ್ಚಿನ ದುಡ್ಡು ಇದ್ದರೆ ಮಾತ್ರ ಚುನಾವಣೆಗೆ ನಿಲ್ಲಲು ಸಾಧ್ಯ ಎಂದು ವಿಷಾಧಿಸಿದರು.

ಸಿಜೆಐಗೆ ಶೂ ಎಸೆತ; ಸುಮೊಟೋ ಪ್ರಕರಣ ದಾಖಲಿಸಿ..

ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರತ್ತ ವಕೀಲ ಕಿಶೋರ್ ಶೂ ಎಸೆತ ಪ್ರಕರಣವನ್ನು ಕ್ಷಮಿಸಬಾರದು. ಈ ಬಗ್ಗೆ ಸುಮೊಟೋ ಪ್ರಕರಣ ದಾಖಲಿಸಿಕೊಂಡು ಆರೋಪಿಗೆ ಶಿಕ್ಷೆ ವಿಧಿಸಬೇಕು. ಅವನಿಗೆ, ಅವನ ಕೇಸ್‌ಗೆ ಅಥವಾ ನ್ಯಾಯಕ್ಕೆ ಅನ್ಯಾಯವಾಗಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಧರ್ಮಕ್ಕೆ ತೊಂದರೆಯಾಯಿತಂತೆ... ಧರ್ಮಕ್ಕೂ–ಕೋರ್ಟ್‌ಗೂ ಏನೂ ಸಂಬಂಧ.

– ಮುಖ್ಯಮಂತ್ರಿ ಚಂದ್ರು, ಹಿರಿಯ ನಟ, ರಾಜಕಾರಣಿ

ವರ್ಣ ವ್ಯವಸ್ಥೆಯಿಂದ ಜಾತಿಗಳ ಸೃಷ್ಟಿ: ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಿಂದಲೇ ಜಾತಿ ಶುರುವಾಗಿದ್ದು. ಬರೀ ಜಾತಿಯಷ್ಟೇ ಅಲ್ಲದೆ ಸಾವಿರಾರು ಉಪಜಾತಿಗಳು ಸೃಷ್ಟಿಯಾದವು. ಬ್ರಾಹ್ಮಣರಲ್ಲೇ 600 ಜಾತಿಗಳಿವೆ. ಇಂತಹ ದೇಶವನ್ನು ಯಾವುದಾದರೂ ಒಂದು ಧರ್ಮ ಕಟ್ಟಲು ಸಾಧ್ಯವಿದೆಯೇ... ಭಾಷೆಯಿಂದ ಕಟ್ಟಲು ಸಾಧ್ಯವಿದೆಯೇ... ಸಂವಿಧಾನದಿಂದ ಮಾತ್ರವೇ ದೇಶವನ್ನು ಕಟ್ಟಲು ಸಾಧ್ಯ ಹಾಗಾಗಿ ಮನುಷ್ಯ ಮನುಷ್ಯನಾಗಿ ಬದುಕಬೇಕಿದೆ ಎಂದರು.

ಬಿಗ್‌ಬಾಸ್‌ನಲ್ಲಿ ರಾಜಕಾರಣ ಬೇಕಿರಲಿಲ್ಲ...

ಬಿಗ್‌ಬಾಸ್ ಬಂದ್ ಮಾಡುವ ವಿಚಾರದಲ್ಲಿ ರಾಜಕಾರಣ ಬೇಕಿರಲಿಲ್ಲ. ಪರಿಸರ ನಿಯಮಗಳನ್ನು ಉಲ್ಲಂಘಿಸಿದ್ದರೆ ಆ ಸ್ಟುಡಿಯೋ ಮಾಲೀಕನ ವಿರುದ್ಧ ಕ್ರಮ ಜರುಗಿಸಬೇಕೆ ಹೊರತು ಇನ್ನಾರದೋ ನಟ್ಟು–ಬೋಲ್ಟು ಟೈಟ್ ಮಾಡಲು ಹೋಗಬಾರದಿತ್ತು ಎಂದು ನಟ ಮುಖ್ಯಮಂತ್ರಿ ಚಂದ್ರು ಮಾರ್ಮಿಕವಾಗಿ ನುಡಿದರು.

ಜಾತಿ ಗಣತಿಗೆ ವಿರೋಧ ಸರಿಯಲ್ಲ: ದೇಶದಲ್ಲಿ ಸಾವಿರಾರು ಜಾತಿಗಳಿವೆ. ಹೀಗಿರುವಾಗ ಸಮಾನತೆ ತರಬೇಕಾದರೆ ಯಾವ್ಯಾವ ಜಾತಿಯವರು ಎಷ್ಟೆಷ್ಟು ಇದ್ದಾರೆ ಎಂಬುದನ್ನು ಪತ್ತೆ ಮಾಡಿ, ಅದರ ಪ್ರಕಾರ ಸೌಲಭ್ಯ ಕಲ್ಪಿಸಬೇಕಾಗಿದೆ. ಹೀಗಾಗಿ ಜಾತಿ ಗಣತಿಯನ್ನು ವಿರೋಧಿಸುವುದು ಸರಿಯಲ್ಲ ಎಂದು ಹೇಳಿದರು.

ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಎಸ್.ಮಹದೇವಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ವಕೀಲೆ ಎಂ.ಎನ್.ಸುಮನಾ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಶಂಕರ್ ಎಂ. ಹುಯಿಲಾಳು, ಕಾಲೇಜು ಆಡಳಿತಾಧಿಕಾರಿ ಪ್ರೊ.ಕೆ.ಅಜಯ್ ಕುಮಾರ್, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಡಿ. ಪರಶುರಾಮ, ದಾರಿ ಫೌಂಡೇಷನ್ ಅಧ್ಯಕ್ಷ ಎಲ್. ರಂಗಯ್ಯ, ಕಾರ್ಯದರ್ಶಿ ತಗಡೂರು ವೀರೇಶ್‌ಕುಮಾರ್ ಮಹಾಮನೆ, ಖಜಾಂಚಿ ವಿಶ್ವನಾಥ್ ಕುಲಕರ್ಣಿ, ಸಂಚಾಲಕ ಪ್ರಭಾಕರ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
–	–
ವುಡ್‌ಲ್ಯಾಂಡ್ಸ್	(ದೂ: 2422871)
–	–
ಬಾಲಾಜಿ	(ದೂ: 2497199)
ಸೈಯಾರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
–	–
ಗಾಯಿತ್ರಿ	
–	–
ರಾಜಕಮಲ್	
ಇಡ್ಲಿ ಕಡಾಯಿ (ತ)	4 ಪ್ರದರ್ಶನಗಳು
ಸಂಗಂ	
–	–
ಲಿಡೋ	
–	–
ತಿಬ್ಬಾದೇವಿ	
–	–
ಪ್ರಭಾ	
ಏಳುಮಲೈ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಬೆ.9.45ಕ್ಕೆ, ಮ.1.10ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸುನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ (ಹಿಂ): ಸಂ.4.30ಕ್ಕೆ.
ಸ್ಕ್ರೀನ್ 2	ತ್ರೋನ್ ಏರ್ಸ್ (ಇಂ): ಮ.1.35ಕ್ಕೆ, ರಾ.7.30ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ.4.05ಕ್ಕೆ, ರಾವಣ ಪ್ರಭು (ಮ): ರಾ.10.05ಕ್ಕೆ.
ಸ್ಕ್ರೀನ್ 3	ಕಾಂತಾರ ಚಾಪ್ಟರ್ 1(ಕ): ಬೆ.10.05ಕ್ಕೆ, ಮ.1.25ಕ್ಕೆ, ಸಂ.4.45ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಫುಟ್‌ಪಾತ್‌ನಲ್ಲಿ ಬಾಯ್ತೆರೆದ ಚೇಂಬರ್; ಕಾಲಿಟ್ಟರೆ ಅನಾಹುತ ಗ್ಯಾರಂಟಿ



ಗನ್‌ಹೌಸ್ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಫುಟ್‌ಪಾತ್‌ನಲ್ಲಿ ಚೇಂಬರ್ ಟೈಲ್ಸ್ ಕುಸಿದು ಅಪಾಯಕಾರಿ ಗುಂಡಿ ಉಂಟಾಗಿರುವುದು.

ಮೈಸೂರು,ಅ.10(ಪಿಎಂ)– ಫುಟ್‌ಪಾತ್‌ನಲ್ಲಿ ಚೇಂಬರ್ ಮೇಲಿದ್ದ ಟೈಲ್ಸ್‌ಗಳು ಕುಸಿದು ಹಳ್ಳ ನಿರ್ಮಾಣವಾಗಿದ್ದು, ಇಲ್ಲಿ ಸಾಗುವವರು ಮೈಮರೆತರೆ ಅಪಾಯ ತಪ್ಪಿದ್ದಲ್ಲ. ಮೈಸೂರಿನ ಹೃದಯಭಾಗದಲ್ಲೇ ಇಂತಹ ದುಸ್ಥಿತಿ ಇದ್ದು, ಇಲ್ಲಿರುವ ದಸರಾ ವಿದ್ಯುತ್ ದೀಪಾಲಂಕಾರ ನೋಡುತ್ತಾ ಕಣ್ತಪ್ಪಿ ಇಲ್ಲಿ ಕಾಲಿಟ್ಟರೆ ಅನಾಹುತ ಗ್ಯಾರಂಟಿ.

ಇಂತಹ ದುಸ್ಥಿತಿ ಗನ್‌ಹೌಸ್ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಫುಟ್‌ಪಾತ್‌ನಲ್ಲಿ ಇದ್ದು, ಚಾಮರಾಜ ಜೋಡಿ ರಸ್ತೆಯ (ದಸರಾ ವಸ್ತು ಪ್ರದರ್ಶನ ರಸ್ತೆ, ವಿಶ್ವ ಮಾನವ ಉದ್ಯಾನದ ಎದುರು) ಫುಟ್‌ಪಾತ್‌ನಲ್ಲಿ ಹೀಗೆ ಚೇಂಬರ್ ಬಾಯ್ತೆರೆದಿದೆ.

ಗನ್‌ಹೌಸ್ ವೃತ್ತ ಸೇರಿದಂತೆ ಸದರಿ ರಸ್ತೆಯಲ್ಲಿಯೂ ದಸರಾ ದೀಪಾಲಂಕಾರ ಕಂಗೊಳಿಸುತ್ತಿದ್ದು, ಇದನ್ನು ನೋಡಲು ರಾತ್ರಿ ವೇಳೆ ಇಲ್ಲಿ ಜನ ದಟ್ಟಣೆಯೂ ಉಂಟಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಈ ಅವಾಂತರ ಅರಿಯದೇ ಇಲ್ಲಿ ಕಾಲಿಟ್ಟರೆ ಅನಾಹುತಕ್ಕೆ ತುತ್ತಾಗಬೇಕಾಗುತ್ತದೆ. ಹೀಗೆ ಟೈಲ್ಸ್ ಕುಸಿದು ಫುಟ್‌ಪಾತ್ ಚೇಂಬರ್ ಬಾಯ್ತೆರೆದು ಎಷ್ಟೋ ದಿನಗಳೇ ಕಳೆದಿದೆ ಎಂಬುದನ್ನು ಅದನ್ನು ನೋಡಿದ ಯಾರೂ ಬೇಕಾದರೂ ಹೇಳಬಹುದು.


ಅದಾಗ್ಯೂ ಮೈಸೂರು ಮಹಾನಗರ ಪಾಲಿಕೆ ಇದರ ದುರಸ್ತಿಗೆ ತಲೆಕೆಡಿಸಿಕೊಂಡಿಲ್ಲ. ಅಲ್ಲದೆ, ಈ ಚೇಂಬರ್ ಕುಸಿದಿರುವ ಸ್ವಲ್ಪ ದೂರದಲ್ಲಿ ಸಹ ಟೈಲ್ಸ್ ಕಳಚಿ ಹಳ್ಳ ಉಂಟಾಗಿದೆ. ಜೊತೆಗೆ ಅಲ್ಲಲ್ಲಿ ಟೈಲ್ಸ್‌ಗಳು ಕಿತ್ತು ಬಂದಿವೆ. ಇನ್ನಾದರೂ ಮೈಸೂರು ಮಹಾನಗರ ಪಾಲಿಕೆ ದುರಸ್ತಿಗೆ ಕ್ರಮ ವಹಿಸಬೇಕಿದೆ.

ದೈಹಿಕ ಚಟುವಟಿಕೆಗಳ ಮೂಲಕ ಒತ್ತಡ ನಿವಾರಣೆ

ಮೈಸೂರು ವಿವಿ ಜೆನೆಟಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ. ಸುತ್ತೂರು ಮಾಲಿನಿ ಕಿವಿಮಾತು

ಮೈಸೂರು, ಅ.10(ವಿವಿಹೆಚ್)– ನಮ್ಮ ದೈಹಿಕ ಚಟುವಟಿಕೆಗಳಲ್ಲಿನ ಸಕಾರಾತ್ಮಕ ಬದಲಾವಣೆಗಳ ಮೂಲಕ ವೈಯಕ್ತಿಕವಾಗಿ ಒತ್ತಡವನ್ನು ನಿಭಾಯಿಸಬಹುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ. ಸುತ್ತೂರು ಮಾಲಿನಿ ತಿಳಿಸಿದರು.

ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ನಡೆದ ಮಾನಸಿಕ ಒತ್ತಡ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



'ಮಾನಸಿಕ ಒತ್ತಡ' ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ ಸುತ್ತೂರು ಮಾಲಿನಿ ಮಾತನಾಡಿದರು.

ವಿದ್ಯಾರ್ಥಿಗಳು ಪ್ರಸುತ್ತ ದಿನಗಳಲ್ಲಿ ಅವಶ್ಯಕತೆಗಿಂತ ಹೆಚ್ಚು ಒತ್ತಡಗಳಿಗೆ, ಗೊಂದಲಗಳಿಗೆ ಒಳಗಾಗುತ್ತಿದ್ದಾರೆ. ಸಮಾಜದಲ್ಲಿ ಲೈಂಗಿಕ ವಿಷಯವನ್ನು ಮುಕ್ತವಾಗಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಆದರ ಬಗ್ಗೆ ಮಾಹಿತಿ ತಿಳಿದುಕೊಳ್ಳಲು ಬಯಸುವವರನ್ನು ಕೆಟ್ಟ ದೃಷ್ಟಿಯಲ್ಲಿ ನೋಡುವ ಜನ ಹೆಚ್ಚಾಗಿದ್ದಾರೆ. ವಸ್ತು ವಿಷಯಕ್ಕೆ ಮನ್ನಣೆ ಸಿಗುತ್ತಿಲ್ಲ. ಮನುಷ್ಯನು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಮಾನಸಿಕ, ದೈಹಿಕ ಆರೋಗ್ಯ, ಲೈಂಗಿಕ ಆರೋಗ್ಯಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂದರು.

ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸಮಯವನ್ನು ವ್ಯಯ ಮಾಡುತ್ತಾ ಅನಾವಶ್ಯಕ ವಿಷಯಗಳನ್ನು ಆಳವಡಿಸಿಕೊಳ್ಳುತ್ತಾ ಮಾನಸಿಕ ಮತ್ತು ದೈಹಿಕ ನೆಮ್ಮದಿಯನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ ಎಂದು ಬೇಸರಿಸಿದರು.

ವ್ಯಾಯಾಮ, ಸಾತ್ವಿಕ ಆಹಾರ, ಮದ್ಯಪಾನ ಮತ್ತು ತಂಬಾಕು ಸೇವನೆ ಇಲ್ಲದಿದ್ದರೆ ಕಾಯಿಲೆ ಬರುವುದನ್ನು ತಡೆಯಬಹುದು. ಇದು ಮಾನಸಿಕ ಒತ್ತಡವನ್ನು ನಿವಾರಿಸುತ್ತದೆ. ಮಾನಸಿಕ ಅನಾರೋಗ್ಯ, ದೈಹಿಕ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ಬಗ್ಗೆ ಜನರು ಜಾಗೃತಗೊಳ್ಳಬೇಕು ಎಂದು ಸಲಹೆ ನೀಡಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮುಖ್ಯಸ್ಥರಾದ ಡಾ. ಎನ್.ಕೆ.ಲೋಲಾಕ್ಷಿ, ಕೃಷ್ಣಮೂರ್ತಿ ತಲಕಾಡು ಇದ್ದರು.

ನಾಳೆ ಮೈಸೂರಲ್ಲಿ ನಾರಾಯಣ ಗುರುಗಳ ಜಯಂತಿ

ಮೈಸೂರು,ಅ.10(ಜಿಎ)–ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ ಶಾಖೆ, ಬ್ರಹ್ಮಶ್ರೀ ನಾರಾಯಣ ಗುರು ಮಿಷನ್ ಮತ್ತು ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಅ.12ರಂದು ಬೆಳಗ್ಗೆ 8ಗಂಟೆಗೆ ಜೆ.ಕೆ. ಮೈದಾನದ ಮೈಸೂರು ವೈದ್ಯಕೀಯ ಕಾಲೇಜು ಸಭಾಂಗಣದಲ್ಲಿ ನಾರಾಯಣ ಗುರುಗಳ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ ಶಾಖೆ ಅಧ್ಯಕ್ಷ ಜಿ.ರಾಜೇಂದ್ರನ್ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ವಿಖ್ಯಾತಾನಂದ ಸ್ವಾಮೀಜಿ ಉದ್ಘಾಟಿಸುವರು. ಸಚಿವ ಮಧು ಬಂಗಾರಪ್ಪ, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ ಕೆ.ಸುಕುಮಾರನ್, ವಿ.ಕೆ.ಲೋಕೇಶ್, ಎಂ.ಕೆ. ಪೋತರಾಜ್, ಜಿ.ವಿ.ವೆಂಕಪ್ಪ ಇನ್ನಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ನಾರಾಯಣ ಗುರುಗಳ ಜನ್ಮ ದಿನಾಚರಣೆ ಹಿಂದುಳಿದವರು, ಶೋಷಿತರ ಸ್ವಾತಂತ್ರ್ಯ ದಿನಾಚರಣೆ ಎಂದರೆ ತಪ್ಪಾಗಲಾರದು. ಅವರು ಅನಾಚಾರ, ಮೌಢ್ಯಗಳ ವಿರುದ್ಧ ಹೋರಾಟ ನಡೆಸಿದರು. ವಿದ್ಯೆಯಿಂದ ಪ್ರಬುದ್ಧರಾಗಿ ಎಂಬ ಸಂದೇಶ ಸಾರಿದರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮನೋಜ್‌ಕುಮಾರ್, ಸುಕುಮಾರ್, ವಿಜಯಮ್ಮ, ಸಂತೋಷ್‌ರಾಮ್ ಉಪಸ್ಥಿತರಿದ್ದರು.

ಸ್ನಾನದ ಕೋಣೆಯಲ್ಲಿ ಬಿದ್ದು ಹಿರಿಯ ನಟ ಉಮೇಶ್‌ಗೆ ಗಾಯ



ಬೆಂಗಳೂರು, ಅ.10– ಕನ್ನಡ ಚಿತ್ರರಂಗದ ಹಿರಿಯ ಕಲಾವಿದ ಎಂ.ಎಸ್.ಉಮೇಶ್ ಅವರು ಮನೆಯ ಸ್ನಾನದ ಕೋಣೆಯಲ್ಲಿ ಕಾಲು ಜಾರಿ ಬಿದ್ದು ಗಾಯಗೊಂಡಿದ್ದಾರೆ. ಅವರನ್ನು ಮುದ್ದಿನಪಾಳ್ಯದ ಶಾಂತ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸದ್ಯ ಚಿಕಿತ್ಸೆ ನಡೆಯುತ್ತಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಬಾಲನಟನಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಇವರು 350ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ವಿಶೇಷವಾಗಿ ಹಾಸ್ಯಪಾತ್ರಗಳಲ್ಲಿ ಪ್ರೇಕ್ಷಕರ ಮನಗೆದ್ದಿದ್ದಾರೆ. ದಿಗ್ಗಜ ನಟರಾದ ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್, ಪುನೀತ್ ರಾಜ್‌ಕುಮಾರ್, ಶಿವರಾಜ್‌ಕುಮಾರ್ ಸೇರಿದಂತೆ ಹಲವು ನಟರ ಸಿನಿಮಾಗಳಲ್ಲಿ ಅಭಿನಯಿಸಿರುವ ಇವರು, 80ರ ವಯಸ್ಸಿನಲ್ಲೂ ಉತ್ಸಾಹದಿಂದ ನಟಿಸುವ ಮೂಲಕ ಕಿರಿಯರಿಗೆ ಪ್ರೇರಣೆಯಾಗಿದ್ದಾರೆ.

ಅ.17ರಿಂದ ರಾಜ್ಯದಾದ್ಯಂತ 'ಟೈಮ್ ಪಾಸ್' ಬಿಡುಗಡೆ

ಮೈಸೂರು,ಅ.10(ಜಿಎ)–ಇಂದಿನ ಸಮಾಜಕ್ಕೆ ಕನ್ನಡಿ ಹಿಡಿಯುವ ಕಥಾ ಹಂದರ ಹೊಂದಿರುವ 'ಟೈಮ್ ಪಾಸ್' ಚಲನಚಿತ್ರ ಅ.17 ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ನಿರ್ದೇಶಕ ಚೇತನ್ ಜೋಡಿದಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದ ಟೀಸರ್ ಮತ್ತು ಟ್ರೈಲರ್ ಈಗಾಗಲೇ ಬಿಡುಗಡೆಯಾಗಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಉತ್ತಮ ವಿಚಾರ ಇರಿಸಿಕೊಂಡು ಚಿತ್ರ ನಿರ್ಮಿಸಲಾಗಿದೆ. ಮನೋರಂಜನೆಯೇ ಕೇಂದ್ರ ಬಿಂದುವಾಗಿದ್ದು, ಜೊತೆಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಿತ್ರ ಇದಾಗಿದೆ. ಹೀಗಾಗಿ ಮೈಸೂರು ಭಾಗದ ಚಿತ್ರ ಪ್ರೇಮಿಗಳು ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಚಿತ್ರ ತಂಡದ ವೈಷ್ಣವಿ ಸತ್ಯನಾರಾಯಣ್, ರಕ್ಷಾ ರಾಮ್, ಇಮ್ರಾನ್ ಪಾಷ, ಓಂ ಶ್ರೀಯಕ್ಷಿತ್ ಉಪಸ್ಥಿತರಿದ್ದರು.

ಶಾರದಾವಿಲಾಸ ಕಾನೂನು ಕಾಲೇಜಿನಲ್ಲಿ ವಿದ್ಯಾರ್ಥಿ ವೇದಿಕೆ ಉದ್ಘಾಟನೆ



ಮೈಸೂರಿನ ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಕಾನೂನು ಕಾಲೇಜಿನ ವಿದ್ಯಾರ್ಥಿ ವೇದಿಕೆಯನ್ನು ಮೈಸೂರು ಜಿಲ್ಲಾ ಗ್ರಾಹಕರ ವಿವಾದ ಪರಿಹಾರ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಎ.ಕೆ.ನವೀನಕುಮಾರಿ ಉದ್ಘಾಟಿಸಿದರು. ಬೆಂಗಳೂರು ಅರಣ್ಯ ಇಲಾಖೆಯ ಸಂರಕ್ಷಣಾಧಿಕಾರಿ ಡಾ.ಪಳನಿ ಕಾಮತ್, ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಆರ್.ದಿನೇಶ್, ಆಡಳಿತ ಮಂಡಳಿ ಸದಸ್ಯ ಆರ್.ನರಸಿಂಹ, ಕಾಲೇಜಿನ ಡೀನ್ ಪ್ರೊ.ಎ.ಎಂ.ಬೊಳ್ಳಮ್ಮ, ಪ್ರಾಂಶುಪಾಲ ಡಾ.ಬಿ.ಪಿ.ಮಹೇಶ್ ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ



ಮೈಸೂರಿನ ಚಾಮರಾಜ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ನಂ. 25 ಮತ್ತು 26ರ ವ್ಯಾಪ್ತಿಯ ವಿವಿಧ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು,ಅ.10(ಎಂಟಿವೈ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಪಾಲಿಕೆಯ ವಾರ್ಡ್ ನಂ.25 ಮತ್ತು 26ರ ವ್ಯಾಪ್ತಿಯ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಈ ವಾರ್ಡ್‌ಗಳ ವ್ಯಾಪ್ತಿಯಲ್ಲಿ 1.35 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸಲು ಉದ್ದೇಶಿಸಲಾಗಿದ್ದು, ಈಗಾಗಲೇ ಗುರುತಿಸಲ್ಪಟ್ಟ ವಿವಿಧ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಇಂದು ಬೆಳಗ್ಗೆ ಸ್ಥಳೀಯ ಮುಖಂಡರೊಂದಿಗೆ ಶಾಸಕ ಕೆ.ಹರೀಶ್‌ಗೌಡ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರಿ ಉರ್ದು ಶಾಲೆಯ ಬಳಿ(ಸುನ್ನಿ ಚೌಕ) ಚಾಲನೆ ನೀಡಿದರು.

ಅಭಿವೃದ್ಧಿಯಾಗಲಿರುವ ರಸ್ತೆಗಳು: ವಾರ್ಡ್ ಸಂ. 25ರ ಎಂಕೆಡಿಕೆ ರಸ್ತೆ, ಸಾಡೆ ರಸ್ತೆ 10ನೇ ಕ್ರಾಸ್, ಹಮದರ್ದ್ ಕ್ಲಿನಿಕ್ ರಸ್ತೆ, ಅಂಜುಮಾನ್ ಲೈಬ್ರರಿ ರಸ್ತೆ, ಮುಸ್ತಫಾ ಉನಾನಿ ಫಾರ್ಮಸಿ ರಸ್ತೆಗಳನ್ನು ಸಿಸಿ ರಸ್ತೆಯಾಗಿ ಅಭಿವೃದ್ಧಿ ಮಾಡಲಾಗುತ್ತದೆ. ವಾರ್ಡ್ ಸಂ. 26 ರ ಸಾಡೆ ರಸ್ತೆ ದಕ್ಷಿಣ ಕ್ರಾಸ್, ಕೆ.ಆರ್.ಪಾರ್ಕ್ ಕ್ರಾಸ್ ರಸ್ತೆ, ಸಹಿ ಮಸಜಿದ್ ರಸ್ತೆ, ರೈಲ್ವೆ ಗಲ್ಲಿ, ಸುನ್ನಿಚೌಕ ಶಾಲೆ ಹಿಂಭಾಗ ಹಾಗೂ ಕೆ.ಟಿ. ಸ್ಟ್ರೀಟ್ ಹಿಂಭಾಗದ ರಸ್ತೆಗಳನ್ನು ಸಿಸಿ ರಸ್ತೆಯಾಗಿ ಅಭಿವೃದ್ಧಿ ಮಾಡಲಾಗುತ್ತದೆ.

ಅಭಿವೃದ್ಧಿ ಪರ್ವ: ಇದೇ ವೇಳೆ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಎಲ್ಲಾ ಧರ್ಮ, ಜಾತಿಗಳ ಬಡ ಜನರು ಗೌರವಯುತವಾಗಿ ಬದುಕುವಂತೆ ಮಾಡಿದ್ದಾರೆ. ಪಕ್ಷಾತೀತವಾಗಿ ಗ್ಯಾರಂಟಿ ಯೋಜನೆಯ ಸೌಲಭ್ಯ ಪ್ರತಿ ಮನೆ ಮನೆಗೂ ತಲುಪುತ್ತಿವೆ. ಇದರ ನಡುವೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಂಡಿದೆ. ಮೈಸೂರಿನ ಚಾಮರಾಜ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಣ ತೊಟ್ಟಿದ್ದು, ಹಂತ ಹಂತವಾಗಿ ವಿವಿಧ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದೆ. ವಾರ್ಡ್ ನಂ. 25 ಮತ್ತು 26ರ ವ್ಯಾಪ್ತಿಯಲ್ಲಿ ಇಂದು 1.35 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗುಣಮಟ್ಟದ ಕಾಮಗಾರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ನಿಗದಿತ ಅವಧಿಯೊಳಗೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ. ಆದ್ಯತೆ ಮೇರೆಗೆ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬೇರೆ ಬೇರೆ ವಾರ್ಡ್‌ಗಳಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ದೇವರಾಜ ಬ್ಲಾಕ್ ಕಾಂಗ್ರೆಸ್ ಹಾಗೂ ಜನತಾ ಬಜಾರ್ ಅಧ್ಯಕ್ಷ ಯು.ಎಸ್.ರಮೇಶ್ ರಾಯಪ್ಪ, ಪಾಲಿಕೆ ಮಾಜಿ ಸದಸ್ಯ ನಸ್ರುದ್ದೀನ್ ಬಾಬು, ಮುಖಂಡರಾದ ಬಾಲರಾಜ್, ರೆಹಮಾನ್ ಟಿಪ್ಪು, ಸೈಯದ್ ಮಜೀದ್, ಮುಜು, ಅಜ್ಮಲ್ ಅಜ್ಜು, ಆರೀಫ್, ಸಯ್ಯದ್ ಫಾರೂಕ್, ಅಜ್ಜು, ತಬ್ರೇಜ್, ರಾಚಪ್ಪ, ಗಿರೀಶ್, ರಾಜ ಗಣೇಶ್, ಇಮ್ರಾನ್ ಖಾನ್, ಶಂಕರ್, ಕೃಷ್ಣ, ಕಾಳಪ್ಪ, ವಾಣಿ ವಿಲಾಸದ ಸಹಾಯಕ ಅಭಿಯಂತರರಾದ ಮುಸ್ತಫಾ ಸೇರಿದಂತೆ ಇನ್ನಿತರರ ಮುಖಂಡರು ಪಾಲ್ಗೊಂಡಿದ್ದರು.

ಪರಿಸರ ಸ್ನೇಹಿ, ಸುರಕ್ಷಿತ ದೀಪಾವಳಿ ಆಚರಣೆಗೆ ಕರೆ

ಮೈಸೂರು, ಅ. 10– ಚಾಮುಂಡಿಪುರಂನ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ವಾರ್ಡ್ ನಂಬರ್ 55ರ ಚಾಮುಂಡಿಪುರಂನಲ್ಲಿ ಮನೆಗಳಿಗೆ ದೀಪ ವಿತರಿಸುವ ಮೂಲಕ ಪಟಾಕಿ ತ್ಯಜಿಸಿ, ದೀಪ ಬೆಳಗಿಸಿ ಅಭಿಯಾನವನ್ನು ನಡೆಸಲಾಯಿತು.

ಈ ವೇಳೆ ಅಧ್ಯಕ್ಷ ಸಿ ಸಂದೀಪ್ ಮಾತನಾಡಿ, ಬೆಳಕಿನ ಹಬ್ಬವಾದ ದೀಪಾವಳಿಯು ನಮ್ಮೆಲ್ಲರ ಬಾಳಿನಲ್ಲಿ ಸಂತೋಷ, ಸಮೃದ್ಧಿ ಮತ್ತು ಹೊಸ ಬೆಳಕನ್ನು ತರಲಿ ಎಂದು ಹಾರೈಸುತ್ತೇವೆ. ಈ ಶುಭ ಸಂದರ್ಭದಲ್ಲಿ, ನಾವು ಪರಿಸರ ಮತ್ತು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಒಂದು ಪ್ರಮುಖವಾದ ಮನವಿಯನ್ನು ಮಾಡುತ್ತಿದ್ದೇವೆ.

ಪ್ರತಿ ವರ್ಷ ಪಟಾಕಿಗಳನ್ನು ಸಿಡಿಸುವುದರಿಂದ ವಾಯು ಮಾಲಿನ್ಯ ಮತ್ತು ಶಬ್ದ ಮಾಲಿನ್ಯವು ತೀವ್ರಗತಿಯಲ್ಲಿ ಹೆಚ್ಚಾಗುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಈ ಮಾಲಿನ್ಯವು ಮಕ್ಕಳು, ವೃದ್ಧರು, ಗರ್ಭಿಣಿಯರು ಮತ್ತು ಉಸಿರಾಟದ ಸಮಸ್ಯೆ ಇರುವವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಆದುದರಿಂದ ಈ ಬಾರಿ ನಾವು ಪಟಾಕಿಗಳನ್ನು ಸಾಧ್ಯವಾದಷ್ಟು ತ್ಯಜಿಸಿ, ಹಬ್ಬದ ಮೂಲ ಆಶಯವಾದ ದೀಪಗಳ ಮಹತ್ವವನ್ನು ಸಾರುವ ಮೂಲಕ ದೀಪಾವಳಿಯನ್ನು ಆಚರಿಸಲು ನಿರ್ಧರಿಸಬೇಕು. ಪಟಾಕಿ ಸಿಡಿಸುವ ಬದಲಿಗೆ ಕುಟುಂಬ ಮತ್ತು ಸ್ನೇಹಿತರೊಂದಿಗೆ ಸೇರಿ ಸಾಂಸ್ಕೃತಿಕ ಚಟುವಟಿಕೆಗಳು, ರಂಗೋಲಿ ಸ್ಪರ್ಧೆಗಳು ಅಥವಾ ಸಿಹಿ ಹಂಚುವ ಕಾರ್ಯಕ್ರಮಗಳನ್ನು ಆಯೋಜಿಸಿ, ಹಬ್ಬದ ಸಡಗರವನ್ನು ಹೆಚ್ಚಿಸಿ ಎಂದರು.



ನಗರ ಪಾಲಿಕೆ ಮಾಜಿ ಸದಸ್ಯೆ ವಿದ್ಯಾ ಅರಸ್ ಮಾತನಾಡಿ, ಮನೆ ಮನೆಗೆ ದೀಪ ಬೆಳಗಿಸಿ. ನಿಮ್ಮ ಮನೆಯ ಸುತ್ತಮುತ್ತ ಕಿಟಕಿ, ಬಾಗಿಲು ಮತ್ತು ಹೊರಭಾಗದಲ್ಲಿ ಮಣ್ಣಿನ ದೀಪಗಳು (ಎಣ್ಣೆ ದೀಪಗಳು) ಮತ್ತು ಪರಿಸರ ಸ್ನೇಹಿ ದೀಪಾಲಂಕಾರಗಳನ್ನು ಮಾಡಿ, ನಿಮ್ಮ ಮನೆ ಮತ್ತು ಪರಿಸರವನ್ನು ಪ್ರಕಾಶಮಾನವಾಗಿ ಬೆಳಗಿಸಿ. ದೀಪಗಳು ಕತ್ತಲೆಯನ್ನು ಓಡಿಸಿ, ನಮ್ಮ ಮನಸ್ಸಿನಲ್ಲೂ ಜ್ಞಾನ ಮತ್ತು ಸಕಾರಾತ್ಮಕತೆಯನ್ನು ತುಂಬಬೇಕೆಂದು ತಿಳಿಸಿದರು.

ಸೌಭಾಗ್ಯಮೂರ್ತಿ, ಬಸವ ಬಳಗ ಚಾಮುಂಡಿಪುರಂ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಬಿಜೆಪಿ ನಗರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಕಾರ್ಯದರ್ಶಿ ಡಿ.ಸಿ. ಮಂಜುಳ, ಕೆ.ಆರ್.ಕ್ಷೇತ್ರದ ಕಾರ್ಯದರ್ಶಿ ಲತಾ, ಮುಖಂಡರಾದ ಲಲಿತಾಂಭ, ವಿಜಯ, ಕಾವ್ಯ, ಬಸವರಾಜು, ಪ್ರಭುಶಂಕರ್, ಗಿರೀಶ್, ತಿಪ್ಪೇಶ್, ಕಿರಣ್, ಪವನ್, ನಾಗರಾಜ್, ದೀಪಕ್, ಸಂದೇಶ್, ಧನುಷ್, ಸುರೇಶ್, ಪಾರ್ವತಿ, ಗಾಯತ್ರಿ, ಮಧುರ, ರಿಂಕು ಮತ್ತಿತರರು ಹಾಜರಿದ್ದರು.



ಹೆಸರು ಬದಲಾವಣೆ

ಬಬಿತ ಎಂ.ಈ. ಉ: ಭುವನ ಈ. ಮುದಗನೂರು ಬಿನ್ ಈರಭದ್ರ, ವಾಸ: ನಂ3067/11, ನ್ಯೂ ಕೇಂಬ್ರಿಡ್ಜ್ ಶಾಲೆ ರಸ್ತೆ, 4ನೇ ಕ್ರಾಸ್, ಹೊಸ ಮಾರುತಿ ಬಡಾವಣೆ, ಹುಣಸೂರು ಟೌನ್, ಮೈಸೂರು ಜಿಲ್ಲೆ, ಆದ ನಾನು ನನ್ನ ಹೆಸರನ್ನು ಬಬಿತ ಎಂ.ಈ. ಇಂದ ಭುವನ ಈ ಮುದಗನೂರು ಎಂದು ದಿನಾಂಕ : 08-10-2025 ರಂದು ಶ್ರೀ ವೀರೇಶ್ ರಾವ್ ಬೋಬಡೆ, ವಕೀಲರು ಮತ್ತು ನೋಟರಿ, ಗೋಕುಲ ರಸ್ತೆ, ಹುಣಸೂರು ರವರ ಸಮಕ್ಷಮ ಬದಲಾಯಿಸಿಕೊಂಡಿರುತ್ತೇನೆ

ಸಹಿ/– ಭುವನ ಈ ಮುದಗನೂರು

FOR SALE

COMMERCIAL BUILDING
3335 Sq.ft
@ AGRAHARA
Call: - 95914 08910

WANTED SPACE

Required for a Sr. Family Physician at Running Poly Clinic/ Diagnostic Center.
Location: In and around Kuvempunagar / Sharada Devi Nagar
Call: +91 9448005985 +91 7483075042

HOUSE & PLOTS FOR SALE

30x40, 3 BHK East facing Semi furnished Duplex House & plots for sale in Srirampura & 3rd Stage Vijayanagar.
Call : 95357 18132 / 63642 04222

69 projects – Designing your Dreams | Vee2 Developers

MUDA APPROVED
Khata Ready
SHOURYA LAYOUT
ADJOINING VIJAYANAGAR 4TH STAGE
20X30 Site
₹ 27 LAKHS ONLY
8088-707-707


16ನೇ ವರ್ಷದ ಸವಿನೆನಪು



ನಾಗೇಂದ್ರ (ಗುಂಡು)

ದುಃಖತಪ್ತರು: ಮರ್ಕಿ ಮಹದೇವ, ಸರೋಜ & ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ದಿನಾಂಕ 12–10–2025ರ ಭಾನುವಾರ ಸಂಜೆ 7 ಗಂಟೆಗೆ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ಸ್ವಗೃಹ #532, 20ನೇ ಕ್ರಾಸ್, ಅರವಿಂದ ನಗರ, ಮೈಸೂರಿನಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಎಂ. ನಂಜಯ್ಯ
ನಿಧನ: 01–10–2025

ದುಃಖತಪ್ತರು
ಶ್ರೀ ಮಹದೇವ, ಲತಾ, ಮಕ್ಕಳು, ಅಳಿಯಂದಿರು, ಹೆಣ್ಣುಮಕ್ಕಳು ಹಾಗೂ ಕುಟುಂಬವರ್ಗದವರು

8ನೇ ವರ್ಷದ ಸವಿನೆನಪು



ಶ್ರೀಮತಿ ಶಾರದಮ್ಮ
ಕಂಪಲಾಪುರ
ನಿಧನ : 11–10–2017

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದಿದ್ದು ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು
ಕುಟುಂಬವರ್ಗ, ಕಂಪಲಾಪುರ ಪಿರಿಯಾಪಟ್ಟಣ ತಾಲೂಕು

8ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ನಾಗರತ್ನಮ್ಮ (ವಸಂತ)
ಜನನ: 22–10–1944 | ಮರಣ: 11–10–2017
ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀ ಟಿ.ಎನ್ ಶಿವಮಲ್ಲಪ್ಪ ಮತ್ತು ಕುಟುಂಬವರ್ಗ

ಮೈಸೂರಿನಲ್ಲಿ DTCP APPROVED ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ

1) ಟಿ–ನರಸೀಪುರ ಮುಖ್ಯರಸ್ತೆ,
2) ಹೆಚ್ ಡಿ ಕೋಟೆ ಮುಖ್ಯರಸ್ತೆ,
3) ಕೆಲ್ಲಹಳ್ಳಿ, ಫೆರಿಫೆರಲ್ ರಿಂಗ್ ರಸ್ತೆ,

ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ
ಶ್ರೀ ರಮಣಶ್ರೀ ಡೆವಲಪರ್ಸ್
7411914135

2.5 BHK HOME INTERIORS @ Rs. 2.9 Lakhs* onwards

Home Space Mart
*T&C Apply
91089 23123

SITES FOR SALE

- 40x50 N/W Corner
- 35x40 West Face (Vaishnavi Layout)
- 30x40 South Face (Saanvi Layout)

RERA Approved Form No.3
Near Suvarna Layout
Call : 99806 85348

PROPERTIES FOR SALE

Ready for Registration Prime Locations

30x40 Near Vivekananda Circle

43x93 East Facing Ashokapuram Railway Station 100 Mtr Near Bedarakanappa Temple.

40x55 NF Srirampura, Residence House Good Interior Design

(Brokers Excuse)
9008111454

ಮೈಸೂರು ಮಿತ್ರ ಓದುಗರ ಗಮನಕ್ಕೆ

46

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಜೆಮಿನಿ ಸರ್ಕಸ್

ಜನ ಸಾಗರ ಹರಿದು ಬರುತ್ತಿದೆ ಮಳೆ ಚಿಂತೆ ಬಿಡಿ!

ಕಾರಂಜಿಕೆರೆ ಬಳಿ, ಮೃಗಾಲಯದ ಹಿಂಭಾಗ, ನಜರ್ ಬಾದ್, ಮೈಸೂರು



ಆಫ್ರಿಕನ್, ಚೈನೀಸ್, ರಷ್ಯನ್, ಇಂಡಿಯನ್ ಕಲಾವಿದರಿಂದ ಸಾಹಸಗಳು, ರೋಬೋಟ್ ಪ್ರಾಣಿಗಳೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಚಂದ.

ಪ್ರವೇಶ ದರ:
Rs. 150/-, Rs. 250/-
Rs. 350/- & Rs. 400/-

ದಿನ 3 ಆಟಗಳು–1ಕ್ಕೆ, 4ಕ್ಕೆ, 7ಕ್ಕೆ

ಮುಂಗಡ ಬುಕ್ಕಿಂಗ್ ಸಂಪರ್ಕಿಸಿ: 79070-89704

SITES FOR SALE IN MYSURU

Ready to register sites for sale in Bannur Road, Bogadi Road and Mahadevapura Road, KRS Road and Sathagalli
20x30, 30x40, 30x50 & 40x60
RERA APPROVED & BANK LOAN AVAILABLE
8310839079

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ನರಸಮ್ಮ ರವರು
(ಲೇ|| ಶ್ರೀ ರಂಗಯ್ಯರವರ ಧರ್ಮಪತ್ನಿ)
ನಿಧನ: 01-10-2025

ಇವರು ದಿನಾಂಕ 01–10–2025ನೇ ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ:11–10–2025ನೇ ಶನಿವಾರ ಬೆಳಗ್ಗೆ 11.00 ಗಂಟೆಗೆ ಶ್ರೀ ಮರುಳೇಶ್ವರ ದೇವಸ್ಥಾನ ಶಾಂತಿಧಾಮ ಆವರಣ, ಕಾವೇರಿ ಶಾಲೆ ಎದುರು, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ತಾವುಗಳು ಆಗಮಿಸಿ ಮೃತರ ಆತ್ಮಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ಭೋಜನ: ಮಧ್ಯಾಹ್ನ 12.30ಕ್ಕೆ

ದುಃಖತಪ್ತರು
ಶ್ರೀಮತಿ ಅನುಸೂಯ ಬಿ.ಟಿ ಮತ್ತು ಶ್ರೀ ಶ್ರೀನಿವಾಸ ಆರ್
ಶ್ರೀಮತಿ ಶೋಭ ಮತ್ತು ಶ್ರೀ ಹೇಮಂತ್‌ಕುಮಾರ್
ಶ್ರೀ ದೀಪಕ್, ಚಿ|| ಕಾರ್ತಿಕ್ ಹಾಗೂ ಕುಟುಂಬವರ್ಗದವರು, ಕೆ.ಜಿ ಕೊಪ್ಪಲು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎಂ.ವಿ. ನಾಗೇಶೇಗೌಡರು

ಹಾರೋಹಳ್ಳಿ (ಮೆಲ್ಲಹಳ್ಳಿ) ಮಂಡಲ ಪಂಚಾಯ್ತಿ ಮಾಜಿ ಪ್ರಧಾನರು ಹಾಗೂ ಶ್ರೀ ಲಕ್ಷ್ಮೀವೆಂಕಟೇಶ್ವರ ರೈಸ್ ಮಿಲ್ ಮಾಲೀಕರು, ಮೆಲ್ಲಹಳ್ಳಿ

ಮೈಸೂರು ತಾಲ್ಲೂಕು, ವರುಣ ಹೋಬಳಿ, ಮೆಲ್ಲಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಅಂಗಮ್ಮ ಉ|| ಸಣ್ಣಮ್ಮ ಮಾಡುವ ವಿಜ್ಞಾಪನೆಗಳು (ಲೇಟ್ ದೊಡ್ಡನಿಂಗಮ್ಮ ಮತ್ತು ಲೇಟ್ ಮೊಣ್ಣಯ್ಯನ ವೆಂಕಟೇಗೌಡ ಉ|| ಕರೀಗೌಡರ ಕುಟುಂಬದವರು) ನನ್ನ ಪೂಜ್ಯ ಪತಿಯವರಾದ ಶ್ರೀ ಎಂ.ವಿ. ನಾಗೇಶೇಗೌಡರು ದಿನಾಂಕ 02–10–2025ರ ಗುರುವಾರ ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 12–10–2025 ಭಾನುವಾರ ಬೆಳಗ್ಗೆ 11 ಗಂಟೆಗೆ ನಮ್ಮ ಸ್ವಗೃಹ ಮೆಲ್ಲಹಳ್ಳಿಯಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೆ ವೈಯಕ್ತಿಕ ಆಹ್ವಾನ ಎಂದು ಭಾವಿಸಿ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ಪ್ರಾರ್ಥಿಸುತ್ತೇವೆ.

ಹರಿಕಥೆ : ಬೆಳಗ್ಗೆ 12–00ಕ್ಕೆ ಅರಳಿಕಟ್ಟೆ ಮಲ್ಲಾರಾಧ್ಯರು ಮತ್ತು ತಂಡದವರಿಂದ

ಇಂತಿ ದುಃಖತಪ್ತರು :
ಶ್ರೀಮತಿ ಅಂಗಮ್ಮ ನಾಗೇಶೇಗೌಡರು,
ಶ್ರೀಮತಿ ಎಂ.ಎನ್. ಜಯಲಕ್ಷ್ಮೀ ಮತ್ತು ಶ್ರೀ ಬಿ. ನಾರಾಯಣ
ಶ್ರೀಮತಿ ವಿ. ರೇಣುಕಾ ಮತ್ತು ಶ್ರೀ ಮೆಲ್ಲಹಳ್ಳಿ ಮಹದೇವಸ್ವಾಮಿರವರು
ಎಂ.ಡಿ.ಸಿ.ಸಿ. ಬ್ಯಾಂಕ್, ಮಾಜಿ ನಿರ್ದೇಶಕರು, ಮೈಸೂರು
ಶ್ರೀಮತಿ ಗಿರಿಜಾ ಮತ್ತು ಶ್ರೀ ಎಂ.ಎನ್.ರಾಮಣ್ಣ
ಶ್ರೀಮತಿ ಸೌಮ್ಯ ಮತ್ತು ಶ್ರೀ ಎಂ.ಎನ್. ನಾಗರಾಜು
ಶ್ರೀಮತಿ ಶ್ರುತಿ ಮತ್ತು ಶ್ರೀ ಎಂ.ಎನ್. ವೆಂಕಟೇಶ್
ಶ್ರೀಮತಿ ಮಂಜುಳ ಮತ್ತು ಶ್ರೀ ಎಂ.ಎನ್. ಶ್ರೀಧರ್, ವಕೀಲರು
ಶ್ರೀಮತಿ ಅಂಜಲಿ ಎನ್. ಮತ್ತು ಶ್ರೀ ಎಂ.ಎನ್. ಲಕ್ಷ್ಮೀಶ
ಶ್ರೀಮತಿ ಸಹನ ಎನ್. ಮತ್ತು ಎಂ.ಎನ್. ಪ್ರಸನ್ನಕುಮಾರ್ ಮೊ: 9880462996

ಭೋಜನ : ಮಧ್ಯಾಹ್ನ 1:00 ಗಂಟೆಗೆ ಮೆಲ್ಲಹಳ್ಳಿಯ ಸ್ವಗೃಹದಲ್ಲಿ

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ನಂ.ಸಿಎ–15:17, ಮೊದಲನೇ ಮಹಡಿ, ಅಂಜನಾದ್ರಿ ಮುಖ್ಯರಸ್ತೆ, 2ನೇ ಫೇಸ್, 4ನೇ ಹಂತ, ವಿಜಯನಗರ, ಮೈಸೂರು–32
ದೂರವಾಣಿ ಸಂಖ್ಯೆ:0821-2543003. ಇ–ಮೇಲ್ ವಿಳಾಸ:dcpumysore@gmail.com

ಸಂಖ್ಯೆ:ಜಿಮರಘಮೈ/ಪತ್ರಿಕಾ.ಪ್ರಕಟಣೆ/2025–26/ 371 ದಿನಾಂಕ:09.10.2025


ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಬಾಲನ್ಯಾಯ ಕಾಯ್ದೆ 2015ರ ಪ್ರಕಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೈಸೂರು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪಾಲನೆ, ಪೋಷಣೆಗೆಂದು ದಾಖಲಾಗಿರುವ ಮಕ್ಕಳ ಪಾಲಕರು/ಪೋಷಕರು ಪತ್ತೆಯಾಗಿರುವುದಿಲ್ಲ.

ಆದ್ದರಿಂದ ಸದರಿ ಮಕ್ಕಳ ಪಾಲಕರು/ಪೋಷಕರ ಕಾನೂನು ರೀತಿ ಹಕ್ಕುಳ್ಳವರು ಎಲ್ಲಿದ್ದರೂ 04 ತಿಂಗಳ ಅವಧಿ ಮುಗಿಯುವುದರ ಒಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೈಸೂರು ಇವರನ್ನು ಸಂಪರ್ಕಿಸುವುದು. ಒಂದು ವೇಳೆ ಯಾರು ವಾರಸುದಾರರು ಬಾರದ ಪಕ್ಷದಲ್ಲಿ ಕಾನೂನು ರೀತ್ಯಾ ಕ್ರಮಕೈಗೊಳ್ಳಾಗುವುದು ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೈಸೂರು ಪ್ರಕಟಣೆಯಲ್ಲಿ ತಿಳಿಸಿದೆ.

ಅನುಬಂಧ

ಮಕ್ಕಳ ವಿವರ


ಕ್ರಸಂ	ಮಕ್ಕಳ ಹೆಸರು	ವಯಸ್ಸು	ಮಗುವಿನ ಛಾಯಾಚಿತ್ರ	ಸಂಸ್ಥೆಗೆ ದಾಖಲಾದ ದಿನಾಂಕ	ಮಕ್ಕಳ ಪಾಲನಾ ಸಂಸ್ಥೆಯ ಹೆಸರು
1	ನಿಮಿಷಾಂಭ	12 ವರ್ಷ		30.06.2022	ಓಪನ್ ಆರ್ಮ್ಸ್ ಕ್ರೈಸಿಸ್ ಮೈಸೂರು
2	ಸಂಜನಿ	10 ವರ್ಷ		20.05.2022	
3	ಯಮುನಾ	11 ವರ್ಷ		20.05.2025	
4	ಅಕ್ಷತಾ	16 ವರ್ಷ		20.05.2018	
5	ಶ್ರಾವಣಿ	11 ವರ್ಷ		19.03.2016	ಬಾಪೂಜಿ ಮಕ್ಕಳ ಮನೆ, ಮೈಸೂರು
6	ತುಳಸಿ	10 ವರ್ಷ		24.04.2018	
7	ಹೀನಾಕೌಸರ್	15 ವರ್ಷ		14.09.2020	ಸರ್ಕಾರಿ ಬಾಲಕಿಯರ ಬಾಲಮಂದಿರ, ಮೈಸೂರು
8	ಮಂಗಳಗೌರಿ	12 ವರ್ಷ		16.10.2022	

ಸಹಿ/–
(ಯೋಗೇಶ.ಎನ್.ಟಿ)
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಮೈಸೂರು ಜಿಲ್ಲೆ, ಮೈಸೂರು.

ವಾಸಾಸಂಇ/ಮೈಸೂರು/1068/ಎಸ್‌ಎಸ್‌ಸಿ/2025–26



NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840



Models	GST reductions up to*	Price starting from^	Additional benefits up to*	Models	GST reductions up to*	Price starting from^	Additional benefits up to*
Grand i10 NIOS	₹73 808	₹5 47 278	₹55 000	EXTER	₹89 209	₹5 68 033	₹50 000
VENUE	₹1 23 659	₹7 26 381	₹50 000	i20	₹98 053	₹6 86 865	₹50 000
AURA	₹78 465	₹5 98 320	₹33 000	ALCAZAR	₹75 376	₹14 47 305	₹60 000

HYUNDAI

Additional benefits for CSD and KPKB customers##. Additional scrappage bonus available against valid certificate of deposit~~.

Advaith Hyundai

23 New Car Showrooms | 4 Hyundai Promise Showrooms | 37 State of Art Service Centers across Karnataka

New Car Showrooms

Mysore - Belwadi - 9538970707 | JLB Road - 9538971141 | V V Nagar - 9945773967 | Hassan - 9538971132 | Mandya - 9740060075 | Kodagu: Gonikoppal - 9945774088 | Madikeri - 9538971151 | Kushalnagara 9538971149 | Bangalore: Residency Road - 9845390084 | Marathalli Orr - 9620147012 | Bilekahalli - 7204389797 | Millers Road - 9845516907 | Koramangala - 9606950352 | Bannerghatta Road - 9900086782 | Avalahalli - 9900093058 | Sarjapura - 9620733385 | Chintamani - 8147994737 | Kolar - 9620229885 | Ramanagara - 9620594433 | Tiptur - 7619577050 | Mangalore - 7760962814 | Belthangadi - 7760962819 | Sullia - 7760962813

9606076451

Service:

Mysore - JBL Road | Belvadi | VV Nagar | Hassan | Hassan New | Tiptur | Kodagu - Kushalnagar | Madikeri | Gonikoppal | Bangalore: Mission Road | JC Road | Vasanth Nagar | Rajajinagar | Binnyston | Bannerghatta Road | Outer Ring Road | Banashankari | Hulimavu | Hulimavu New | JP Nagar | ITPL | ITPL NEW | Indiranagar | Sarjapura | Attibele | Avalahalli | Mandur | Uttarahalli | Kolar | Chintamani | Ramanagara | Mandya | Mangalore - Kuntikana | Baikampady (New) | Baikampady | Sulia | Belthangady

9902099944

www.advaithhyundai.com

*Terms & conditions apply. ^Starting price mentioned are for base variants. *Offer valid till 31st October 2025. HMIL reserves the right to alter or discontinue the deals, benefits or offers at its sole discretion at any time. For more details, visit your nearest Hyundai showroom.